Swabhimani Sahakari
Pages : 46 / 20₹

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳುವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸಂಯುಕ್ತ ಸಹಕಾರಿಯ
ರಜತ ಮಹೋತ್ಸವ 2026

Volume - 23
Issue - 01
January - 2026




ಜನವರಿ 15
ಸಂಕ್ರಾಂತಿ



ಜನವರಿ 12
ವಿವೇಕಾನಂದರ
163ನೇ ಜಯಂತಿ

ಜನವರಿ 26
77ನೇ ಗಣರಾಜ್ಯೋತ್ಸವ



ಸೌಹಾರ್ದ ಸಹಕಾರಿಗಳ ಸಂಖ್ಯೆ: 6630

ಸೌಹಾರ್ದ ಇ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ: 1750



**ಜಿ. ನಂಜನಗೌಡ**

**ರಾಜ್ಯದ ಎಲ್ಲ ಸಹಕಾರಿಗಳಿಗೆ ಸಂಯುಕ್ತ ಸಹಕಾರಿ ರಜತ ಮಹೋತ್ಸವ ಹಾಗೂ 26ನೇ ಸೌಹಾರ್ದ ಸಹಕಾರಿ ದಿನಾಚರಣೆಯ, ನೂತನ ವರ್ಷ 2026ರ, ಸ್ವಾಮಿ ವಿವೇಕಾನಂದರ ಜನ್ಮದಿನದ, 77ನೇ ಗಣರಾಜ್ಯೋತ್ಸವ ಹಾಗೂ ಸಂಕ್ರಾಂತಿ ಹಬ್ಬದ ಹಾರ್ದಿಕ ಶುಭಾಶಯಗಳು. ನೂತನ ಕ್ಯಾಲೆಂಡರ ವರ್ಷ ತಮಗೆಲ್ಲ ಶುಭವನ್ನು ತರಲಿ. ತಮ್ಮೆಲ್ಲರ ಜೀವನದಲ್ಲಿ ಸುಖ ಶಾಂತಿ ಹಾಗೂ ನೆಮ್ಮದಿಯನ್ನು ತರಲಿ ಎಂದು ಹಾರೈಸುತ್ತೇನೆ.**

# ರಜತ ಮಹೋತ್ಸವ ಸಮಾರೋಪ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದ ಎಲ್ಲ ಸಹಕಾರಿಗಳಿಗೆ ಸಹಕಾರಿ ಸಂಸ್ಥೆಗಳಿಗೆ ಕೃತಜ್ಞತೆಗಳು.

ರಾಜ್ಯದ ಎಲ್ಲ ಸಹಕಾರಿಗಳಿಗೆ ಸಂಯುಕ್ತ ಸಹಕಾರಿ ರಜತ ಮಹೋತ್ಸವ ಹಾಗೂ 26ನೇ ಸೌಹಾರ್ದ ಸಹಕಾರಿ ದಿನಾಚರಣೆಯ, ನೂತನ ವರ್ಷ 2026ರ, ಸ್ವಾಮಿ ವಿವೇಕಾನಂದರ ಜನ್ಮದಿನದ, 77ನೇ ಗಣರಾಜ್ಯೋತ್ಸವ ಹಾಗೂ ಸಂಕ್ರಾಂತಿ ಹಬ್ಬದ ಹಾರ್ದಿಕ ಶುಭಾಶಯಗಳು. ನೂತನ ಕ್ಯಾಲೆಂಡರ ವರ್ಷ ತಮಗೆಲ್ಲ ಶುಭವನ್ನು ತರಲಿ. ತಮ್ಮೆಲ್ಲರ ಜೀವನದಲ್ಲಿ ಸುಖ ಶಾಂತಿ ಹಾಗೂ ನೆಮ್ಮದಿಯನ್ನು ತರಲಿ ಎಂದು ಹಾರೈಸುತ್ತೇನೆ.

**ಆತ್ಮೀಯರೆ,**

ದಿನಾಂಕ 28 ಡಿಸೆಂಬರ್ 2025ರಂದು ಬೆಳಗಾವಿಯ ಕೆ.ಎಲ್.ಇ ಸಂಸ್ಥೆಯ ಡಾ. ಬಿ.ಎಸ್ ಜಿರಗೆ ಸಭಾಂಗಣದಲ್ಲಿ ಸಹಕಾರಿ ಕಾಯ್ದೆಯ ಹಾಗೂ ಸೌಹಾರ್ದ ಸಹಕಾರಿ ಚಳುವಳಿಯ ರಜತ ಮಹೋತ್ಸವದ ಸಮಾರೋಪವನ್ನು ಅತ್ಯಂತ ಸಂಭ್ರಮದಿಂದ ವೈಭವದಿಂದ, ಅರ್ಥಪೂರ್ಣವಾಗಿ ಆಚರಿಸಲು ಸಹಕರಿಸಿದ ರಾಜ್ಯದ, ವಿಶೇಷವಾಗಿ ಬೆಳಗಾವಿ ವಿಭಾಗದ ಎಲ್ಲ ಸಹಕಾರಿ ಸಂಸ್ಥೆಗಳಿಗೆ ಹಾಗೂ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಪರವಾಗಿ ಕೃತಜ್ಞತೆಗಳನ್ನು ಅತ್ಯಂತ ಸಂತೋಷದಿಂದ ಸಲ್ಲಿಸುತ್ತೇನೆ. ಕಾರ್ಯಕ್ರಮದಲ್ಲಿ ಭಾಗವಹಿಸಲು ಆಗಮಿಸಿದ್ದ ಸಚಿವರು, ಸಂಸದರು, ಶಾಸಕರು, ಎಲ್ಲ ಗಣ್ಯ ಮಾನ್ಯರು, ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರುಗಳು, ಮಾಜಿ ಉಪಾಧ್ಯಕ್ಷರು, ಮಾಜಿ ನಿರ್ದೇಶಕರು, ಮಾಜಿ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ಸಹಕಾರಿಯ ಪ್ರಥಮ ಆಡಳಿತ ಮಂಡಳಿಯವರು, ಸಂಯುಕ್ತ ಸಹಕಾ–ರಿಯ ಪ್ರಾರಂಭವಾಗಲು ಕಾರಣೀಕರ್ತರಾದ ಪ್ರಥಮ 50 ಸದಸ್ಯರಲ್ಲಿ 38 ಸಹಕಾರಿಗಳು ಭಾಗವಹಿಸಲು ಸಮ್ಮತಿಸಿ ನಂತರ 30 ಸಹಕಾರಿಗಳು ಭಾಗವಹಿಸಿ ಸಂಯುಕ್ತ ಸಹಕಾರಿಯ ರಜತ ಮಹೋತ್ಸವದ ಸಮಾರೋಪ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು ಎಲ್ಲಕ್ಕಿಂತ ಮೇಲಾಗಿ 4880 ಕ್ಕಿಂತಲೂ ಹೆಚ್ಚು ಸಹಕಾರಿಗಳು ಭಾಗವಹಿಸಿರುವುದು ಅತ್ಯಂತ ಸಂತೋಷದ ವಿಷಯ.

ಈ ಕಾರ್ಯಕ್ರಮ ಸೌಹಾರ್ದ ಸಹಕಾರಿ ಚಳುವಳಿಯ ಭವಿಷ್ಯದ ದೃಷ್ಠಿಯಿಂದ ಅತ್ಯಂತ ಪರಿಣಾಮಕಾರಿಯಾಗಿದೆ ಎಂದು ನಾನು ಭಾವಿಸಿದ್ದೇನೆ. ಪ್ರಾರಂಭಿಕವಾಗಿ ಪ್ರಾಸ್ತಾವಿಕದಲ್ಲಿ ಪ್ರಸ್ತಾಪಿಸಿದ ವಿಷಯಗಳು ನಂತರದಲ್ಲಿ ಮಾತನಾಡಿದ ಬೆಳಗಾವಿ ಸಂಸದರೂ ಮಾಜಿ ಮುಖ್ಯ ಮಂತ್ರಿಗಳಾದ ಶ್ರೀ ಜಗದೀಶ ಶೆಟ್ಟರರವರು, ಶ್ರೀ ಮನೋಹರ ಮಸ್ಕಿಯವರು, ಶ್ರೀ ಮಹಾಂತೇಶ ಕವಟಗಿಮಠರವರು, ಶ್ರೀ ಪ್ರಭಾಕರ ಕೋರೆಯರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವೆ ಶ್ರೀಮತಿ ಲಕ್ಷ್ಮಿ ಹೆಬ್ಬಾಳಕರರವರು, ಸೌಹಾರ್ದ ಸಹಕಾರಿ ಚಳುವಳಿ ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳು ಸೌಹಾರ್ದ ಸಹಕಾರಿ ಕಾಯ್ದೆಯ ಮೂಲ ಆಶಯಕ್ಕೆ ಧಕ್ಕೆಯಾಗದಂತೆ ಸಹಕಾರಿಗಳ ಸ್ವಾಯತ್ತತೆಗೆ ವ್ಯವಹಾರಿಕ ಸ್ವಾತಂತ್ರಕ್ಕೆ ಧಕ್ಕೆಯಾಗದ ಹಾಗೆ ಸೌಹಾರ್ದ ಸಹಕಾರಿ ಕಾನೂನು ರಚಿಸುವ ಅಗತ್ಯತೆಯನ್ನು ತಿಳಿಸಿರುವುದು. ನಂತರ ಕಾರ್ಯಕ್ರಮ ಉದ್ಘಾಟಕರು ಮತ್ತು ಲೋಕೋಪಯೋಗಿ ಸಚಿವರು ಮತ್ತು ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಶ್ರೀ ಸತೀಶ ಜಾರಕಿಹೊಳಿಯವರು ತಮ್ಮ ಭಾಷಣದಲ್ಲಿ ಸೌಹಾರ್ದ ಸಹಕಾರಿಗಳ ಆಶಯದಂತೆ ಕಾನೂನು ರೂಪಿಸಲಾಗುವುದು. ಸೌಹಾರ್ದ ಸಹಕಾರಿಗಳ ಏಳ್ಗೆಗೆ ಸರಕಾರ ಬದ್ಧವಾಗಿದೆ ಎಂದು ತಿಳಿಸಿರುವುದು. ಶಾಸಕರಾದ, ಮಾಜಿ ಸಹಕಾರ ಸಚಿವ ಹಾಗೂ ಮಾಜಿ ಉಪಮುಖ್ಯಮಂತ್ರಿ ಶ್ರೀ ಲಕ್ಷ್ಮಣ ಸವದಿಯವರು ಮಾತನಾಡಿ ರಾಜ್ಯದ ಸೌಹಾರ್ದ ಸಹಕಾರಿ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಬೆರಳೆಣಿಕೆಯ ಸೌಹಾರ್ದ ಸಹಕಾರಿಗಳು ಈ ಕ್ಷೇತ್ರಕ್ಕೆ ಕೆಟ್ಟ ಹೆಸರು ತರುತ್ತಿದ್ದಾರೆ ಆದ್ದರಿಂದ ಸೌಹಾರ್ದ ಸಹಕಾರಿಗಳು ಆಡಳಿತದಲ್ಲಿ ಪಾರದರ್ಶಕತೆ, ಠೇವಣಿದಾರರ ಹಿತರಕ್ಷಣೆಗೆ ಆದ್ಯತೆ ನೀಡಬೇಕು ಎಂದು ತಿಳಿಸಿರುವುದು ಸೌಹಾರ್ದ ಸಹಕಾರಿಗಳಿಗೆ ವಿಶೇಷವಾಗಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರಿಗೆ ನೆಮ್ಮದಿಯನ್ನು ತಂದಿದೆ ಎಂದು ತಿಳಿಸಿದರು.

ಸಂಯುಕ್ತ ಸಹಕಾರಿ ಈ ರಜತ ಮಹೋತ್ಸವದ ಅಂಗವಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಜೊತೆಗೆ ಸರಕಾರದ ಹಾಗೂ ಜನಪ್ರತಿನಿಧಿಗಳ ಮತ್ತು ಸಹಕಾರಿಗಳ ಗಮನ ಸೆಳೆದು ಈ ಕ್ಷೇತ್ರದ ಪ್ರಗತಿಯನ್ನು ವಿವರಿಸುವ ಕಾರ್ಯನಿರ್ವಹಿಸಿ ಸವಾಲಗಳನ್ನು ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಪ್ರಯತ್ನವನ್ನು ನಿರಂತರವಾಗಿ ಮಾಡುತ್ತಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತ ಮತ್ತೊಮ್ಮೆ ತಮಗೆಲ್ಲ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

**ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ**

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ಮಹಾಂತಪ್ಪ ಎಸ್. ಎಮ್
ಸದಸ್ಯರು

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 18ನೇ ಅಡ್ಡರಸ್ತೆ. ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ : 080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop
**youtube :** https://www.youtube.com/@souharda471

**ಒ ಳ ಪು ಟ ಗ ಳ ಲ್ಲಿ. . .**

ಅಧ್ಯಕ್ಷರ ನುಡಿ.................................. 2
ಸಂಪಾದಕೀಯ.................................. 3
ಜ್ಞಾನ ಜ್ಯೋತಿ.................................. 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ........................................ 05–33
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... ........................................ 34–38
**ಲೇಖನಗಳು :**
ಸಹಕಾರ ಸಂಸ್ಥೆಗಳ ಆಡಳಿತ ಮಂಡಳಿಯ ರಚನೆ ಮಾಡುವಾಗ ವೃತ್ತಿಪರ ನಿರ್ದೇಶಕರು ಮತ್ತು ಕಾರ್ಯನಿರ್ವಾಹಕ ನಿರ್ದೇಶಕರನ್ನು ಸಹಮತದಿಂದ ನೇಮಿಸುವ ಜವಾಬ್ದಾರಿಯನ್ನು ಆಡಳಿತ ಮಂಡಳಿಗೆ ನೀಡಿದೆ.– ಒಂದು ವಿಮರ್ಷೆ .................................. 39–41
ಸರಕಾರ ಮಾರ್ಗದರ್ಶಕನಾಗಲಿ– ನಿಯಂತ್ರಕನಲ್ಲ .................................. 42–43

# ಸಂಪಾದಕೀಯ

## ಸೌಹಾರ್ದ ಸಹಕಾರಿಗಳ ಕಾರ್ಯನಿರ್ವಹಣೆ ಹಾಗೂ ಪ್ರಗತಿ ಬಗ್ಗೆ ಶ್ಲಾಘನೆ, ಆಡಳಿತದಲ್ಲಿ ಪಾರದರ್ಶಕತೆ, ಠೇವಣಿದಾರರ ಹಿತರಕ್ಷಣೆಗೆ ಪ್ರಮುಖ ಆದ್ಯತೆ ನೀಡುವ ಸಲಹೆ, ಸೌಹಾರ್ದ ಸಹಕಾರಿಗಳ ಕರ್ತವ್ಯ ಹಾಗೂ ಜವಾಬ್ದಾರಿಗಳ ನಿರ್ವಹಣೆಗೆ ಒತ್ತು ನೀಡಿರುವ ಸಮಾರೋಪ ಕಾರ್ಯಕ್ರಮ ಅರ್ಥಪೂರ್ಣ : ಸ್ವಾಗತಾರ್ಹ

ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಯ ಹಾಗೂ ಸೌಹಾರ್ದ ಸಹಕಾರಿ ಚಳುವಳಿಯ ರಜತ ಮಹೋತ್ಸವ ಸಮಾರೋಪ ಕಾರ್ಯಕ್ರಮ ಬೆಳಗಾವಿಯಲ್ಲಿ ದಿನಾಂಕ 28–12–2025ರಂದು ನಡೆದಿರುವುದು, ಸಮಾರಂಭದಲ್ಲಿ ಭಾಗವಹಿಸಿದ ಗಣ್ಯಾತಿಗಣ್ಯರು, ಗಣ್ಯರು ಸಹಕಾರಿಗಳು ಸೌಹಾರ್ದ ಸಹಕಾರಿ ಕ್ಷೇತ್ರದ ಸಾಧನೆಗಳನ್ನು ಮೆಚ್ಚಿರುವುದರ ಜೊತೆಗೆ ಈ ಕ್ಷೇತ್ರದಲ್ಲಿ ಕೆಲವೇ ಕೆಲವು ಸೌಹಾರ್ದ ಸಹಕಾರಿಗಳು ಠೇವಣಿದಾರರಿಗೆ ವಂಚನೆಮಾಡುತ್ತ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಕೆಟ್ಟ ಹೆಸರು ತರುತ್ತಿರುವುದರಿಂದ ಕೆಲವು ಸಂದರ್ಭಗಳಲ್ಲಿ ಸರಕಾರದ ಹಸ್ತಕ್ಷೇಪ ಅನಿವಾರ್ಯವಾಗುತ್ತದೆ ಎಂದು ತಿಳಿಸಿ ಅಂತಹ ಸಂದರ್ಭಬಾರದಂತೆ ಸಂಯುಕ್ತ ಸಹಕಾರಿಯ ಕ್ರಮವಿಡಬೇಕು ಎಂದು ಸಂಯುಕ್ತ ಸಹಕಾರಿಗೆ ಹಾಗೂ ಸೌಹಾರ್ದ ಸಹಕಾರಿಗಳಿಗೆ ಎಚ್ಚರಿಕೆಯ ಕರೆಯನ್ನು ನೀಡಿರುವುದು ಸ್ವಾಗತಾರ್ಹ.

ಈ ಸಮಾರೋಪ ಸಮಾರಂಭ ಸಂಯುಕ್ತ ಸಹಕಾರಿಗೆ ಹಾಗೂ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಅವರ ಕರ್ತವ್ಯ ಹಾಗೂ ಜವಾಬ್ದಾರಿಯ ಅರಿತುಕೊಂಡು ಕಾರ್ಯನಿರ್ವಹಿಸುವಂತೆ ಸೂಚಿಸಿದಂತಾಗಿದೆ ಎಂದರೆ ತಪ್ಪೇನಿಲ್ಲ. ಸಂಯುಕ್ತ ಸಹಕಾರಿ ವತಿಯಿಂದ ಸೌಹಾರ್ದ ಸಹಕಾರಿ ಕಾಯ್ದೆಯ ತಿದ್ದುಪಡಿಗಳಲ್ಲಿ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗೆ ಇರುವ ಕೆಲವು ಬಾಧಕ ಕಲಂಗಳನ್ನು ಕೈಬಿಡುವಂತೆ ಮನವಿ ಮಾಡಿದೆ. ರಾಜ್ಯದ ಸೌಹಾರ್ದ ಸಹಕಾರಿಗಳಲ್ಲಿ ಈ ಬಗ್ಗೆ ಅರಿವು ಮೂಡಿಸುವ ಕ್ರಮದಿಂದಾಗಿ ಅನೇಕ ಸೌಹಾರ್ದ ಸಹಕಾರಿಗಳು ಜನಪ್ರತಿನಿಧಿಗಳ ಗಮನಸೆಳೆಯುವಂತಾಗಿದೆ. ಜನಪ್ರತಿನಿಧಿಗಳೂ ಸಹ ಸೌಹಾರ್ದ ಸಹಕಾರಿ ಚಳುವಳಿಯ ಬೆಳವಣಿಗೆಯ ಬಗ್ಗೆ ಸಂತೋಷ ವ್ಯಕ್ತಪಡಿಸುವ ಜೊತೆಗೆ ಈಗ ಕಾಯ್ದೆ ತಿದ್ದುಪಡಿಯಲ್ಲಿ ಆಗರುವ ಬಾಧಕಗಳನ್ನು ನಿವಾರಿಸಲು ಕ್ರಮವಿಡುವುದಾಗಿ ತಿಳಿಸಿರುವುದು ನೆಮ್ಮದಿ ತರುವಂತಹದ್ದಾಗಿದೆ.

ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಹಿಂದಿನಕ್ಕಿಂತಲೂ ಹೆಚ್ಚಿನ ಜವಾಬ್ದಾರಿ ಬಂದಿದೆ. ಈ ಜವಾಬ್ದಾರಿಯನ್ನು ಅತ್ಯಂತ ಪರಿಣಾಮಕಾರಿಯಾಗಿ, ಸೌಹಾರ್ದ ಸಹಕಾರಿ ಕಾಯ್ದೆಯ ಆಶಯಕ್ಕನುಗುಣವಾಗಿ ಸಹಕಾರಿಗಳ ಭಾವನೆಗಳಿಗೆ ಅನುಗುಣವಾಗಿ ಸರಕಾರದ ಧೋರಣೆಗಳಿಗೆ ಅನುಗುಣವಾಗಿ ನಿರ್ವಹಿಸಬೇಕಿರುವ ಸವಾಲು. ಇದು ಸೌಹಾರ್ದ ಸಹಕಾರಿ ಕ್ಷೇತ್ರದ ಉಳಿವಿಗೆ ಬೆಳೆಯುವಿಕೆಗೆ ಹಾಗೂ ಪ್ರಗತಿಗೆ ಪೂರಕವಾಗುವ ಕಾರ್ಯಗಳನ್ನೆ ನಿರಂತರ ಸೌಹಾರ್ದ ಸಹಕಾರಿಗಳು ನಿರ್ವಹಿಸಬೇಕು.

ಸೌಹಾರ್ದ ಸಹಕಾರಿಗಳ ಪಾರದರ್ಶಕ ಹಾಗೂ ವೃತ್ತಿಪರ ಆಡಳಿತ ನಿರ್ವಹಣೆಗಾಗಿ ಸಹಕಾ–ರಿಗಳ ಸದಸ್ಯರಿಗೆ ಆಡಳಿತ ಮಂಡಳಿಯವರಿಗೆ ಸಿಬ್ಬಂದಿಯವರಿಗೆ ನಿರಂತರ ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಸದಸ್ಯರಿಗೆ ಇದು ನಮ್ಮ ಸೌಹಾರ್ದ ಸಹಕಾರಿ ಇದು ಬಳೆಯಬೇಕು ಬೆಳೆದರೆ ನಮ್ಮ ಆರ್ಥಿಕ ಅಭಿವೃದ್ಧಿ ಸಾಧ್ಯವಾಗುತ್ತದೆ. ಸಹಕಾರಿ ಸಮುದಾಯದಿಂದ ಆರೋಗ್ಯ, ಶಿಕ್ಷಣ, ಪರಿಸರ ರಕ್ಷಣೆ, ಉದ್ಯೋಗಗಳ ಸೃಷ್ಟಿ, ನಾಯಕತ್ವ ಬೆಳವಣಿಗೆ ಸಾಮಾಜಿಕವಾಗಿ ಅನೇಕ ಕಾರ್ಯಗಳನ್ನು ನಿ್ಹಿಸಲು ಸಾಧ್ಯ ಎಂಬುದನ್ನು ಅವರಿಗ ಮನವರಿಕೆ ಮಾಡಿಕೊಡುವ ಕಾರ್ಯಗಳು ನಡೆಯಬೇಕು ಇದಕ್ಕೆ ನಮ್ಮ ನಿಷ್ಠೆ ಅಗತ್ಯ, ನಮ್ಮ ಪಾಲುಗಾರಿಕೆ ಅಗತ್ಯ ನಮ್ಮ ಪೋಷಣೆ ಅಗತ್ಯ ಎಂಬುವುದನ್ನು ಅವರುಗಳು ಅರಿಯುವಂತೆ ಮಾಡುವುದು ಇಂದಿನ ಅವಶ್ಯಕತೆ ಇದನ್ನು ಎಲ್ಲ ಸೌಹಾರ್ದ ಸಹಕಾರಿಗಳು ಆಸಕ್ತಿಯಿಂದ ನಿರ್ವಹಿಸುತ್ತಾರೆ ಎಂಬ ಭರವಸೆಯನ್ನು ಸಂಯುಕ್ತ ಸಹಕಾರಿಯು ಹೊಂದಿದೆ. ಬನ್ನಿ ಈ ಸಾಧನಾ ಪರ್ವದ ಕೆಲಸಕಾರ್ಯಗಳನ್ನು ಮೆಲುಕು ಹಾಕುತ್ತ ಮುಂಬರುವ ಕಾರ್ಯಗಳಿಗೆ ನಾವೆಲ್ಲ ತೊಡಗಿಸಿಕೊಳ್ಳೋಣ. ಸೌಹಾರ್ದ ಸಹಕಾರಿಯ ಧ್ವಜಾಪತಾಕೆಯನ್ನು ಎತ್ತರಕ್ಕೆ ಕೊಂಡೋಯ್ಯೋಣ.

# ಜ್ಞಾನ ಜ್ಯೋತಿ



– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

## "ವಿಶ್ವಾಸ"

ನನ್ನಲ್ಲಿ ನನಗೆ ವಿಶ್ವಾಸ ಇರುವಂತೆ ನಮ್ಮ ನೆರೆ–ಹೊರೆಯವರಲ್ಲಿ, ಗುರು–ಹಿರಿಯರಲ್ಲಿಯೂ ನಮಗೆ ವಿಶ್ವಾಸ ಇರಬೇಕು. ಬಲ್ಲವರ ಅಥವಾ ನಮ್ಮ ಹಿತೈಷಿಗಳ ಮಾತಿನಲ್ಲಿ ನಮಗೆ ಶ್ರದ್ಧೆ–ವಿಶ್ವಾಸ ಇರಬೇಕು. ಎಲ್ಲವನ್ನೂ ನಾನು ಪರೀಕ್ಷಿಸಿಯೇ ಬದುಕುತ್ತೇನೆ ಎಂದರೆ ಬದುಕುವುದೇ ಕಷ್ಟಕರವಾಗುತ್ತದೆ. ಆದ್ದರಿಂದ ಗುರು–ಹಿರಿಯರ ಉಪದೇಶದಲ್ಲಿ ಶ್ರದ್ಧೆ–ವಿಶ್ವಾಸವನ್ನು ಇಟ್ಟು ನಡೆದರೆ ನಮ್ಮ ಬದುಕು ಭವ್ಯವಾಗುತ್ತದೆ. ದಿವ್ಯವಾಗುತ್ತದೆ. ಇಲ್ಲದಿದ್ದರೆ ನಾವು ಕಷ್ಟ ಕೋಟಲೆಗಳನ್ನು ಎದು–ರಿಸಬೇಕಾಗುತ್ತದೆ. ಇಂದಿನ ವಿಜ್ಞಾನಿಗಳು ಕೂಡಾ ಹಿಂದಿನ ಹಿರಿಯ ವಿಜ್ಞಾನಿಗಳು ಹೇಳಿದ ಮಾತಿನಲ್ಲಿ ನಂಬಿಗೆಯನ್ನಿಟ್ಟು ತಮ್ಮ ವೈಜ್ಞಾನಿಕ ಸಂಶೋಧನೆಯಲ್ಲಿ ಮುಂದುವರೆಯುತ್ತಿದ್ದಾರೆ. ಹಾಗೆಯೇ ನಾವಾದರೂ ಆಧ್ಯಾತ್ಮಿಕ ಹಿರಿಯರಾದ ಸಂತರ ಶರಣರ ಉಪದೇಶದಲ್ಲಿ ನಂಬಿಗೆಯನ್ನಿಟ್ಟು ಸುಂದರ ಜೀವನ ಸಾಗಿಸಬೇಕು.

ಈರ್ವರು ದಂಪತಿಗಳು ಅವರಿಗೆ ಒಬ್ಬನೇ ಒಬ್ಬ ಮಗನಿದ್ದ. ಮಗನನ್ನು ತುಂಬಾ ಪ್ರೀತಿಯಿಂದ ಬೆಳೆಸಿದ್ದರು ಮನೆಯ ಹೊಣೆಗಾ–ರಿಕೆಯನ್ನು ತಂದೆ–ತಾಯಿಗಳೇ ನಿರ್ವಹಿಸುತ್ತಿದ್ದರು. ಇಪ್ಪತ್ತು ವರ್ಷಗಳವರೆಗೆ ದುಡಿದು ತಂದೆಯು ಅಪಾರ ಸಿರಿ–ಸಂಪತ್ತನ್ನು ಗಳಿಸಿಟ್ಟಿದ್ದ. ಮುಪ್ಪಿನ ಕಾಲದಲ್ಲಿ ತಂದೆಗೆ ರೋಗ–ರುಜಿನಗಳು ಕಾಡತೊಡಗಿದವು. ಕೊನೆಗೆ ಒಂದ ದಿವಸ ಮಗನನ್ನು ಕರೆದು ಹೇಳಿದ "ಇನ್ನೂ ಈ ಆಸ್ತಿಗೆಲ್ಲ ನೀನೇ ಒಡೆಯ. ಈ ಪ್ರಪಂಚದಲ್ಲಿ ನೀನು ಸದಾ ಸುಖಿಯಾಗಿ ಇರಬೇಕಾದರೆ ಒಂದು ಕಿವಿಮಾತನ್ನು ಹೇಳುತ್ತೇನೆ. ಕೇಳುತ್ತೀಯಾ? "ಅವಶ್ಯವಾಗಿ ಕೇಳುತ್ತೇನೆ. ಹೇಳಿರಿ ಅಪ್ಪಾಜಿ" ಎಂದು ಮಗನು ಹೇಳಿದ. ತಂದೆ – ನೀನು ಸದಾ ಸಜ್ಜನರ ಸಂಗದಲ್ಲಿಯೇ ಇರಬೇಕು. ದುರ್ಜನರ ಸಂಗದಲ್ಲಿ ಎಂದೂ ಇರಬೇಡ!"– "ಆಗಲಿ, ಅಪ್ಪಾಜಿ ನಾನು ಸದಾ ಸಜ್ಜನರ ಸಂಗದಲ್ಲಿಯೇ ಇರುತ್ತೇನೆ." ಎಂದು ಮಗನು ತಂದೆಗೆ ವಚನ ಕೊಟ್ಟ.

ಬಸವಣ್ಣನವರು ಸಜ್ಜನರ ಸಂಗ ಮಹಿಮೆಯನ್ನು ಕುರಿತು ತಮ್ಮ ಒಂದು ವಚನದಲ್ಲಿ ಹೀಗೆ ಹೇಳುತ್ತಾರೆ :

"ಸಾರ; ಸಜ್ಜನರ ಸಂಗವ ಮಾಡುವುದು;
ದೂರ; ದುರ್ಜನರ ಸಂಗ ಬೇಡವಯ್ಯಾ.
ಆವ ಹಾವಾದಡೇನು? ವಿಷವೊಂದೆ;
ಅಂತವರ ಸಂಗ ಬೇಡವಯ್ಯಾ.
ಅಂತರಂಗ ಶುದ್ಧವಲ್ಲದವರ ಸಂಗ
ಸಿಂಗಿ, ಕಾಳಕೂಟ ವಿಷವೋ, ಕೂಡಲಸಂಗಯ್ಯಾ!"

ದುರ್ಜನರ ಸಂಗವು ಹಾವಿನ ವಿಷದಂತೆ ಭಯಂಕರ, ಆವ ಹಾವಾದರೂ ಅದರಲ್ಲಿ ವಿಷವು ಇದ್ದೇ ಇರುತ್ತದೆ. ಹಾಗೆಯೇ ದುರ್ಜನರು ಯಾರದರೇನು ಅವರಲ್ಲಿ ದುರ್ಗುಣಗಳು ಇದ್ದೇ ಇರುತ್ತವೆ. ಅಂಥವರ ಸಂಗದಲ್ಲಿ ನಾವು ಇರಬಾರದೆಂಬುದೇ ಬಸವಣ್ಣನವರ ಶುಭ ಸಂದೇಶವಾಗಿದೆ.

ಇಂಥ ಬಲ್ಲವರ ಮಾತಿನಲ್ಲಿ ವಿಶ್ವಾಸ ವಿಡುವುದೇ ನಮ್ಮ ಜೀವನದ ಸೌಂದರ್ಯಕ್ಕೆ ಕಾರಣವಾಗುತ್ತದೆ. ಗುರು ಹಿರಿಯರ ಹೇಳಿದ ಮಾತಿನಂತೆ ಒಂದು ವೇಳೆ ನಾವು ನಡೆದುಕೊಳ್ಳದಿದ್ದರೆ ಏನಾಗುತ್ತದೆ. ಎಂಬುದನ್ನೇ ವಾಲ್ಮೀಕಿ ಮಹರ್ಷಿಗಳು ರಾಮಾಯಣದ ಮೂಲಕ ಜಗತ್ತಿಗೆ ಸಂದೇಶವನ್ನಿತ್ತಿದ್ದಾರೆ. ಪುರುಷೋತ್ತಮನಾದ ಶ್ರೀರಾಮಚಂದ್ರನು ಹೇಳಿದಂತೆ ಸೀತಾದೇವಿಯು ಮಾಯಾಮೃಗದ ಆಸೆಯನ್ನು ತೊರೆದಿದ್ದರೆ ರಾಮಾಯಣವೇಕೆ ಆಗುತ್ತಿತ್ತು?

ತಾಯಿಯ ಮಾತಿನಲ್ಲಿ ವಿಶ್ವಾಸವನ್ನಿಟ್ಟು ಮಗು ಮಹಾನ್ ವ್ಯಕ್ತಿಯಾಗಿ ಶಕ್ತಿಯಾಗಿ ಬೆಳೆಯುತ್ತದೆ. ತಾಯಿಯು ತನ್ನ ಮಗುವಿಗೆ ಎಂದೂ ವಿಷವನ್ನು ಉಣಿಸುವುದಿಲ್ಲ. ಅಷ್ಟೇ ಅಲ್ಲ ವಿಷವನ್ನು ಅಮೃತವನ್ನಾಗಿಸುವ ಶಕ್ತಿ ತಾಯಿಯ ಕೈಯಲ್ಲಿದೆ. ಅಂತೆಯೇ ತಾಯಿಯಲ್ಲಿ ಮಗುವಿಗೆ ಅಷ್ಟೊಂದು ವಿಶ್ವಾಸ. ಈ ವಿಶ್ವಾಸ ಮಗುವಿನ ಸರ್ವತೋಮುಖ ಬೆಳವಣಿಗೆಗೆ ಭದ್ರಬುನಾದಿಯಾಗುತ್ತದೆ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

| ದಾವಾ ಪಂಚಾಯ್ತಿ ನ್ಯಾಯಾಲಯ (ಎಬಿಎನ್) | | | | | | |
|---|---|---|---|---|---|---|
| ಕ್ರ.ಸಂ | ವಿವರ | ಬೆಳಗಾವಿ | ಕಲಬುರಗಿ | ಬೆಂಗಳೂರು | ಮೈಸೂರು | ಒಟ್ಟು |
| 1 | ಡಿಸೆಂಬರ್–25ರ ಪ್ರಾರಂಭಿಕ ಬಾಕಿ ಇರುವ ಕಡತಗಳ ಸಂಖ್ಯೆ | 840 | 457 | 419 | 203 | 1919 |
| 2 | ದಾಖಲಾದ ದಾವಾ ಪ್ರಕರಣಗಳ ಸಂಖ್ಯೆ | 182 | 24 | 43 | 13 | 262 |
| 3 | ಇತ್ಯರ್ಥಗೊಂಡ ದಾವಾ ಪ್ರಕರಣಗಳು | 82 | 76 | 55 | 32 | 245 |
| 4 | ವಿಚಾರಣೆ ಹಂತದಲ್ಲಿರುವ ದಾವಾ ಪ್ರಕರಣಗಳು | 940 | 405 | 407 | 184 | 1936 |
| ಡಿಸೆಂಬರ್ 2025ರ ತಿಂಗಳಿನಲ್ಲಿ ದಾಖಲಾದ ದಾವಾ ಪ್ರಕರಣಗಳು 262 ಮತ್ತು ಇತ್ಯರ್ಥಗೊಂಡ ಪ್ರಕರಣಗಳು 245 | | | | | | |
| ಅಮಲ್ಜಾರಿ ವಿಭಾಗ | | | | | | |
| 1 | ದಾಖಲಾದ ಅಮಲ್ಜಾರಿ ಪ್ರಕರಣಗಳ ಸಂಖ್ಯೆ | 7412 | 1318 | 2226 | 781 | 11737 |
| 2 | ಇತ್ಯರ್ಥಗೊಂಡ ಅಮಲ್ಜಾರಿ ಪ್ರಕರಣಗಳು | 1084 | 248 | 548 | 197 | 2077 |
| 3 | ವಿಚಾರಣೆ ಹಂತದಲ್ಲಿರುವ ಅಮಲ್ಜಾರಿ ಪ್ರಕರಣಗಳು | 6328 | 1070 | 1678 | 584 | 9660 |
| ಡಿಸೆಂಬರ್ 2025ರ ತಿಂಗಳಿನಲ್ಲಿ ಒಟ್ಟು 187 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ. | | | | | | |

# ಕುಂದಾನಗರಿ ಬೆಳಗಾವಿಯಲ್ಲಿ ಶ್ರೀ ಎಸ್.ಎಸ್. ಪಾಟೀಲ್ ವೇದಿಕೆಯಲ್ಲಿ ಸಂಭ್ರಮದ, ಸಡಗರದ, ಅರ್ಥಪೂರ್ಣ ರಜತ ಮಹೋತ್ಸವ ಸಮಾರೋಪ ಕಾರ್ಯಕ್ರಮ.




**ಬೆಳಗಾವಿ :** ದಿನಾಂಕ 28.12.2025 ರಂದು ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ಸೌಹಾರ್ದ ಸಹಕಾರಿ ಚಳುವಳಿಯ ರಜತ ಮಹೋತ್ಸವದ ಸಮಾರೋಪ ಕಾರ್ಯಕ್ರಮ ಬೆಳಗಾವಿಯ ಕೆ.ಎಲ್.ಇ. ಸಂಸ್ಥೆಯ ಡಾ. ಬಿ.ಎಸ್ ಜಿರಗೆ ಭವನದಲ್ಲಿ ಅತ್ಯಂತ ಸಂಭ್ರಮ ಹಾಗೂ ಸಡಗರದಿಂದ ನಡೆಯಿತು. ಬೆಳಗಾವಿ ನಗರದೆಲ್ಲೆಡೆ ಸೌಹಾರ್ದ ಸಹಕಾರಿಗಳ ಸಾಗತ ಬ್ಯಾನರ್‌ಗಳು ಸ್ವಾಗತ ಕಟೌಟ್‌ಗಳು ರಾರಾಜಿಸಿ ಸೌಹಾರ್ದ ಸಹಕಾರಿ ಕ್ಷೇತ್ರದ ಅಸ್ತಿತ್ವವನ್ನು ಎತ್ತಿ ತೋರಿಸುವಂತೆದ್ದವು. ಕೆ.ಎಲ್.ಇ ಸಂಸ್ಥೆ ಹಾಗೂ ಸುತ್ತಮುತ್ತಲೆಲ್ಲ ಸೌಹಾರ್ದ ಸಹಕಾರಿಗಳದ್ದೆ ಸಡಗರದ ಓಡಾಟವೇ ಕಾಣುತ್ತಿತ್ತು. ಕಾರ್ಯಕ್ರಮದಲ್ಲಿ ಬೆಳಗಾವಿ ಜಿಲ್ಲೆಯ ಬೆಳಗಾವಿ ಪ್ರಾಂತ್ಯದ ಹಾಗೂ ರಾಜ್ಯದ ಬೇರೆ ಜಿಲ್ಲೆಗಳ 4800 ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿ ಸಮಾರೋಪ ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದರು. ಸಮಾರಂಭದ ವೇದಿಕೆಯನ್ನು ಮಾಜಿ ಸಹಕಾರ ಸಚಿವರಾದ ಶ್ರೀ ಎಸ್.ಎಸ್.ಪಾಟೀಲ್ ವೇದಿಕೆ ಎಂದು ಹೆಸ–ರಿಡಲಾಗಿತ್ತು. ಅಧಿಕೃತ ಕಾರ್ಯಕ್ರಮದ ಮೊದಲು ಶ್ರೀಮತಿ ನಯನಾ ಗಿರೀಗೌಡರ ತಂಡದವರಿಂದ ಸುಗಮ ಸಂಗೀತ ವ್ಯವಸ್ಥೆ ಮಾಡಲಾಗಿತ್ತು.

## ಧ್ವಜಾರೋಹಣ :

ಕಾರ್ಯಕ್ರಮವನ್ನು ಸಪ್ತವರ್ಣದ ಸಹಕಾರಿ ಧ್ವಜಾರೋಹಣದ ಮೂಲಕ ಪ್ರಾರಂಭಿಸಲಾಯಿತು. ಧ್ವಜಾರೋಹಣವನ್ನು ಬೆಳಗಾವಿಯ ಹಾಲಿ ಸಂಸದರು ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಜಗದೀಶ ಶೆಟ್ಟರರವರು ನೆರವೇರಿಸಿದರು.



## ರಾಷ್ಟ್ರೀಯ ಐಕ್ಯತಾ ಪ್ರತಿಜ್ಞೆ :

ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ರವರು ಧ್ವಜಾರೋಹಣದ ನಂತರ ಸಹಕಾರಿಗಳಿಗೆ ರಾಷ್ಟ್ರೀಯ ಐಕ್ಯತಾ ಪ್ರತಿಜ್ಞೆಯನ್ನು ಬೋಧಿಸಿದರು.

## ಸಹಕಾರ ಚಳುವಳಿ ಶ್ರೀ ಸಾಮಾನ್ಯರ ಆರ್ಥಿಕ ಅಭಿವೃದ್ಧಿಯ ಸಾಧನ : ಶ್ರೀ ಜಗದೀಶ ಶೆಟ್ಟರ್, ಮಾನ್ಯ ಸಂಸದರು, ಬೆಳಗಾವಿ ಹಾಗೂ ಮಾಜಿ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ



ಸಹಕಾರ ಚಳುವಳಿ ಹಿಂದಿನ ಹಾಗೇ ಕೇವಲ ಸೇವಾ ಕ್ಷೇತ್ರವಾಗಿ ಉಳಿದಿಲ್ಲ. ಸಹಕಾರ ಸಂಸ್ಥೆಗಳು ಉತ್ತಮ ಆರ್ಥಿಕ ಸಂಸ್ಥೆಗಳಾಗಿ ಬೆಳೆದಿವೆ. ನಮ್ಮ ದೇಶದ ಸಹಕಾರ ಚಳುವಳಿ ಅತ್ಯಂತ ದೊಡ್ಡದಾಗಿ ಬೆಳೆದಿದೆ. ಸಮಾಜದ ಬಹುಶಃ ಎಲ್ಲ ಆಯಾಮಗಳಲ್ಲಿ ತೊಡಗಿಸಿಕೊಂಡಿದೆ ಜನರ ಜೀವನ ಪದ್ಧತಿಯಾಗಿದೆ. ಈ ಸಹಕಾರ ಕ್ಷೇತ್ರವನ್ನು ಅರ್ಥ ವ್ಯವಸ್ಥೆಯ ಮುಖ್ಯ ವಾಹಿನಿಯಲ್ಲಿ ಕಾರ್ಯನಿರ್ವಹಿಸುವಂತೆ ಮಾಡಲು ನಮ್ಮ ಸರಕಾರ ಬದ್ಧವಾಗಿದೆ. ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಸೌಹಾರ್ದ ಸಹಕಾರಿ ಕ್ಷೇತ್ರವು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಠೇವಣಿದಾರರಿಗೆ ಮೋಸವಾಗದಂತೆ ಸೌಹಾರ್ದ ಸಹಕಾರಿಗಳು ಎಚ್ಚರವಹಿಸಿ ಕಾರ್ಯನಿರ್ವಹಿಸಲು ಕರೆ ನೀಡಿದರು. ಸೌಹಾರ್ದ ಸಹಕಾರಿಯ ಈ ರಜತ ಮಹೋತ್ಸವ ಕಾರ್ಯಕ್ರಮಕ್ಕೆ ಶುಭಕೋರಿದರು.

## ಸೌಹಾರ್ದ ಕಾಯ್ದೆಯಡಿ ಮೊದಲು ನೊಂದಣಿಗೊಂಡ 50 ಸಹಕಾರಿಗಳಿಗೆ ಸನ್ಮಾನ.

ನಂತರ ವೇದಿಕೆಯಲ್ಲಿ ಶ್ರೀ ಜಗದೀಶ ಶೆಟ್ಟರರವರು ಹಾಗೂ ಶ್ರೀ ಮಹಾಂತೇಶ ಕವಟಗಿಮಠ ರವರು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು, ಮಾನ್ಯ ಉಪಾಧ್ಯಕ್ಷರು, ಮಾನ್ಯ ಆಡಳಿತ ಮಂಡಳಿ ನಿರ್ದೇಶಕರು ಸೇರಿ ಸಂಯುಕ್ತ ಸಹಕಾರಿಯ ರಚನೆಗೆ ಕಾರಣರಾದ ಪ್ರಥಮ 50 ಸಹಕಾರಿ ಸಂಸ್ಥೆಗಳ ಕಾರ್ಯಕ್ರಮದಲ್ಲಿ ಭಾಗವಹಿಸಿ ಉಪಸ್ಥಿತರಿದ್ದ 33 ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರ ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗೆ ಸನ್ಮಾನಿಸಿದರು.





## ಪ್ರದರ್ಶಿನಿ ಮಳಿಗೆಗಳ ಉದ್ಘಾಟನೆ ಹಾಗೂ ಪುಷ್ಪಾರ್ಚನೆ.

ಕಾರ್ಯಕ್ರಮಕ್ಕೆ ಆಗಮಿಸಿದ ಶ್ರೀ ಸತೀಶ ಜಾರಕಿಹೊಳಿ, ಮಾನ್ಯ ಲೋಕೋಪಯೋಗಿ ಸಚಿವರು ಹಾಗೂ ಬೆಳಗಾವಿ ಜಿಲ್ಲೆಯ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಅಂಗವಿಕಲರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು ಹಾಗೂ ಉಡುಪಿ ಜಿಲ್ಲೆಯ ಉಸ್ತುವಾರಿ ಸಚಿವರು ಪ್ರದರ್ಶಿನಿ ಮಳಿಗೆಗಳ ಉದ್ಘಾಟನೆ ಮಾಡಿದ ನಂತರ ಸಹಕಾರಿ ಪಿತಾಮಹ ಶ್ರೀ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲ್, ಮಹಾತ್ಮ ಗಾಂಧಿಜಿ ಮತ್ತು ಭಾರತಮಾತಾ ಫೋಟೋಗಳಿಗೆ ಪುಷ್ಪಾರ್ಚನೆ ಮಾಡಿದರು.





## ವೇದಿಕೆ ಕಾರ್ಯಕ್ರಮ.



**ಪ್ರಾರ್ಥನೆ :** ಪ್ರಾರ್ಥನೆ ಹಾಗೂ ನಾಡಗೀತೆಯನ್ನು ಶ್ರೀಮತಿ ನಯನಾ ಗಿರಿಗೌಡರ ತಂಡದವರು ನಡೆಸಿಕೊಟ್ಟರು.

**ಸ್ವಾಗತ :** ಸಂಯುಕ್ತ ಸಹಕಾರಿಯ ಮಾಜಿ ಉಪಾಧ್ಯಕ್ಷರು ಬೆಳಗಾವಿಯ ಇಂದಿನ ಕಾರ್ಯಕ್ರಮದ ರೂವಾರಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠರವರು ನೆರವೇರಿಸಿದರು. ಅತಿಥಿ ಗಣ್ಯರನ್ನು, ಸಹಕಾರಿ ಗಣ್ಯ ಮಾನ್ಯರನ್ನು, ಭಾಗವಹಿಸಿದ ಸಹಕಾರಿಗಳ ಪ್ರತಿನಿಧಿಗಳನ್ನು, ಮಾಧ್ಯಮ ಮಿತ್ರರನ್ನು ಪತ್ರಕರ್ತರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವ ಮಾಜಿ ಸಹಕಾರಿ ಸಚಿವರಾದ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯ ರೂವಾರಿಗಳಾದ, ಹಿರಿಯ ಸಹಕಾರಿಗಳಾದ ಶ್ರೀ ಎಸ್.ಎಸ್. ಪಾಟೀಲ್ ರವರು ಭಾಗವಹಿಸಿರುವುದು ನಮ್ಮೆಲ್ಲರಿಗೆ ಉತ್ಸಾಹವನ್ನು ಹೆಚ್ಚಿಸಿದೆ. ಅವರ ಉಪಸ್ಥಿತಿ ಈ ಕಾರ್ಯಕ್ರಮಕ್ಕೆ ಶೋಭೆ ತಂದಿದೆ. ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಪರವಾಗಿ ಶ್ರೀ ಎಸ್.ಎಸ್. ಪಾಟೀಲ ರವರನ್ನು ಸ್ವಾಗತಿಸಿ ಅಭಿನಂದಿಸಿದರು. ಶ್ರೀಯುತರ ಆಶಯದಂತೆ ಈ ಸೌಹಾರ್ದ ಸಹಕಾರಿ ಕ್ಷೇತ್ರ ಸಧೃಡವಾಗಿ ಬೆಳೆಯಲು ಹಾಜರಿದ್ದ ಸೌಹಾರ್ದ ಸಹಕಾರಿಗಳ ಸಹಕಾರವನ್ನು ಕೋರಿದರು.

**ಪ್ರಾಸ್ತಾವಿಕ :** ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ಪ್ರಾಸ್ತಾವಿಕವಾಗಿ ಮಾತನಾಡಿ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಯಾಗಿ 25 ವರ್ಷಗಳು ಕಳೆದಿವೆ. ಅದರಂತೆ ಸೌಹಾರ್ದ ಸಹಕಾರಿ ಚಳುವಳಿಯತ್ತ 25 ವಸಂತಗಳನ್ನು ಯಶಸ್ವಿಯಾಗಿ ಪೂರೈಸಿರುವ ಇಂದು ಈ ರಜತ ಮಹೋತ್ಸವದ ಸಮಾರೋಪ ಕಾರ್ಯಕ್ರಮ ಏರ್ಪಡಿಸಿದೆ. ಸಹಕಾರಿ ಕ್ಷೇತ್ರದಲ್ಲಿ ಅನೇಕ ಮಹತ್ವದ ಸಾಧನೆಗಳನ್ನು ಮೈಲುಗಲ್ಲುಗಳನ್ನು ಹೊಂದಿರುವ ಬೆಳಗಾವಿ ಜಿಲ್ಲೆ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲೂ ಮೇಲ್ಪಂಕ್ತಿಯಲ್ಲಿದೆ. ಬೆಳಗಾವಿ ಜಿಲ್ಲೆಯಲ್ಲಿ ಹಾಗೂ ಬೆಳಗಾವಿ ವಿಭಾಗದಲ್ಲಿ ಹೆಚ್ಚಿನ ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಬೆರಳೆಣಿಕೆಯಷ್ಟು ಸಹಕಾರಿ ಸಂಸ್ಥೆಗಳು ಸ್ವೇಚ್ಚಾಚಾರದಿಂದ ಸದಸ್ಯರಿಗೆ, ಠೇವಣಿದಾರ–



ರಿಗೆ ಮೋಸ ಮಾಡಿರುವ ಪ್ರಸಂಗಗಳಲ್ಲಿ ಅವರ ಮೇಲೆ ಕಾನೂನು ಕ್ರಮ ಜರುಗಿಸಲಾಗುತ್ತಿದೆ. ಇಂತಹ ಘಟನೆಗಳು ಮರುಕಳಿಸದಂತೆ ಸೌಹಾರ್ದ ಸಹಕಾರಿಗಳಿಗೆ ತಿಳುವಳಿಕೆಯನ್ನು ನೀಡಲಾಗುತ್ತಿದೆ. ಸೌಹಾರ್ದ ಸಹಕಾರಿ ಕಾಯ್ದೆಗೆ ಇತ್ತೀಚೆಗೆ ಸರಕಾರ ಕೆಲವು ತಿದ್ದುಪಡಿಗಳನ್ನು ಮಾಡಿರುವುದು ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗೆ ಪೂರಕವಾಗಿರುವುದಿಲ್ಲ. ಸೌಹಾರ್ದ ಸಹಕಾರಿ ಆಶಯವಾಗಿರುವ ಸ್ವಾಯತ್ತತೆಯನ್ನು ಕಡಿಮೆ ಮಾಡಲಾಗಿದೆ. ಸರಕಾರದ ಹಸ್ತಕ್ಷೇಪಕ್ಕೆ ಅವಕಾಶವಾಗಿದೆ. ವ್ಯವಹಾರಿಕ ಸ್ವಾತಂತ್ರ ಕಡಿಮೆಯಾಗಿದೆ. ಈ ಬಗ್ಗೆ ಸರಕಾರದಲ್ಲಿ ಮನವಿ ಸಲ್ಲಿಸಿದ್ದೇವೆ ಎಂದು ತಿಳಿಸಿ ಮುಂಬರುವ ದಿನಗಳಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳು ಅತ್ಯಂತ ಪಾರದರ್ಶಕವಾಗಿ ಮತ್ತು ವೃತ್ತಿಪರರಾಗಿ ಕಾರ್ಯನಿರ್ವಹಿಸುವ ಅಗತ್ಯತೆಯನ್ನು ಒತ್ತಿ ಹೇಳಿದರು.

**ಉದ್ಘಾಟನೆ :** ಕಾರ್ಯಕ್ರಮದಲ್ಲಿ ಉದ್ಘಾಟಕರಾಗಿ ಆಗಮಿಸಿದ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಲೋಕೋಪಯೋಗಿ ಸಚಿವರಾದ ಶ್ರೀ ಸತೀಶ ಜಾರಕಿಹೋಳಿ ಇವರು ಹಾಗೂ ಸಮಾರಂಭದ ಎಲ್ಲ ಗಣ್ಯರು ವೃಕ್ಷಕ್ಕೆ ನೀರೆರೆಯುವುದರ ಮೂಲಕ ಉದ್ಘಾಟನೆ ಮಾಡಿದರು. ಸಚಿವರಾದ ಶ್ರೀ ಸತೀಶ ಜಾರಕಿಹೊಳಿಯವರು ಸಹಕಾರಿಗಳು ಮೊದಲು ಮಾತನಾಡಲಿ ಎಂದು ತಿಳಿಸಿದ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯ ಪ್ರಥಮ ಅಧ್ಯಕ್ಷ ಮಾಜಿ ವಿಧಾನ ಪರಿಷತ ಸದಸ್ಯರಾದ ಶ್ರೀ ಮನೋಹರ ಮಸ್ಕಿಯವರು ಮಾತನಾಡಿದರು.



## ಪುಸ್ತಕಗಳ ಬಿಡುಗಡೆ

**1. ಸಹಕಾರ ಸುಗಂಧ ಭಾಗ – 2** ಕಾರ್ಯಕ್ರಮದಲ್ಲಿ ಶ್ರೀ ಸಿ.ಎನ್. ಪರಶಿವಮೂರ್ತಿಯವರು ಸಂಗ್ರಹಿಸಿ ಬರೆದ ಎರಡೂ ಕಾಯ್ದೆಗಳ ಇಲ್ಲಿಯ ವರೆಗಿನ ಸಮಗ್ರ ತಿದ್ದುಪಡಿಗಳನ್ನು ಪುಸ್ತಕರೂಪದಲ್ಲಿ ಸಂಯುಕ್ತ ಸಹಕಾ–ರಿಯು ಪುಸ್ತಕ ರೂಪದಲ್ಲಿ ಪ್ರಕಟಿಸಿರುವುದನ್ನು ಅತಿಥಿ ಗಣ್ಯರು ಬಿಡುಗಡೆ ಮಾಡಿದರು.

**2. ರಜತ ಸ್ಮೃತಿ :** ಸೌಹಾರ್ದ ಸಹಕಾರಿ ರಜತ ಮಹೋತ್ಸವದ ಅಂಗವಾಗಿ ರಜತ ಸ್ಮೃತಿ ಎಂಬ ಸ್ಮರಣ ಸಂಚಿಕೆಯನ್ನು ಬಿಡುಗಡೆಗೊಳಿಸಲಾಯಿತು. ಈ ಪುಸ್ತಕದಲ್ಲಿ ಗಣ್ಯರ ಸಂದೇಶ, ತಜ್ಞರ ಲೇಖನಗಳು ಮತ್ತು ಸೌಹಾರ್ದ ಸಹಕಾರಿಗಳಿಂದ ಬಂದಿರುವ ಜಾಹೀರಾತುಗಳು ಒಳಗೊಂಡಿದೆ.

**3. ಸಾಧನಾ ಪರ್ವ :** ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದ ದಿನದಿಂದ ಮತ್ತು ಸಂಯುಕ್ತ ಸಹಕಾರಿ ಪ್ರಾರಂಭವಾದ ದಿನದಿಂದ ಇಲ್ಲಿಯವರೆಗೆ ಈ ಕ್ಷೇತ್ರದಲ್ಲಿ ಇರುವ ಎಲ್ಲ ವಿವರಗಳನ್ನು ಸಂಗ್ರಹ ಮಾಡಿ ಒಳಗೊಂಡಿರುವ ಸಂಚಿಕೆ ಸಾಧನಾ ಪರ್ವ ಎಂಬ ಪುಸ್ತಕವನ್ನು ವೇದಿಕೆಯಲ್ಲಿನ ಗಣ್ಯರು ಬಿಡುಗಡೆ ಮಾಡಿದರು.

## ಸಹಕಾರ ತತ್ವಕ್ಕೆ ಸಮ್ಮತವಾದ ರೂಪದಲ್ಲಿ ನಿಯಂತ್ರಣ ಇರಲಿ

**- ಶ್ರೀ ಮನೋಹರ ಮಸ್ಕಿ, ಮಾನ್ಯ ಪ್ರಥಮ ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.**



ಸಂಯುಕ್ತ ಸಹಕಾರಿ ಪ್ರಥಮ ಮಾಜಿ ಅಧ್ಯಕ್ಷರೂ ಮಾಜಿ ವಿಧಾನ ಪರಿಷತ ಸದಸ್ಯರೂ ಸಹಕಾರಿ ಚಿಂತಕರೂ ಆದ ಶ್ರೀ ಮನೋಹರ ಮಸ್ಕಿಯವರು ರಾಜ್ಯಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ, ಚಳುವಳಿ ಬೆಳೆದುಬರಲು ಕಾರಣಗಳು ಚಳುವಳಿ ಬೆಳೆದು ಬಂದ ದಾರಿ ಎಲ್ಲವನ್ನು ಪ್ರಸ್ತಾಪಿಸುತ್ತ, ಸೌಹಾರ್ದ ಸಹಕಾರಿಗಳ ಸಮಸ್ಯೆ ಸ್ವಾಯತ್ತತೆ ಅಲ್ಲ. ಸ್ವಾಯತ್ತತೆಯನ್ನು ಬೆಂಬಲಿಸುವ ಸೂಕ್ತ ಗವರ್ನೆನ್ಸ ವ್ಯವಸ್ಥೆಗಳ ಕೊರತೆಯಲ್ಲಿ ಇದೆ. ನಿಯಂತ್ರಣ ಇರಲಿ ಆದರೆ ಟೀಕೆ ಸಲ್ಲದು. ಸುಧಾರಣೆ ಬೇಕು ಆದರೆ ಸ್ವಾಯತ್ತತೆ ನಾಶವಾಗದಂತೆ ಅಪಾಯ ಆಧಾರಿತ ನಿಯಂತ್ರಣ, ಸ್ವಾತಂತ್ರ ಸಹಕಾರಿ ಓಂಬಡ್ಸಮನ್, ಫೆಡರೇಶನ್ ಮೂಲಕ ಬಲವಾದ ಆಡಿಟ್ ವ್ಯವಸ್ಥೆ ಠೇವಣಿದಾರರ ರಕ್ಷಣೆ ಸಹಕಾರಿ ಆಧಾರಿತ ಭದ್ರತಾ ವ್ಯವಸ್ಥೆ ಇವು ಸಮತೋಲನದ ದಾರಿ ಎಂದು ಹೇಳಿದರು. ಸೌಹಾರ್ದ ಸಹಕಾರ ಚಳುವಳಿ ಒಂದು ಕಾನೂನು ವ್ಯವಸ್ಥೆಯಲ್ಲ. ಈ ವಿಚಾರ ಚಳುವಳಿ 25 ವರ್ಷಗಳ ನಂತರವೂ ಚರ್ಚೆಯಲ್ಲಿದೆ ಎಂದರೆ ಅದು ವಿಫಲತೆಯಲ್ಲ. ಅದು ಪ್ರಸ್ತುತತೆಯ ಸಾಕ್ಷಿ. ಸ್ವಾಯತ್ತತೆಯನ್ನು ಕುಗ್ಗಿಸಿ ಸಹಕಾರವನ್ನು ಉಳಿಸಲಾಗದು. ಸ್ವಾಯತ್ತತೆಯನ್ನು ಬಲಪಡಿಸಿದರೆ ಮಾತ್ರ ಸಹಕಾರ ಚಳುವಳಿ ಜೀವಂತವಾಗಿರುತ್ತದೆ. ಈ ಬಗ್ಗೆ ಸರಕಾರ ಗಮನ  ಹರಿಸಬೇಕು ಎಂದರು.




## ಬಡವರ ಏಳ್ಗೆಗಾಗಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿ ವ್ಯವಸ್ಥೆಯಲ್ಲಿ ಲೋಪಗಳಾಗದಂತೆ ಕಾರ್ಯನಿರ್ವಹಿಸಿ.

**- ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಅಂಗವಿಕಲರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು ಹಾಗೂ ಉಡುಪಿ ಜಿಲ್ಲೆಯ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ**

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಕರ್ನಾಟಕ ಸರಕಾರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವೆಯಾಗಿರುವ ಶ್ರೀಮತಿ ಲಕ್ಷ್ಮಿ ಹೆಬ್ಬಾಳಕರರವರು ಮಾತನಾಡಿ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಗೆ 25 ವರ್ಷಗಳು ಆಗಿರುವ ಪ್ರಯುಕ್ತ ಸೌಹಾರ್ದ ಸಹಕಾರಿ ಕಾಯ್ದೆಯ ಹಾಗೂ ಸೌಹಾರ್ದ ಸಹಕಾರಿ ಚಳುವಳಿಯ ರಜತ ಮಹೋತ್ಸವ ಸಮಾರೋಪ ಕಾರ್ಯಕ್ರಮಕ್ಕೆ ಶುಭ ಕೋರಿ ಮಾತನಾಡಿದರು. ಸಹಕಾರಿ ಸಂಸ್ಥೆಗಳೂ ಬಡವರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿ ಕೇಂದ್ರಗಳು. ಅವು ಉತ್ತಮವಾಗಿ ಕಾರ್ಯನಿರ್ವಹಿಸುವುದಕ್ಕಾಗಿ ಸರಕಾರ ಅಗತ್ಯವಾದಾಗಲೆಲ್ಲ ಕೆಲವು ನೀತಿ ನಿಯಮಗಳನ್ನು ಜಾರಿಮಾಡುತ್ತಿರುತ್ತದೆ. ಈ ನೀತಿ ನಿಯಮಗಳು ಸಹಕಾರ ಕ್ಷೇತ್ರದ ಸ್ವಾಯತ್ತತೆಗೆ ಧಕ್ಕೆ ತರುವಂತಿರಬಾರದು. ಸಹಕಾರ ಕ್ಷೇತ್ರದ ಬೆಳವಣಿಗೆಗೆ ಆರ್ಥಿಕ ಹಾಗೂ ವ್ಯವಹಾರಿಕ ಸ್ವಾತಂತ್ರ ಅಗತ್ಯ ಎಂಬುದನ್ನು ಒತ್ತಿ ಹೇಳುತ್ತ ಸರಕಾರ ಸೌಹಾರ್ದ ಸಹಕಾರಿ ಅಭಿವೃದ್ಧಿಗೆ ಬದ್ಧವಾಗಿದೆ ಮುಂಬರುವ ದಿನಗಳಲ್ಲಿ ನ್ಯೂನ್ಯತೆಗಳನ್ನು ಸರಿಪಡಿಸೋಣ ಎಂದು ತಿಳಿಸಿದರು.

---

## ಸಹಕಾರ ಕ್ಷೇತ್ರ ಸ್ವಾತಂತ್ರವಾಗಿರಲು ಬಿಡಿ

**- ಶ್ರೀ ಪ್ರಭಾಕರ ಕೋರೆ, ಮಾನ್ಯ ಕಾರ್ಯಾಧ್ಯಕ್ಷರು ಕೆ.ಎಲ್.ಇ. ಸಂಸ್ಥೆ ಹಾಗೂ ರಾಜ್ಯಸಭಾ ಮಾಜಿ ಸದಸ್ಯರು.**



ಕೆ.ಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷರೂ ಹಾಗೂ ಮಾಜಿ ರಾಜ್ಯ ಸಭಾ ಸದಸ್ಯರಾದ ಶ್ರೀ ಪ್ರಭಾಕರ ಕೋರೆಯವರು ಮಾತನಾಡಿ ಕರ್ನಾಟಕದಲ್ಲಿ ಸರಕಾರದ ಪ್ರೋತ್ಸಾಹದಿಂದ ಸಹಕಾರಿಗಳ ಆಸಕ್ತಿಯಿಂದಾಗಿ ಸಹಕಾರ ಕ್ಷೇತ್ರ ಇಷ್ಟೊಂದು ದೊಡ್ಡದಾಗಿ ಬೆಳೆದಿದೆ. ಉತ್ತರ ಕರ್ನಾಟಕದಲ್ಲಿ ಸಹಕಾರ ಚಳವಳಿ ಇನ್ನೂ ಹೆಚ್ಚು ಉತ್ತಮವಾಗಿ ಬೆಳೆದಿರುವುದು ಹೆಮ್ಮೆಯ ವಿಷಯ. ಸಾಮಾನ್ಯವಾಗಿ ರಾಜಕಾರಣಿಗಳು ಸಹಕಾರ ಕ್ಷೇತ್ರದಿಂದಲೇ ತಮ್ಮ ಸಾಮಾಜಿಕ ಕಾರ್ಯವನ್ನು ಪ್ರಾರಂಭಿಸುತ್ತಾರೆ. ನಾವೆಲ್ಲರೂ ಸಹಕಾರ ಕ್ಷೇತ್ರದಿಂದಲೇ ರಾಜಕೀಯಕ್ಕೆ ಬಂದಿದ್ದೇವೆ. ಸಹಕಾರ ಕ್ಷೇತ್ರ ಉತ್ತಮವಾಗಿ ಕಾರ್ಯನಿರ್ವಹಿಸಲು ವ್ಯವಹಾರಿಕ ಸ್ವಾತಂತ್ರಬೇಕು. ಸಹಕಾರ ಕ್ಷೇತ್ರ ಉಳಿಯಲು ಸಹಕಾರಿ ಕಾನೂನಿಗೆ ಸಹಕಾರಿಗಳಿಗೆ ಸ್ವಾಯತ್ತತೆಯನ್ನು ನೀಡುವ ಅಗತ್ಯ ತಿದ್ದುಪಡಿಗಳಾಗುವುದು ಅವಶ್ಯಕ ಎಂದು ತಿಳಿಸಿದರು.

---



## ಸಹಕಾರ ಕ್ಷೇತ್ರದ ಸಾಧನೆ ಗಣನೀಯ

**- ಶ್ರೀ ಮಹಾಂತೇಶ ಕವಟಗಿಮಠ, ಸರ್ಕಾರದ ಮಾನ್ಯ ಮಾಜಿ ಮುಖ್ಯ ಸಚೇತಕರು ಹಾಗೂ ಮಾಜಿ ವಿಧಾನ ಪರಿಷತ್ ಸದಸ್ಯರು, ಕರ್ನಾಟಕ ಸರ್ಕಾರ.**

ಹಿರಿಯ ಸಹಕಾರಿ ಕರ್ನಾಟಕ ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕರಾದ ಶ್ರೀ ಮಹಂತೇಶ ಕವಟಗಿಮಠರವರು ಮಾತನಾಡಿ ಬೆಳಗಾವಿಗೂ ಸಹಕಾರ ಕ್ಷೇತ್ರಕ್ಕೂ ಅವಿನಾಭಾವ ಸಂಬಂಧವಿದೆ. ಬೆಳಗಾವಿ ಜಿಲ್ಲೆ ರಾಜ್ಯಕ್ಕೆ ಮಾದರಿಯಾದರೆ ರಾಜ್ಯ ದೇಶಕ್ಕೆ ಮಾದರಿಯಾಗಿದೆ. ಸಹಕಾರ ಸಂಸ್ಥೆಗಳು ಠೇವಣಿ ಇಟ್ಟುಕೊಂಡು ಸಾಲ ನೀಡುವುದಕ್ಕೆ ಸೀಮಿತವಾಗಿರದೆ ಸಾಮಾಜಿಕ ಜವಾಬ್ದಾರಿಗಳನ್ನು ನಿರ್ವಹಿಸಬೇಕು. ಈ ದೇಶದಲ್ಲಿ ಸಹಕಾರ ಕ್ಷೇತ್ರಕ್ಕೆ 120 ವರ್ಷಗಳಿಗಿಂತ ಹೆಚ್ಚಿನ ಇತಿಹಾಸವಿದೆ. ಸಾಧನೆ ಗಣನೀಯವಾಗಿದೆ. ಕರ್ನಾಟಕದಲ್ಲಿ ಸಹಕಾರ ಕ್ಷೇತ್ರ ಅದರಲ್ಲೂ ಸೌಹಾರ್ದ ಸಹಕಾರ ಕ್ಷೇತ್ರ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಆದರೆ ಸರಕಾರ ಇತ್ತೀಚಿನ ತಿದ್ದುಪಡಿಗಳಲ್ಲಿ ಸೌಹಾರ್ದ ಸಹಕಾರಿಗಳ ಸ್ವಾಯತ್ತತೆಗೆ ಹಿನ್ನಡೆಯಾಗುವ ರೀತಿಯಲ್ಲಿ ತಿದ್ದುಪಡಿಮಾಡಿರುವುದು ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಿರವುದಿಲ್ಲ. ಸರಕಾರ ಈ ಬಗ್ಗೆ ಗಮನ ಹರಿಸಿ ಈ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗುವಂತಹ ಸ್ವಾಯತ್ತ ವಾತಾವರಣವನ್ನು ವ್ಯವಹಾರಿ ಸ್ವಾತಂತ್ರವನ್ನು ನಿರ್ಮಾಣ ಮಾಡಿಕೊಡಬೇಕು ಎಂದು ತಿಳಿಸಿದರು.



## ಸೌಹಾರ್ದ ಸಹಕಾರಿಗಳ ಹಿತ ರಕ್ಷಣೆಗೆ ನಮ್ಮ ಸರಕಾರ ಬದ್ಧ

### - ಶ್ರೀ ಸತೀಶ ಜಾರಕಿಹೊಳಿ, ಮಾನ್ಯ ಲೋಕೋಪಯೋಗಿ ಸಚಿವರು ಹಾಗೂ ಬೆಳಗಾವಿ ಜಿಲ್ಲೆಯ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ.

ಬೆಳಗಾವಿ ಜಿಲ್ಲೆಯ ಉಸ್ತುವಾರಿ ಸಚಿವರೂ ಕರ್ನಾಟಕ ಸರಕಾರದ ಲೋಕೋಪಯೋಗಿ ಸಚಿವರಾದ ಶ್ರೀ ಸತೀಶ ಜಾರಕಿಹೊಳಿ ಇವರು ಮಾತನಾಡಿ ರಾಜ್ಯದಲ್ಲಿ ಸೌಹಾರ್ದ ಸಹಕಾರ ಚಳುವಳಿ ಉತ್ತಮವಾಗಿ ಬೆಳೆಯುತ್ತಿರುವುದು ಕಳೆದ 25 ವರ್ಷಗಳ ಸಾಧನೆ ಶ್ಲಾಘನೀಯ. ಎಲ್ಲೊ ಒಂದೆರಡು ಬೆರಳೆಣಿಕೆಯಷ್ಟು ಸೌಹಾರ್ದ ಸಹಕಾರಿಗಳು ಠೇವಣಿದಾರರಿಗೆ ವಂಚನೆ ಮಾಡಿರುವುದು ಸರಕಾರದ ಗಮನಕ್ಕೆ ಬಂದಿದೆ. ಹೀಗಾಗಿ ಕೆಲವು ತಿದ್ದುಪಡಿಗಳನ್ನು ಮಾಡಿರಬಹುದು. ಅದರಿಂದಾಗಿ ಇಡೀ ಸೌಹಾರ್ದ ಸಮುದಾಯಕ್ಕೆ ತೊಂದರೆ ಆಗಿರುವುದಾದರೆ ಸರಕಾರ ಅವುಗಳನ್ನು ಸರಿಪಡಿಸಿ ಸೌಹಾರ್ದ ಸಹಕಾರಿಗಳಿಗೆ ಕಾಯ್ದೆಯ ಆಶಯದಂತೆ ಸ್ವಾಯತ್ತತೆ ಹಾಗೂ ವ್ಯವಹಾರಿಕ ಸ್ವಾತಂತ್ರವನ್ನು ಕಲ್ಪಿಸುವಲ್ಲಿ ಸರಕಾರ ಬದ್ಧವಾಗಿದೆ. ಅಗತ್ಯವೆನಿಸಿದರೆ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ನಿಯೋಗ ಹೋಗೋಣ ನಮ್ಮ ತೊಂದರೆಗಳನ್ನು ಹೇಳಿಕೊಂಡು ಅವುಗಳ ನಿವಾರಣೆಗೆ ಕ್ರಮವಿಡುವಂತೆ ವಿನಂತಿಸೋಣ ಎಂದು ಹೇಳಿದರು.

---

## ದೇಶಕ್ಕೆ ಸೌಹಾರ್ದ ಸಹಕಾರಿ ಕ್ಷೇತ್ರವನ್ನು ಮಾದರಿ ಮಾಡೋಣ

### - ಶ್ರೀ ಲಕ್ಷ್ಮಣ ಸಂ ಸವದಿ, ಮಾನ್ಯ ಶಾಸಕರು ಹಾಗೂ ಮಾಜಿ ಉಪಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.



ಮಾಜಿ ಉಪಮುಖ್ಯಮಂತ್ರಿ ರಾಜ್ಯದ ಸಹಕಾರಿ ಕಾಯ್ದೆ ತಿದ್ದುಪಡಿಗಳ ಸಮಿತಿ ಅಧ್ಯಕ್ಷರಾದ ಹಾಗೂ ಹಾಲಿ ಶಾಸಕರಾದ ಶ್ರೀ ಲಕ್ಷ್ಮಣ ಸಂ ಸವದಿಯವರು ಮಾತನಾಡಿ ರಾಜ್ಯದಲ್ಲಿ ಶೇಕಡಾ 95% ಸೌಹಾರ್ದ ಸಹಕಾರಿಗಳೂ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಕೇವಲ 5% ಸೌಹಾರ್ದ ಸಹಕಾರಿಗಳು ಠೇವಣಿದಾರರಿಗೆ ವಂಚನೆ ಮಾಡುತ್ತಿದ್ದು ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಕಪ್ಪು ಚುಕ್ಕೆಗಳಾಗಿವೆ. ಶ್ರೀ ಎಸ್.ಎಸ್.ಪಾಟೀಲ್ ರವರಿಗೆ ಗೌರವ ಸಲ್ಲಿಸುವುದಾದರೆ ಈ ಕಪ್ಪು ಚುಕ್ಕೆಗಳು ಇರದಂತೆ ಈ ಸೌಹಾರ್ದ ಸಹಕಾರಿ ಕ್ಷೇತ್ರ ಕಾರ್ಯನಿರ್ವಹಿಸಬೇಕು. ಇದರಲ್ಲಿ ಸರಕಾರದ ಹಸ್ತಕ್ಷೇಪ ಅನಗತ್ಯ. ನಾವು ಸೌಹಾರ್ದ ಸಹಕಾರಿಗಳು ಜನರ ವಿಶ್ವಾಸವನ್ನು ಉಳಿಸಿಕೊಳ್ಳಬೇಕು ಸರಕಾರ ನಮ್ಮ ಪರವಾಗಿ ನಿಲ್ಲುವಂತಹ ವಾತಾವರಣವನ್ನು ಸೃಷ್ಟಿ ಮಾಡಿ. ಈ ಕ್ಷೇತ್ರವನ್ನು ಶುದ್ಧಿಕರಣ ಮಾಡಿ ನಾನು ಸಹಕಾರ ಕ್ಷೇತ್ರದಿಂದ ಬಳೆದಿದ್ದೇನೆ. ನಿಮ್ಮ ಪರವಾಗಿ ನಿಮ್ಮ ಧ್ವನಿಯಾಗಿರುತ್ತೇನೆ ಈ ಸೌಹಾರ್ದ ಸಹಕಾರಿ ತೇರನ್ನು 50 ವರ್ಷಗಳಿಗೆ ತೆಗೆದುಕೊಂಡು ಹೋಗೋಣ ಎಂದು ತಿಳಿಸಿದರು.

---



## ಸೌಹಾರ್ದ ಸಹಕಾರಿ ಚಳುವಳಿ ಬೆಳವಣಿಗೆಗೆ ಸರಕಾರ ಪ್ರೋತ್ಸಾಹಿಸಬೇಕು.

### - ಶ್ರೀ ಎಸ್.ಎಸ್ ಪಾಟೀಲ, ಮಾನ್ಯ ಮಾಜಿ ಸಹಕಾರ ಹಾಗೂ ಅರಣ್ಯ ಸಚಿವರು, ಕರ್ನಾಟಕ ಸರ್ಕಾರ.

ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬರಲು ಮಾಜಿ ಸಹಕಾರ ಹಾಗೂ ಅರಣ್ಯ ಸಚಿವರೂ ಶ್ರಮಿಸಿದ ಹಿರಿಯ ಸಹಕಾರಿ ಚಿಂತಕರೂ ಆದ ಶ್ರೀ ಎಸ್. ಎಸ್. ಪಾಟೀಲ್ ರವರು ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ತರುವ ನಿಟ್ಟಿನಲ್ಲಿ ತಾವು ಮಾಡಿದ ಕಾರ್ಯಗಳನ್ನು ವಿವರಿಸಿ ಸೌಹಾರ್ದ ಸಹಕಾರಿ ಕಾಯ್ದೆಯನ್ನು ರಾಜ್ಯದ ವಿಧಾನ ಮಂಡಳಗಳಲ್ಲಿ ಅನುಮೋದನೆ ಪಡೆದು ಇಡೀ ದೇಶದಲ್ಲೆ ಮಾದರಿ ವ್ಯವಸ್ಥೆಯನ್ನು ಜಾರಿಗೆ ತರಲು ಕ್ರಮವಿಡಲಾಗಿದೆ. ಇದರ ಹಿಂದೆ ಅನೇಕರ ಶ್ರಮವಿದೆ. ಎಲ್ಲರನ್ನೂ ನಿವು ಜ್ಞಾಪಿಸಿಕಂಡು ಅವರನ್ನು ಸನ್ಮಾನಿಸಿದ್ದೀರಿ. ಈ ಕ್ಷೇತ್ರ ಉತ್ತಮವಾಗಿ ಬೆಳೆಯಬೇಕು ರಾಜ್ಯದ ಸೌಹಾರ್ದ ಸಹಕಾರಿಗಳ ಆರ್ಥೀಕ ಅಭಿವೃದ್ಧಿಯ ಸಾಧನವಾಗಿದೆ. ಈ ಮಾದರಿ ದೇಶದ ಬೇರೆ ಕಡೆಗಳಲ್ಲೂ ಅಗತ್ಯವಿದೆ ಎಂಬುವ ಕೂಗು ಬರುವಂತಾಗಬೇಕು. ಸೌಹಾರ್ದ ಸಹಕಾರಿಗಳು ಪೂರ್ಣ ಪಾರದರ್ಶಕ ಪೂರ್ಣ ವೃತ್ತಿಪರತೆ ಹಾಗೂ ದಕ್ಷತೆಗಳ ಪ್ರತೀಕವಾಗಬೇಕು. ಈ ನಿಟ್ಟಿನಲ್ಲಿ ಸೌಹಾರ್ದ ಸಹಕಾರಿ ಕಾರ್ಯನಿರ್ವಹಿಸಬೇಕು. ಸರಕಾರವೂ ಸಹ ಈ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗುವ ತಿದ್ದುಪಡಿಗಳನ್ನು ಮಾಡಿ ಪೂರ್ಣ ಸ್ವಾಯತ್ತತೆ ನೀಡಬೇಕು ಎಂದು ತಿಳಿಸಿದರು.



## ಸನ್ಮಾನಗಳು

ಕಾರ್ಯಕ್ರಮದಲ್ಲಿ ಅತಿಥಿ ಗಣ್ಯರಿಗೆ, ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರುಗಳಾದ ಶ್ರೀ ಮನೋಹರ ಮಸ್ಕಿ, ಶ್ರೀ ವಿಶ್ವನಾಥ ಹಿರೇಮಠ, ಶ್ರೀ ಎಸ್. ಆರ್.ಸತೀಶ್ಚಂದ್ರ ಶ್ರೀ ಗುರುನಾಥ ಜಾಂತಿಕರ, ಶ್ರೀ ಹೆಚ್.ವಿ ರಾಜೀವ, ಶ್ರೀ ಬಿ. ಹೆಚ್.ಕೃಷ್ಣಾರೆಡ್ಡಿ, ಮಾಜಿ ಉಪಾಧ್ಯಕ್ಷರುಗಳಾದ, ಶ್ರೀ ಎಸ್.ಆರ್. ಸತೀಶ್ಚಂದ್ರ, ಶ್ರೀ ಗುರುನಾಥ ಜಾಂತಿಕರ, ಶ್ರೀ ಹೆಚ್.ವಿ.,ರಾಜೀವ, ಶ್ರೀ ಜಗದೀಶ ಕವಟಗಿಮಠ, ಸಂಯುಕ್ತ ಸಹಕಾರಿಯ ಮಾಜಿ ವ್ಯವಸ್ಥಾಪಕ ನಿರ್ದೇಶಕರಗಳಾದ ಶ್ರೀ ಅನೂಪ ದೇಶಪಾಂಡೆ, ಶ್ರೀ ಸಚಿನ ಪಾಟೀಲ್ ಇವರುಗಳನ್ನು ಸನ್ಮಾನಿಸಲಾಯಿತು.

## ವಂದನಾರ್ಪಣೆ :



ಸಂಯುಕ್ತ ಸಹಕಾರಿ ಉಪಾಧ್ಯಕ್ಷರಾದ ಶ್ರೀ ಎ.ಆರ.ಪ್ರಸನ್ನಕುಮಾರರವರು ಸಮಾರಂಭದಲ್ಲಿ ಭಾಗವಹಿಸಿದ ಎಲ್ಲ ಗಣ್ಯಮಾನ್ಯರಿಗೆ ಸಹಕಾರಿ ಗಣ್ಯರಿಗೆ, ಸಹಕಾರಿ ಇಲಾಖಾ ಅಧಿಕಾರಿಗಳಿಗೆ, ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರುಗಳಿಗೆ ಮಾಜಿ ಉಪಾಧ್ಯಕ್ಷರಿಗೆ, ಮಾಜಿ ನಿರ್ದೇಶಕರುಗಳಿಗೆ ಮಾಜಿ ವ್ಯವಸ್ಥಾಪಕ ನಿರ್ದೇಶಕರಿಗೆ, ಭಾಗವಹಿಸಿದ ಬೆಳಗಾವಿ ಜಿಲ್ಲೆಯ, ವಿಭಾಗದ ಹಾಗೂ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳಿಗೆ, ಕಾರ್ಯಕ್ರಮಕ್ಕೆ ಸ್ಥಳಾವಕಾಶ ಮಾಡಿಕೊಟ್ಟು ಎಲ್ಲ ವಿಧವಾಗಿ ಸಹಕರಿಸಿದ ಕೆ.ಎಲ್.ಇ ಸೊಸಾಯಿಟಿಯ ಮಾನ್ಯ ಅಧ್ಯಕ್ಷರಾದ ಶ್ರೀ ಪ್ರಭಾಕರ ಕೋರೆಯವರಿಗೆ ಸಂಸ್ಥೆಯ ಅಧಿಕಾರಿಗಳಿಗೆ ಮತ್ತು ಪರೋಕ್ಷವಾಗಿ ಅಪರೋಕ್ಷವಾಗಿ ಈ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದವರಿಗೆಲ್ಲ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಪರವಾಗಿ ಧನ್ಯವಾದಗಳನ್ನು ಸಲ್ಲಿಸಿದರು.



## ಶ್ರೀ ಸಿ.ಎನ್ ಪರಶಿವಮೂರ್ತಿ, ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು (ನಿ.) ಇವರಿಗೆ ಸನ್ಮಾನ

ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ಸೌಹಾರ್ದ ಸಹಕಾರಿ ಚಳುವಳಿಯ ರಜತ ಮಹೋತ್ಸವದ ಸಮಾರೋಪ ಕಾರ್ಯಕ್ರಮದಲ್ಲಿ ಶ್ರೀ ಸಿ.ಎನ್ ಪರಶಿವಮೂರ್ತಿ, ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು (ನಿ.) ಇವರಿಗೆ ವೇದಿಕೆ ಮೇಲಿನ ಗಣ್ಯರುಗಳು ಸನ್ಮಾನಿಸಿದರು.



## ಉಪನ್ಯಾಸಗಳು :

ಭೋಜನದ ನಂತರ ಶ್ರೀ ಮನೋಹರ ಮಸ್ಕಿ ರವರು ಸೌಹಾರ್ದ ಸಹಕಾರಿಗಳ ವಿಶ್ವಾಸಾರ್ಹತೆ ಹೆಚ್ಚಿಸುವ ನಿಟ್ಟಿನಲ್ಲಿ ಹಾಗೂ ಸೌಹಾರ್ದ ಸಹಕಾರಿಗಳಲ್ಲಿ ಹಣಕಾಸಿನ ನಿರ್ವಹಣೆಯ ಬಗ್ಗೆ ಉಪನ್ಯಾಸ ನೀಡಿದರು. ಶ್ರೀ ಗುರುಸ್ವಾಮಿ, ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರು, ಸೌಹಾರ್ದ ಸಹಕಾರಿಗಳಲ್ಲಿ ಬಡ್ಡಿಯೇತರ ಆದಾಯಗಳ ನಿರ್ವಹಣೆ ಬಗ್ಗೆ ಉಪನ್ಯಾಸ ನೀಡಿದರು.

## ಸಿಬ್ಬಂದಿ ಸಮಾಲೋಚನಾ ಸಭೆ :

ನಂತರ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿಯವರು, ಮಾಜಿ ಉಪಾಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠ ರವರು, ನಿರ್ದೇಶಕರುಗಳಾದ ಶ್ರೀ ಶ್ರೀಧರ, ಶ್ರೀ ಸಿ.ಪಿ ವಿಜಯ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ಕಾರ್ಯಕ್ರಮದ ಬಗ್ಗೆ ಸಿಬ್ಬಂದಿಯವರು ಅಭಿಪ್ರಾಯಗಳನ್ನು ಸಮಾಲೋಚಿಸಿದರು.

ಕಾರ್ಯಕ್ರಮದ ವ್ಯವಸ್ಥೇ, ಊಟೋಪಚಾರ, ಆಸನ ವ್ಯವಸ್ಥೆ, ಸನ್ಮಾನಗಳು, ಅತಿಥಿ ಸತ್ಕಾರ ಪ್ರತಿನಿಧಿಗಳ ಭಾಗವಹಿಸುವಿಕೆ ಹಾಗೂ ಅಭಿಪ್ರಾಯಗಳು ಎಲ್ಲವೂ ಚೆನ್ನಾಗಿತ್ತು ಎಂದು ತಿಳಿಸಿದರು. ವೇದಿಕೆಯಲ್ಲಿನ ಗಣ್ಯರೆಲ್ಲರೂ ಕಾರ್ಯಕ್ರಮದ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಕ್ಕಾಗಿ ಸಿಬ್ಬಂದಿಯವರಿಗೆ ಕೃತಜ್ಞತೆಗಳನ್ನು ತಿಳಿಸಿದರು.

## ಸೌಹಾರ್ದ ಸಹಕಾರಿ ದಿನದ ಹಾಗೂ ಹೊಸ ವರ್ಷದ ಶುಭಾಶಯಗಳು





**ಬೆಂಗಳೂರು :** ದಿನಾಂಕ 02.01.2026 ರಂದು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸಹಕಾರ ಸಚಿವರಾದ ಶ್ರೀ ಸಿದ್ಧರಾಮಯ್ಯ ಹಾಗೂ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆಯ ಸಚಿವರು ಹಾಗೂ ಗದಗ ಜಿಲ್ಲೆಯ ಉಸ್ತುವಾರಿ ಸಚಿವರಾದ ಶ್ರೀ ಹೆಚ್. ಕೆ. ಪಾಟೀಲ ಇವರನ್ನು ಭೇಟಿ ಮಾಡಿ ಸೌಹಾರ್ದ ಸಹಕಾರಿ ದಿನದ ಹಾಗೂ ಹೊಸ ವರ್ಷದ ಶುಭಾಶಯವನ್ನು ಕೋರಲಾಯಿತು.

## 26ನೇ ಸೌಹಾರ್ದ ಸಹಕಾರಿ ದಿನಾಚರಣೆ



**ಬೆಂಗಳೂರು :** 2001 ಜನವರಿ 1 ರಂದು ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದ ಜ್ಞಾಪಕಾರ್ಥವಾಗಿ ಪ್ರತಿವರ್ಷ ಸಂಯುಕ್ತ ಸಹಕಾರಿ ಹಾಗೂ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಸೌಹಾರ್ದ ಸಹಕಾರಿ ದಿನವನ್ನಾಗಿ ಆಚರಿಸುತ್ತ ಈ ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಚಿಂತನ ಮಂಥನವನ್ನು ಮಾಡುವ ಮೂಲಕ ಈ ದಿನವನ್ನು ಅರ್ಥಪೂರ್ಣವನ್ನಾಗಿ ಆಚರಿಸಲಾಗುತ್ತದೆ. ಪ್ರತಿ ಸೌಹಾರ್ದ ಸಹಕಾರಿ ಸಂಸ್ಥೆಯಲ್ಲಿ ಸಹಕಾರಿ ಧ್ವಜಾರೋಹಣವನ್ನು ನೆರವೇರಿಸಲಾಗುತ್ತದೆ. ಸಭೆ ಸಮಾರಂಭಗಳನ್ನು ನಡೆಸಲಾಗುತ್ತದೆ ಈ ದಿನಾಚರಣೆಯ ವರದಿಗಳನ್ನು ಓದುಗರ ಗಮನಕ್ಕಾಗಿ ಪ್ರಕಟಿಸಲಾಗಿದೆ.

**ವಿಭಿನ್ನತೆ, ವೃತ್ತಿಪರತೆ, ಪಾರದರ್ಶಕತೆಯಿಂದ ಕಾರ್ಯನಿರ್ವಹಣೆ ನಮ್ಮ ಧ್ಯೇಯ – ನಮ್ಮ ಬಲ – ನಮ್ಮ ಶ್ರೀರಕ್ಷೆ : ಶರಣಗೌಡ ಜಿ. ಪಾಟೀಲ್. ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು**

ದಿನಾಂಕ 01.01.2026 ರಂದು ಸಂಯುಕ್ತ ಸಹಕಾರಿಯ ಕೇಂದ್ರ ಕಚೇರಿಯಲ್ಲಿ ಸೌಹಾರ್ದ ಸಹಕಾರಿ ದಿನವನ್ನು ಆಚರಿಸಲಾಯಿತು. ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ರವರು ಸಹಕಾರಿ ಧ್ವಜಾರೋಹಣವನ್ನು ನೆರವೇರಿಸಿದರು. ನಂತರ ನಡೆದ ಸಭೆಯಲ್ಲಿ ಸಂಯುಕ್ತ ಸಕಾರಿಯ ಅಧಿಕಾರಿಗಳಾದ ಶ್ರೀ ನಾರಾಯಣ ಹೆಗಡೆ, ಶ್ರೀ ವಿ.ಜೆ.ಕಾರಕೂನ, ಶ್ರೀ ರಾಜಶೇಖರ ,ಶ್ರೀ ಶ್ರೀಧರ, ಶ್ರೀ ಮಹಾಂತಪ್ಪ, ಶ್ರೀ ಶಿವಕುಮಾರ ಬಿರಾದಾರ, ಶ್ರೀ ಕುಶಾಲ, ಶ್ರೀಮತಿ ಕವಿತ, ಶ್ರೀಮತಿ ದಿವ್ಯ, ಶ್ರೀ ಅನೀಲಕುಮಾರ, ಶ್ರೀ ಸುನೀಲ, ಮುಂತಾದವರು ಮಾತನಾಡಿ ಸಂಯುಕ್ತ ಸಹಕಾರಿಯ ಕಾರ್ಯಚಟುಟಿಕೆಗಳ ಬಗ್ಗೆ, ಸೌಹಾರ್ದ ಸಹಕಾರಿ ಕಾಯ್ದೆಯ ಬಗ್ಗೆ, ಸಂಯುಕ್ತ ಸಹಕಾರಿಯ ಸಿಬ್ಬಂದಿಯವರ ಬಗ್ಗೆ ಮತ್ತು ಸಂಯುಕ್ತ ಸಹಕಾರಿ ಹಾಗೂ ಸೌಹಾರ್ದ ಸಹಕಾರಿಗಳ ಆಂತರಿಕ ಸಂಬಂದಗಳ ಬಗ್ಗೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

ನಂತರ ಸಭೆಯನ್ನುದ್ದೇಶಿಸಿ ಮಾತನಾಡಿದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದ ದಿನ 1–1–2001. ಈ ದಿನದ ಜ್ಞಾಪಕಾರ್ಥವಾಗಿ ಪ್ರತಿವರ್ಷ ಸೌಹಾರ್ದ ಸಹಕಾರಿ ದಿನವನ್ನು ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಈ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಪ್ರತಿಯೊಬ್ಬ ಸಹಕಾರಿಯು ತಾನು ಈ ಕ್ಷೇತ್ರಕ್ಕೆ ನೀಡಿರುವ ನೀಡಬಹುದಾದ ಕೊಡುಗೆಯ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳುವ, ಈ ಕ್ಷೇತ್ರದ ಪ್ರಗತಿಯ ಬಗ್ಗೆ ಒಂದು ಸಿಂಹಾವಲೋಕನ ಅಂದರೆ ಇದುವರೆಗೆ ಸಾಧಿಸಿದ ಪ್ರಗತಿಯ ಹಾದಿಯಲ್ಲಿನ ಸವಾಲುಗಳು ಅವಕಾಶಗಳು ಬಗ್ಗೆ ಚಿಂತನೆ ಮಾಡುವುದು ಮತ್ತು ಯಶಸ್ವಿನ ಹಾದಿಯನ್ನು ಸರಳೀಕರಿಸಿ, ಯಶಸ್ವಿನ ಸೂತ್ರಗಳ ಪುನರಾವಲೋಕ ಮಾಡಿ ಅವುಗಳಿಂದ ಸಾಧಿಸಿದ ಪ್ರಗತಿಯ ಪುನರಾವರ್ತನೆ ಮಾಡಿಕೊಳ್ಳುವ ಕಾಲ ಇದಾಗಿದೆ. ಸಮಸ್ಯೆಗಳು ಸವಾಲುಗಳು ಈ ಕ್ಷೇತ್ರಕ್ಕೆ ಹೊಸದೇನಲ್ಲ. ಪ್ರಾರಂಭದಿಂದಲೂ ಇವೆ. ಕೆಲವು ಅಧಿಕಾರಿಗಳು ಪ್ರೋತ್ಸಾಹ ನೀಡುತ್ತಾರೆ. ಕೆಲವು ಅಧಿಕಾರಿಗಳು ಸಹಕರಿಸುವುದಿಲ್ಲ. ಎಲ್ಲವನ್ನು ಸರಿದೂಗಿಸಿಕೊಂಡು ಉತ್ತಮವಾಗಿ ಕಾರ್ಯನಿರ್ವಹಿಸುವಂತಾಗಬೇಕು. ಅವುಗಳನ್ನು ಎದುರಿಸುತ್ತ ಪರಿಹಾರಗಳನ್ನು ಕಂಡುಕೊಳ್ಳುತ್ತ ಪ್ರಗತಿ ಪತಾಕೆಯನ್ನು ಹಾರಿಸುತ್ತ ಮುನ್ನಡೆದಿದೆ. ಮುಂದೆಯೂ ಹೀಗೆಯೇ ಸಾಗುವುದು ನಮ್ಮ ಗುರಿಯಾಗಬೇಕು ಸೌಹಾರ್ದ ಸಹಕಾರಿಗಳ ನಿರೀಕ್ಷೆಗಳಿಗೆ ಸ್ಪಂದಿಸುವುದು ನಮ್ಮ ಪ್ರಥಮ ಕಾರ್ಯವಾಗಬೇಕು ಎಂದು ತಿಳಿಸಿದರು.

ಸೌಹಾರ್ದ ಸಹಕಾರಿ ಕಾಯ್ದೆ ಮತ್ತು ಸೌಹಾರ್ದ ಸಂಯುಕ್ತ ಸಹಕಾರಿ ಈ ದೇಶದಲ್ಲಿ ಒಂದು ವಿಶೇಷ ಹಾಗೂ ವಿಭಿನ್ನ ವ್ಯವಸ್ಥೆಯಾಗಿದೆ. ಸಹಕಾರ ಸಂಘಗಳ ನಿಬಂದಕರ , ಸರಕಾರದ ಕೆಲವು ಅಧಿಕಾರಗಳನ್ನು ನಿರ್ವಹಿಸುವ ಅಧಿಕಾರಗಳನ್ನು ಸಂಯುಕ್ತ ಸಹಕಾರಿಗೆ ನೀಡಿ ಶಾಸನ ಬದ್ಧ ಕಾರ್ಯವನ್ನು ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳಿಂದಲೇ ಆಯ್ಕೆಯಾಗಿರುವ ಜನಪ್ರತಿನಿಧಿಗಳಿಂದಲೆ ನಿರ್ವಹಿಸುವ ಕಾಯ್ದೆ ಇದಾಗಿದೆ. ಈ 25 ವರ್ಷಗಳಲ್ಲಿ ಇದು ವೇಗವಾಗಿ ಬೆಳೆದಿದೆ. ರಾಜ್ಯದ ಸಹಕಾರಿಗಳ, ಸಾರ್ವಜನಿಕರ ಹಾಗೂ ಸರಕಾರದ ಗಮನ ಸೆಳೆದಿದೆ. ಈ ಸೌಹಾರ್ದ ಸಹಕಾರಿ ಕ್ಷೇತ್ರ ಬೆಳೆಯಬೇಕು. ಉತ್ತಮ ಗುಣಮಟ್ಟದ್ದಾಗಬೇಕು,

ಸಂಖ್ಯಾತ್ಮಕವಾಗಿಯೂ ಬೆಳೆಯಬೇಕು ದೇಶಕ್ಕೆ ಮಾದರಿಯಾಗಬೇಕು ಎಂದು ತಿಳಿಸಿ ಈ ನಿಟ್ಟಿನಲ್ಲಿ ಸಂಯುಕ್ತ ಸಹಕಾರಿಯ ಸಿಬ್ಬಂದಿಯವರು ದಕ್ಷತೆ, ಪ್ರಾಮಾಣಿತೆ ವೃತ್ತಿಪರತೆ ಹಾಗೂ ಪಾರದರ್ಶಕತೆಯಿಂದ ಕಾರ್ಯನಿರ್ವಹಿಸುತ್ತ ಈ ಕ್ಷೇತ್ರವನ್ನು ಬೆಳೆಸುವ ಕಾರ್ಯದಲ್ಲಿ ಆಡಳಿತ ಮಂಡಳಿಯವರಗೆ ಸಹಯೋಗ ನೀಡಬೇಕು ಎಂದು ತಿಳಿಸಿದರು.

ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ಅಧಿಕಾರಿಯಾದ ಶ್ರೀ ಸಂಜಯ ಕೋರಟಕರರವರು ನಿರ್ವಹಣೆ ಮಾಡಿದರು.

ಇದೇ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಿಗೆ 2026ರ ಡೈರಿ, ಕ್ಯಾಲೆಂಡರ್ ಮತ್ತು ರಜತ ಮಹೋತ್ಸವದ ಸವಿನೆನಪಿಗಾಗಿ ಗೋಡೆ ಗಡಿಯಾರವನ್ನು ವ್ಯವಸ್ಥಾಪಕ ನಿರ್ದೇಶಕರು ವಿತರಿಸಿದರು.



**ಮೈಸೂರು :** ದಿನಾಂಕ 01.01.2026 ರಂದು ಮೈಸೂರು ಪ್ರಾಂತೀಯ ಕಛೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ನಿಕಟಪೂರ್ವ ನಿರ್ದೇಶಕರಾದ ಹಾಗೂ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರಾದ ಹೆಚ್.ವಿ ರಾಜೀವ್ ಇವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ವೃತ್ತಿಪರ ನಿರ್ದೇಶಕರಾದ ಶ್ರೀ ಮಹದೇವಸ್ವಾಮಿ ರವರು ವಹಿಸಿದ್ದರು.



**ಕಲಬುರಗಿ :** ದಿನಾಂಕ 01.01.2026 ರಂದು ಕಲಬುರಗಿ ಪ್ರಾಂತೀಯ ಕಛೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿಯವರು ನೆರವೇರಿಸಿದರು. ಈ ಸಂದರ್ಭದಲ್ಲಿ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ್, ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್ ಎಸ್ ಪಾಟೀಲ್ ರವರು, ಹಿರಿಯ ಸಹಕಾರಿಗಳಾದ ಶ್ರೀ ಬಾಬುರಾವ್ ಕುಲಕರ್ಣಿ ರವರು ಉಪಸ್ಥಿತರಿದ್ದರು.



**ಬೆಳಗಾವಿ :** ದಿನಾಂಕ 01.01.2026 ರಂದು ಬೆಳಗಾವಿ ಪ್ರಾಂತೀಯ ಕಛೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯ ಧ್ವಜಾರೋಹಣವನ್ನು ಮಾನ್ಯ ಉಪನಿಬಂಧಕರಾದ ಶ್ರೀ ರವಿಂದ್ರ ಪಾಟೀಲ ಇವರು ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಸೌಹಾರ್ದ ಸಹಕಾರಿಗಳ ನಿರ್ದೇಶಕರು ಹಾಗೂ ಪ್ರಾಂತೀಯ ವ್ಯವಸ್ಥಾಪಕರು ಮತ್ತು ಸಿಬ್ಬಂದಿಗಳು ಹಾಜರಿದ್ದರು.

## 24ನೇ ತಂಡದ 10 ದಿನಗಳ ವ್ಯಕ್ತಿತ್ವ ವಿಕಾಸನ ತರಬೇತಿ ದಿನಾಂಕ 09.12.2025 ರಿಂದ 18.12.2025 ರವರೆಗೆ ಮೈಸೂರಿನಲ್ಲಿ "ಯಶಸ್ವಿ ಮುಕ್ತಾಯ"

**ಮೈಸೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವತಿಯಿಂದ 24ನೇ ತಂಡದ 10 ದಿನಗಳ ವ್ಯಕ್ತಿತ್ವ ವಿಕಸನ ವಿಶೇಷ ತರಬೇತಿ ಕಾರ್ಯಕ್ರಮವನ್ನು ದಿನಾಂಕ: 09.12.2025 ರಿಂದ 18.12.2025ರ ವರೆಗೆ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಸಂಸ್ಥೆ ಯಾದವಗಿರಿ, ಮೈಸೂರು, ಇಲ್ಲಿ ಆಯೋಜಿಸಲಾಗಿತ್ತು.

### ಉದ್ಘಾಟನಾ ಕಾರ್ಯಕ್ರಮ



ದಿನಾಂಕ 09.12.2025ರಂದು ಉದ್ಘಾಟನಾ ಕಾರ್ಯಕ್ರಮವನ್ನು ಶ್ರೀ ಮಹಾ ಮೇದಾನಂದ ಸ್ವಾಮೀಜಿ ಮಾನ್ಯ ಸಂಚಾಲಕರು, ರಾಮಕೃಷ್ಣ ನೈತಿಕ ಮತ್ತು ಅಧ್ಯಾತ್ಮಿಕ ಶಿಕ್ಷಣ ಸಂಸ್ಥೆ ಮೈಸೂರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಸಿ.ಎನ್ ಪರಶಿವಮೂರ್ತಿ ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು (ನಿ), ಮೈಸೂರು, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ., ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಮಹದೇವಸ್ವಾಮಿ, ಶ್ರೀ ಹೆಚ್.ವಿ ರಾಜೀವ್ ಮಾನ್ಯ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶ್ರೀ ಮಹಾ ಮೇದಾನಂದ ಸ್ವಾಮೀಜಿ ಮಾನ್ಯ ಸಂಚಾಲಕರು, ರಾಮಕೃಷ್ಣ ನೈತಿಕ

ಮತ್ತು ಅಧ್ಯಾತ್ಮಿಕ ಶಿಕ್ಷಣ ಸಂಸ್ಥೆ ಮೈಸೂರು. ಸಹಕಾರ ಕ್ಷೇತ್ರದ ವ್ಯಾಪ್ತಿ ಹಾಗೂ ಸಾಧನೆಯನ್ನು ನೋಡಿ ಸಂತೋಷವಾಗಿದೆ. ಸೌಹಾರ್ದ ಸಹಕಾರಿಗಳ ವಿವಿಧ ರೀತಿಯ ಚಟುವಟಿಕೆಗಳು ಸಹ ಮೆಚ್ಚುವಂತಹದ್ದಾಗಿದೆ. ಸೌಹಾರ್ದ ಸಹಕಾರಿಗಳ ಉತ್ತಮ ಕಾರ್ಯನಿರ್ವಹಣೆಗೆ ಈ ರೀತಿಯ ತರಬೇತಿ ಕಾರ್ಯಕ್ರಮಗಳಿಂದ ಸಿಬ್ಬಂದಿಗಳು ಕೌಶಲ್ಯ ಹೆಚ್ಚಿಸಿಕೊಳ್ಳುವ ಈ ರೀತಿಯ ತರಬೇತಿ ಕಾರ್ಯಕ್ರಮಗಳನ್ನು ನಿರಂತರವಾಗಿ ಮತ್ತು ಉತ್ತಮವಾಗಿ ಹಮ್ಮಿಕೊಳ್ಳುತ್ತಿರುವ ಸಂಯುಕ್ತ ಸಹಕಾರಿಯ ಕಾರ್ಯ ಹೆಮ್ಮೆಯ ವಿಷಯವಗಿದೆ. ಸಿಬ್ಬಂದಿಗಳು ಪ್ರಾಮಾಣಿಕವಾಗಿ, ಶಿಸ್ತುಬದ್ಧವಾಗಿ ಕೆಲಸವನ್ನು ನಿರ್ವಹಿಸಬೇಕು. ಈ ಆಶ್ರಮದಲ್ಲಿ ನಡೆಯುತ್ತಿರುವ ಸಂಯುಕ್ತ ಸಹಕಾರಿಯ 2ನೇ ಕಾರ್ಯಕ್ರಮವಾಗಿದೆ ಎಂದು ತಿಳಿಸಿದರು.

ಸಹಕಾರಿ ಸಿಬ್ಬಂದಿಗಳಲ್ಲಿ ದಕ್ಷತೆ ಹಾಗೂ ಪ್ರಾಮಾಣಿಕತೆಯ ವ್ಯಕ್ತಿತ್ವವನ್ನು ರೂಪಿಸುತ್ತದೆ. ಶ್ರೀ ಜಿ ನಂಜನಗೌಡ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡರವರು ಮಾತನಾಡಿ, 1997ನೇ ತಿದ್ದುಪಡಿ ಕಾಯ್ದೆ ಅನ್ವಯದಡಿಯಲ್ಲಿ ಸಹಕಾರಿಗಳು ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಮಾಹಿತಿ ನೀಡಿದರು. ಸಹಕಾರಿ ಸಂಘದ ಪ್ರತಿಯೊಬ್ಬರು ದಕ್ಷತೆಯಿಂದ ಹಾಗೂ ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸಿದರೆ ಮಾತ್ರ ಸಹಕಾರ ಕ್ಷೇತ್ರ ಬೆಳೆಯಲು ಸಾಧ್ಯವೆಂದು ತಿಳಿಸಿದರು. ಹತ್ತದಿನಗಳ ತರಬೇತಿ ಪಡೆದುಕೊಂಡು ಉತ್ತಮವಾದ ಕೌಶಲ್ಯವನ್ನು ರೂಪಿಸಿಕೊಂಡು ಇನ್ನೂ ಹೆಚ್ಚಿನ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಸಿಬ್ಬಂದಿಯವರ ಕಾರ್ಯಕ್ಷಮತೆ ಹೆಚ್ಚುತ್ತದೆ ಎಂದು ತಿಳಿಸಿದರು.

ವ್ಯಕ್ತಿತ್ವ ವಿಕಸನಕ್ಕೆ ಪೂರಕ ಶ್ರೀ ಶರಣಗೌಡ ಜಿ. ಪಾಟೀಲ ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಪ್ರಾಸ್ತಾವಿಕ ಮಾತನಾಡುತ್ತಾ, ರಾಜ್ಯದ ಸೌಹಾರ್ದ ಸಹಕಾರಿಯ ಸಿಬ್ಬಂದಿಗಳಿಗೆ ಈ ರೀತಿ ತರಬೇತಿ ಕಾರ್ಯಕ್ರಮವನ್ನು ನೀಡುತ್ತಾ ಬಂದ್ದಿದೆವೆ. ಪ್ರಸ್ತುತ ಇದು 24ನೇ ತಂಡವಾಗಿರುತ್ತದೆ. ದಿನಾಂಕ 09.12.2025 ರಿಂದ 18.12.2025ರವರೆಗೆ, ಹಮ್ಮಿಕೊಂಡಿರುವ ಈ ತರಬೇತಿಯಲ್ಲಿ ರಾಜ್ಯದ 26 ಜಿಲ್ಲೆಗಳಿಂದ 62 ಸೌಹಾರ್ದ ಸಹಕಾರಿಗಳಿಂದ 84 ಜನ ಸಿಬ್ಬಂದಿಗಳು ಭಾಗವಹಿಸಿ ಪ್ರಯೋಜನ ಪಡೆಯಲಿದ್ದಾರೆ. ಈ ತರಬೇತಿಯಲ್ಲಿ ಸುಮಾರು 30ಕ್ಕಿಂತ ಹೆಚ್ಚು ವಿಷಯಗಳನ್ನು ಅಳವಡಿಸಲಾಗಿದ್ದು, 28ಕ್ಕೂ ಹೆಚ್ಚು ಸಂಪನ್ಮೂಲ ವ್ಯಕ್ತಿಗಳು ಆಗಮಿಸಿ ಉಪನ್ಯಾಸ ನೀಡಲಿದ್ದಾರೆ. ಇದಕ್ಕೆ ಸಂಬಂದಿಸಿದಂತೆ ಅಧ್ಯಯನ ಸಾಹಿತ್ಯವನ್ನು ಸಹ ನೀಡಲಾಗಿದೆ. ಈ ಕಾರ್ಯಕ್ರಮದ ಸ್ವಾಗತ ಭಾಷಣವನ್ನು ಮೈಸೂರು ಪ್ರಾಂತೀಯ ಅಧಿಕಾರಿಯವರಾದ ಶ್ರೀ ಗುರುಪ್ರಸಾದ್ ಬಂಗೇರ ಇವರು ನೆರವೇರಿಸಿದರು. ಪ್ರಾರ್ಥನೆಯನ್ನು ಶ್ರೀಮತಿ ಸುಷ್ಮಾ ಮತ್ತು ರಂಜಿತರವರು ನಡೆಸಿಕೊಟ್ಟರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಕವಿತಾ ಆರ್ ಇವರು ನಡೆಸಿಕೊಟ್ಟರು. ಕಾರ್ಯಕ್ರಮದ ವಂದನಾರ್ಪಣೆಯನ್ನು ಶ್ರೀ ಬಾಬು ಪಠಾಣ ನೆರವೇರಿಸಿದರು.

**10 ದಿನಗಳ ವ್ಯಕ್ತಿತ್ವ ವಿಕಸನದ ಚಟುವಟಿಕೆಗಳು – ವಿಷಯಗಳು ಹಾಗೂ ಉಪನ್ಯಾಸಗಳು :** ತರಬೇತಿಯಲ್ಲಿ 30 ವಿಷಯಗಳನ್ನು ಅಳವಡಿಸಲಾಗಿತ್ತು. ಸಂಯುಕ್ತ ಸಹಕಾರಿಯ ಅಧಿಕಾರಿಗಳು, ಸಹಕಾರಿ ತಜ್ಞರುಗಳು ಮತ್ತು ಬ್ಯಾಂಕಿಂಗ್ ಕ್ಷೇತ್ರದ ಅನುಭವವಿರುವ ಕಾರ್ಪೋರೇಟ್ ತರಬೇತಿದಾರರು ಹಾಗೂ ಸಹಕಾರ ಸಂಘಗಳಲ್ಲಿ ಕಾರ್ಯನಿರ್ವಸಿದ ಅಧಿಕಾರಿಗಳು ಭಾಗವಹಿಸಿ, ತರಬೇತಿಯಲ್ಲಿ ಉಪನ್ಯಾಸ ನೀಡಿದರು.

**ಪ್ರಾಯೋಗಿಕಗಳು :**

1. ವಿವಿಧ ತಂಡಗಳನ್ನು ರಚಿಸಿ, ಪ್ರತಿ ನಿತ್ಯದ ಕಾರ್ಯಕ್ರಮಗಳ ನಿರ್ವಹಣೆ ಮಾಡುವುದು, ಪ್ರಾರ್ಥನೆ, ದಿನದ ಸುವಿಚಾರ ಹೇಳಿಸುವುದು, ಹಿಂದಿನ ದಿನದ ತರಬೇತಿ ಕಾರ್ಯಕ್ರಮದ ಸಾರಾಂಶ ಮಿಲಿ ಹೇಳುವುದು, ಪ್ರತಿದಿನದ ವರದಿಗಳನ್ನು ಪ್ರತಿ ತಂಡದವರು ಸಾಮೂಹಿಕವಾಗಿ ಕುಳಿತು ಸಿದ್ಧಪಡಿಸಿ ಸಲ್ಲಿಸುವುದು.
2. ಸಭೆಗಳನ್ನು ನಡೆಸುವುದು, ಆಡಳಿತ ಮಂಡಲಿ ಸಭೆಯ ನೋಟೀಸು ಸಿದ್ಧಪಡಿಸುವುದು, ನಡವಳಿಕೆಗಳನ್ನು ಬರೆಯುವುದು, ವಾರ್ಷಿಕ ಸಾಮಾನ್ಯ ಸಭೆಯ ನೋಟೀಸು ಸಿದ್ಧಪಡಿಸುವುದು.
3. ಕ್ರಿಯಾ ಯೋಜನೆ ಸಿದ್ಧಪಡಿಸುವುದು.
4. ಲಾಭ–ನಷ್ಟ ತಃಖ್ತೆ, ವ್ಯಾಪಾರಿ ತಃಖ್ತೆ ಹಾಗೂ ಆಸ್ತಿ–ಜವಾಬ್ದಾರಿ ತಃಖ್ತೆಗಳನ್ನು ಸಿದ್ಧಪಡಿಸುವುದು
5. ಸಾಲ ವಸೂಲಾತಿ, ದಾವಾ ದಾಖಲಾತಿಗಳ ನಿರ್ವಹಣೆ.
6. ಶಕ್ತಿ, ಸಾಮರ್ಥ್ಯ, ದೌರ್ಬಲ್ಯಗಳು, ಅವಕಾಶಗಳು ಹಾಗೂ ಸವಾಲುಗಳ ನಿರ್ವಹಣೆಯ ಪ್ರಾಯೋಗಿಕಗಳನ್ನು ನಡೆಸಲಾಯಿತು

ಎಲ್ಲಾ ಪ್ರಾಯೋಗಿಕಗಳಲ್ಲಿ ಶಿಬಿರಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿ ಪ್ರಯೋಜನ ಪಡೆದರು.

**ತರಬೇತಿಯೇತರ ಚಟುವಟಿಕೆಗಳು :** ಕನ್ನಡ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ ಇತ್ಯಾದಿಗಳ ಬಗ್ಗೆ ಕ್ವಿಜ್ ಕಾರ್ಯಕ್ರಮವನ್ನು ಶ್ರೀ ಬಿ.ಎಸ್. ಚಂದ್ರಶೇಖರ್‌ರವರು ನಡೆಸಿಕೊಟ್ಟರು.

**ಸಾಂಸ್ಕೃತಿಕ ಕಾರ್ಯಕ್ರಮ :** ತರಬೇತಿ ಅವಧಿಯಲ್ಲಿ ಶ್ರೀ ಮಹಾ ಮೇದಾನಂದ ಸ್ವಾಮೀಜಿ ಧ್ಯಾನ, ಭಜನೆ, ಆಧ್ಯಾತ್ಮಿಕ ಹಾಗೂ ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.

**ಯೋಗ ಕಾರ್ಯಕ್ರಮ :** ಶಿಬಿರಾರ್ಥಿಗಳಲ್ಲಿ ಆರೋಗ್ಯದ ಬಗ್ಗೆ ಅರಿವು ಮೂಡಿಸುವುದಕ್ಕಾಗಿ ಮತ್ತು ಅವರುಗಳು ನಿರಂತರ ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸುವಂತೆ ಪೂರಕವಾಗಲು ಪ್ರತಿದಿನ ಬೆಳಗ್ಗೆ 6.30 ರಿಂದ 7.30ರವರೆಗೆ ಮಹಿಳೆರಿಗೆ ಹಾಗೂ ಪುರುಷರಿಗೆ ಪ್ರತ್ಯೆಕವಾಗಿ ಯೋಗ ತರಬೇತಿಯ ವ್ಯವಸ್ಥೆ ಮಾಡಲಾಗಿತ್ತು. ಈ ಯೋಗ ತರಬೇತಿಯನ್ನು ಶ್ರೀ ಸಿ.ಎನ್ ಪ್ರಕಾಶ ಹಾಗೂ ಶ್ರೀಮತಿ ಕಾಂಚನ ಗಂಗಾರವರು ನಡೆಸಿಕೊಟ್ಟರು.

ಯಾಚನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಕ್ಯಾತೇಗೌಡರವರು ಯಾಚನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಸಾಧನೆ ಹಾಗೂ ಬೆಳವಣಿಗೆಯ ಬಗ್ಗೆ ಮಾಹಿತಿ ನೀಡಿದರು.

**ಅಧ್ಯಯನ ಪ್ರವಾಸ :** ದಿನಾಂಕ 17.12.2025 ರಂದು ಶಿಬಿರಾರ್ಥಿಗಳಿಗೆ ಶ್ರೀ ಚಾಮುಂಡೇಶ್ವರಿ ತಾಯಿ ದರ್ಶನ ಪಡೆಯಲಾಯಿತ್ತು. ನಂತರ ಉತ್ತಮ ಸೌಹಾರ್ದ ಸಹಕಾರಿ ಸಂಸ್ಥೆಯಾದ ಸಪ್ತರ್ಷಿ ಸೌಹಾರ್ದ ಸಹಕಾರಿ ಸಂಸ್ಥೆಯನ್ನು ಭೇಟಿ ಮಾಡಿ ಮಾಹಿತಿಯನ್ನು ಪಡೆಯಲಾಯಿತ್ತು. ಮೈಸೂರು ಹಾಲು ಉತ್ಪಾದಕರ ಒಕ್ಕೂಟ ಮೈಸೂರು (ಡೈರಿಗೆ) ಭೇಟಿ ನೀಡಲಾಯಿತು. ಮೈಸೂರಿನ ಪ್ರಸಿದ್ದ ತಾಣವಾದ ಅರಮನೆ, ಶ್ರೀರಂಗಪಟ್ಟಣ, ನಿಮಿಶಾಂಭ ದೇವಾಲಯ ಹಾಗೂ ರಂಗನತಿಟ್ಟು ಪಕ್ಷಿಧಾಮವನ್ನು ವಿಕ್ಷಿಸಲಾಯಿತ್ತು.

**ಪರೀಕ್ಷೆ :** ದಿನಾಂಕ 18.12.2025ರಂದು ಪರೀಕ್ಷೆಯನ್ನು ಆನ್‌ಲೈನ್ ಮೂಲಕ ನಡೆಸಲಾಯಿತು. ಪ್ರಥಮ, ದ್ವಿತೀಯ, ತೃತೀಯ, ಹಾಗೂ ಸಮಾದಾನಕರ ಬಹುಮಾನಗಳನ್ನು ನಗದು ರೂಪದಲ್ಲಿ ನೀಡಲಾಯಿತು.

**ಸಮಾರೋಪ ಕಾರ್ಯಕ್ರಮ :**



ಸಮಾರೋಪ ಕಾರ್ಯಕ್ರಮವನ್ನು ದಿನಾಂಕ 18.12.2025ರಂದು ಶಿಬಿರಾರ್ಥಿಗಳೇ ಆಯೋಜನೆ ಮಾಡಿದ್ದರು. ಶ್ರೀ ಮೇದಾನಂದ ಸ್ವಾಮೀಜಿ ಮಾನ್ಯ ಸಂಚಾಲಕರು, ರಾಮಕೃಷ್ಣ ನೈತಿಕ ಮತ್ತು ಅಧ್ಯಾತ್ಮಿಕ ಶಿಕ್ಷಣ ಸಂಸ್ಥೆ ಮೈಸೂರು, ಇವರು ಉದ್ಘಾಟನೆಯನ್ನು ನೆರವೇರಿಸಿದರು.

**ಸಹಕಾರಿ ಸಿಬ್ಬಂದಿಯವರ ಪಾತ್ರ ಮಹತ್ವದ್ದು:** ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಮಹದೇವಸ್ವಾಮಿ, ಇವರು ವಹಿಸಿ ಮಾತನಾಡಿದ ಇವರು ಸಂಯುಕ್ತ ಸಹಕಾರಿಯು ವಿವಿಧ ರೀತಿಯ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಲಿದೆ. ಅದರಲ್ಲೂ ವಿಶೇಷವಾಗಿ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿಯನ್ನು ವಿಶೇಷ ಕಾರ್ಯಕ್ರಮವಾಗಿದೆ. ತಾವು ಈ ಕಾರ್ಯಕ್ರಮದ ಪ್ರಯೋಜನ ಪಡೆದುಕೊಂಡಿದ್ದಿರಾ. ಉತ್ತಮವಾಗಿ ಮತ್ತು ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.

**ಸಿಬ್ಬಂದಿಗಳು ಸೇವಾ ಮನೋಭಾವನೆ ಬೆಳೆಸಿಕೋಳಬೇಕು:** ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಸಿ.ಎನ್ ಪರಶಿವಮೂರ್ತಿ ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು(ನಿ), ಮೈಸೂರು, ಮಾತನಾಡಿದ ಇವರು ಸಿಬ್ಬಂದಿಗಳು ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಬೇಕು. ಸಿಬ್ಬಂದಿಗಳು ಸೇವಾ ಮನೋಭಾವನೆ ಬೆಳೆಸಿಕೊಳ್ಳಬೇಕು ಸಂಸ್ಥೆಯ ನೀತಿ ನೇಮಕಗಳಿಗೆ ಬದ್ದರಾಗಿ ಕೆಲಸ ಮಾಡಬೇಕು ಎಂದು ಹೇಳಿದ್ದರು. ಶ್ರೀ ಬೀರೆಂದ್ರ ಮಾನ್ಯ ಸಹಕಾರ ಸಂಘಗಳ ಉಪನಿಬಂಧಕರು ಮೈಸೂರು ಹಾಗೂ ಶ್ರೀ ನಾರಾಯಣ ರಾವ್, ಮಾನ್ಯ ಅಧ್ಯಕ್ಷರು ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ, ಮೈಸೂರು ಹಾಗೂ ಶ್ರೀ ವಿಜಯ ಕುಮಾರ್ ಜಿ.ಆರ್ ಮಾನ್ಯ ಸಹಕಾರ ಸಂಘಗಳ ಉಪನಿಬಂಧಕರು, ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ ಬೆಂಗಳೂರು ಇವರು ಭಾಗವಹಿಸಿದ್ದರು.

**ಶಿಬಿರಾರ್ಥಿಗಳ ಆಯ್ದೆ ಅನಿಸಿಕೆಗಳು :**

ಕಾರ್ಯಕ್ರಮವನ್ನು ಅತ್ಯಂತ ಶಿಸ್ತಿನಿಂದ, ವ್ಯವಸ್ಥಿತವಾಗಿ ನಡೆಸಲಾಗಿದೆ. ನಮ್ಮ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿದೆ. ಬಹಳ ಒಳ್ಳೆಯ ಶಿಬಿರ, ಉತ್ತಮ ವಿಷಯಗಳು ಹಾಗೂ ಸಂಪನ್ಮೂಲ ವ್ಯಕ್ತಿಗಳ ಆಯ್ಕೆ ಉತ್ತಮವಾಗಿತ್ತು ಎಂಬುದಾಗಿ ತಿಳಿಸಿದ್ದಾರೆ.

**ಬಹುಮಾನ ಹಾಗೂ ಪ್ರಶಸ್ತಿ ಪತ್ರಗಳ ವಿತರಣೆ :**



ಶಿಬಿರದಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಶಿಬಿರಾರ್ಥಿಗಳಿಗೆ ಸಂಯುಕ್ತ ಸಹಕಾರಿಯ ವತಿಯಿಂದ ಬಹುಮಾನಗಳನ್ನು ಮತ್ತು ಎಲ್ಲಾ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ನೀಡಲಾಯಿತು.

**ವಿವಿಧ ಕಾರ್ಯಕ್ರಮಗಳಲ್ಲಿನ ಬಹುಮಾನ ಪಡೆದ ಶಿಬಿರಾರ್ಥಿಗಳು**

1. ಉತ್ತಮವಾದ ಸುವಿಚಾರ – ಶ್ರೀ ಮನೋಜ್
2. ಉತ್ತಮವಾದ ಮಿಲಿ – ಶ್ರೀ ಮಾಧನ್ ಶಟ್ಟಿ
3. ತಕ್ಷಣ ಮಿಲಿ – ಕುಮಾರಿ ನಂದಿನಿ

**4. ಉತ್ತಮ ತಂಡ :**

1. ಉತ್ತಮ ವ್ಯವಸ್ಥಾಪನಾ ತಂಡ : ಸ್ವಾಮೀವಿವೇಕಾನಂದ ತಂಡ
2. ಉತ್ತಮ ಸಮಯಪಲನೆ ತಂಡ : ನರೇಂದ್ರ ತಂಡ
3. ಉತ್ತಮ ಊಟೋಪಚಾರದ ತಂಡ : ಶರಾವತಿ ತಂಡ
4. ಉತ್ತಮ ಮನೋರಂಜನಾ ತಂಡ : ಕಾವೇರಿ ತಂಡ
5. ಉತ್ತಮ ಶಿಭಿರಾರ್ಥಿ ಮಹಿಳಾ ವಿಭಾಗ : ಶ್ರೀಮತಿ ಸುಷ್ಮಾ
   ಪುರುಷ ವಿಭಾಗ : ಶ್ರೀ ಎಂ.ಎಸ್ ಡಂಗಿ
6. ಉತ್ತಮ ಪ್ರಾರ್ಥನೆ – ಶ್ರೀರಂಜಿತ

**ಪರೀಕ್ಷೆಯಲ್ಲಿ ವಿಜೇತರಾದ ಶಿಬಿರಾರ್ಥಿಗಳು :**

1) ಪ್ರಥಮ ಬಹುಮಾನ : ಶ್ರೀ ದೇವರಾಜ ಪಾಟೀಲ
2) ದ್ವಿತೀಯ ಬಹುಮಾನ : ಶ್ರೀ ಅರುಣುಕುಮಾರ್
3) ತೃತೀಯ ಬಹುಮಾನ :
ಶ್ರೀ ಪವನ್ ಕುಲಕರ್ಣಿ, ರಕ್ಷೀತ್ ಹಾಗೂ ಯೋಗೆಶ ಬಿ.ಕೆ
4) ಸಮಾಧಾನಕರ ಬಹುಮಾನ :
ಶ್ರೀ ಮಾಧನ್ ಶಟ್ಟಿ ಹಾಗೂ ಎಂ.ಎಸ್ ಡಂಗಿ.

ಶಿಬಿರಾರ್ಥಿಗಳು ತಮ್ಮ ತಂಡದ ನೆನಪಿನ ಕಾಣಿಕೆಯಾಗಿ ನೆನಪಿನ ಕಾಣಿಕೆಯನ್ನು ಸಂಯುಕ್ತ ಸಹಕಾರಿಗೆ ನೀಡಿದರು.

# ರಾಜ್ಯದ ವಿವಿಧ ಭಾಗಗಳಲ್ಲಿ ಸೌಹಾರ್ದ ಸಹಕಾರಿಗಳ 2025-26ನೇ ಸಾಲಿನ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಪ್ರಗತಿ ಪರಿಶೀಲನಾ ಸಭೆಗಳು



**ಬೆಂಗಳೂರು** : ದಿನಾಂಕ 12.12.2025ರಂದು ಬೆಂಗಳೂರು ನಗರದ 4ನೇ ವಲಯ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಸೌಹಾರ್ದ ಸಹಕಾರಿ ಸೌಧ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಸಹಕಾರ ಸಂಘಗಳ ಮಾನ್ಯ ಸಹಾಯಕ ನಿಬಂಧಕರು ಹಾಗೂ ಸಂಯುಕ್ತ ಸಹಕಾರಿಯ ದಾವಾ ಪಂಚಾಯತಿ ನ್ಯಾಯಾಲಯದ ವಸೂಲಾಧಿಕಾರಿಗಳಾದ ಶ್ರೀ ಹರೀಶ್ ಬಿ.ವಿ ಇವರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಎಸ್. ಗುಂಡುರಾವ್ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಗುರುನಾಥ ಜ್ಯಾಂತಿಕರ ರವರು ಉಪಸ್ಥಿತರಿದ್ದರು. ಪ್ರಾಸ್ತಾವಿಕ ನುಡಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜೀ ಪಾಟೀಲ ರವರು ನೆರವೇರಿಸಿದರು. ಸ್ವಾಗತವನ್ನು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ನಡೆಸಿಕೊಟ್ಟರು. ಶ್ರೀ ಲಿಯಾಕತ್ ಅಲಿ, ಸಹಕಾರಿ ಇಲಾಖೆಯ ನಿವೃತ್ತ ಸಹಾಯಕ ನಿಬಂಧಕರು ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಉಪನ್ಯಾಸ ನೀಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರವಿಕುಮಾರ್ ಕೆ.ಆರ್. ರವರು ನಡೆಸಿಕೊಟ್ಟರು. ಸಭೆಯಲ್ಲಿ 66 ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರು ಭಾಗವಹಿಸಿದ್ದರು.



**ಬೆಂಗಳೂರು** : ದಿನಾಂಕ 11.12.2025ರಂದು ಬೆಂಗಳೂರು ನಗರದ 1ನೇ ವಲಯದ ಸೌಹಾರ್ದ ಸಹಕಾರಿಗಳಿಗಾಗಿ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಸೌಹಾರ್ದ ಸಹಕಾರಿ ಸೌಧ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಸಹಕಾರ ಸಂಘಗಳ ಮಾನ್ಯ ಉಪ ನಿಬಂಧಕರು ಹಾಗೂ ಸಂಯುಕ್ತ ಸಹಕಾರಿಯ ದಾವಾ ಪಂಚಾಯತಿ ನ್ಯಾಯಾಲಯದ ಪೀಠಾಧಿಕಾರಿಗಳಾದ ಶ್ರೀ ವಿಜಯ್ ಕುಮಾರ್ ಜಿ.ಆರ್ ಇವರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಎಸ್. ಗುಂಡುರಾವ್ ರವರು ವಹಿಸಿದ್ದರು. ಪ್ರಾಸ್ತಾವಿಕ ನುಡಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ನೆರವೇರಿಸಿದರು. ಸ್ವಾಗತವನ್ನು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ನಡೆಸಿಕೊಟ್ಟರು. ಶ್ರೀ ನಾಗರಾಜಯ್ಯ ಹೆಚ್.ಎಸ್. ಮಾನ್ಯ ನಿವೃತ್ತ ಅಪರ ನಿಬಂಧಕರು, ಸಹಕಾರ ಇಲಾಖೆ ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಉಪನ್ಯಾಸ ನೀಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರವಿಕುಮಾರ್ ಕೆ.ಆರ್ ರವರು ನಡೆಸಿಕೊಟ್ಟರು. ಸಭೆಯಲ್ಲಿ 63 ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರು ಭಾಗವಹಿಸಿದ್ದರು.



**ಚಿತ್ರದುರ್ಗ** : ದಿನಾಂಕ 16.12.2025ರಂದು ಚಿತ್ರದುರ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ, ಐಯುಡಿಪಿ ಲೇಔಟ್ ಶಾಖೆ, ಸರ್ವೀಸ್ ರಸ್ತೆ, 5ನೇ ತಿರುವು, ಐಯುಡಿಪಿ ಲೇಔಟ್, ಚಿತ್ರದುರ್ಗ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಸಹಕಾರ ಸಂಘಗಳ ಮಾನ್ಯ ಉಪನಿಬಂಧಕರಾದ ಶ್ರೀ ದಿಲೀಪ್ ಕುಮಾರ್ ಇವರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ರಘುರಾಮ ರೆಡ್ಡಿ ರವರು ವಹಿಸಿದ್ದರು. ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ನೆರವೇರಿಸಿದರು. ಶ್ರೀ ಬಿ.ವಿ. ರವೀಂದ್ರನಾಥ್, ಸಾಗರ ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಉಪನ್ಯಾಸ ನೀಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ರವರು ನಡೆಸಿಕೊಟ್ಟರು. ಸಭೆಯಲ್ಲಿ 49 ಸೌಹಾರ್ದ ಸಹಕಾರಿಗಳಿಂದ 56 ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರು ಭಾಗವಹಿಸಿದ್ದರು.



**ಚಿಕ್ಕಬಳ್ಳಾಪುರ :** ದಿನಾಂಕ 18.12.2025ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಚಿಕ್ಕಬಳ್ಳಾಪುರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನ, ಚಿಕ್ಕಬಳ್ಳಾಪುರ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಸಹಕಾರ ಸಂಘಗಳ ಮಾನ್ಯ ಉಪನಿಬಂಧಕರಾದ ಶ್ರೀ ಶಂಕರ್ ರವರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಅಮರ್, ಮಾನ್ಯ ಅಧ್ಯಕ್ಷರು, ಕೋಲಾರ ಮತ್ತು ಚಿಕ್ಕಬಳ್ಳಾಪುರ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ, ಚಿಕ್ಕಬಳ್ಳಾಪುರ ಜಿಲ್ಲೆ ಇವರು ಉಪಸ್ಥಿತರಿದ್ದರು. ಸಭೆಯ ಸ್ವಾಗತ ಮತ್ತು ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರವಿಕುಮಾರ್ ಕೆ.ಆರ್. ರವರು ನಡೆಸಿಕೊಟ್ಟರು. ವಂದನಾರ್ಪಣೆಯನ್ನು ಕಿರಿಯ ಅಧಿಕಾರಿಗಳಾದ ಶ್ರೀ ಭವನ್ ರಾವ್ ರವರು ನಡೆಸಿಕೊಟ್ಟರು. 36 ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರು ಭಾಗವಹಿಸಿದ್ದರು



**ತುಮಕೂರು :** ದಿನಾಂಕ 18.12.2025ರಂದು ತುಮಕೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಶಿವಾಜಿ ಸೌಹಾರ್ದ ಸಹಕಾರಿ ಸಂಘ ನಿ, ಎಸ್ಎಸ್‌ಪುರಂ ಶಾಖೆ, ತುಮಕೂರು ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಸಹಕಾರ ಸಂಘಗಳ ಮಾನ್ಯ ಉಪನಿಬಂಧಕರಾದ ಶ್ರೀ ಹೆಚ್. ಮೂರ್ತಿ ರವರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮಾನ್ಯ ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ಓಬಲೇಶ್, ಸಂಯುಕ್ತ ಸಹಕಾರಿಯ ನಿಕಟಪೂರ್ವ ನಿರ್ದೇಶಕರಾದ ಶ್ರೀ ಬಿ. ಗಂಗಾಧರಯ್ಯ, ತುಮಕೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್. ಲಕ್ಷ್ಮೀನಾರಾಯಣ, ಶಿವಾಜಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಟಿ.ಎಲ್. ಸುರೇಶ್ ರಾವ್ ರವರು ಉಪಸ್ಥಿತರಿದ್ದರು. ಸಭೆಯ ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ನಡೆಸಿಕೊಟ್ಟರು. ಸ್ವಾಗತ ಮತ್ತು ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ನಡೆಸಿಕೊಟ್ಟರು. ಶ್ರೀ ಲಿಯಾಕತ್ ಅಲಿ, ಸಹಕಾರಿ ಇಲಾಖೆಯ ನಿವೃತ್ತ ಸಹಾಯಕ ನಿಬಂಧಕರು ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಉಪನ್ಯಾಸ ನೀಡಿದರು. 139 ಸೌಹಾರ್ದ ಸಹಕಾರಿಗಳಿಂದ 148 ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರು ಭಾಗವಹಿಸಿದ್ದರು.



**ಬೆಂಗಳೂರು :** ದಿನಾಂಕ 19.12.2025ರಂದು ಬೆಂಗಳೂರು ನಗರದ 2&3ನೇ ವಲಯ ಹಾಗೂ ರಾಮನಗರ(ಬೆಂಗಳೂರು ದಕ್ಷಿಣ ಜಿಲ್ಲೆ) ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಉದಯ ಸೌಹಾರ್ದ ಸಹಕಾರಿ ಸಂಘ ನಿ, ಹನುಮಂತನಗರ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಸಹಕಾರ ಸಂಘಗಳ ಮಾನ್ಯ ಉಪ ನಿಬಂಧಕರು ಹಾಗೂ ಸಂಯುಕ್ತ ಸಹಕಾರಿಯ ದಾವಾ ಪಂಚಾಯತಿ ನ್ಯಾಯಾಲಯದ ಪೀಠಾಧಿಕಾರಿಗಳಾದ ಶ್ರೀ ವಿಜಯ್ ಕುಮಾರ್ ಜಿ.ಆರ್ ಇವರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಎಸ್. ಗುಂಡುರಾವ್ ರವರು ವಹಿಸಿದ್ದರು. ಪ್ರಾಸ್ತಾವಿಕ ನುಡಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜೀ ಪಾಟೀಲ ರವರು ನೆರವೇರಿಸಿದರು. ಸ್ವಾಗತವನ್ನು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ನಡೆಸಿಕೊಟ್ಟರು. ಶ್ರೀ ನಾಗರಾಜಯ್ಯ ಹೆಚ್.ಎಸ್. ಮಾನ್ಯ ನಿವೃತ್ತ ಅಪರ ನಿಬಂಧಕರು, ಸಹಕಾರ ಇಲಾಖೆ ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಉಪನ್ಯಾಸ ನೀಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರವಿಕುಮಾರ್ ಕೆ.ಆರ್ ರವರು ನಡೆಸಿಕೊಟ್ಟರು. ಸಭೆಯಲ್ಲಿ 66 ಸೌಹಾರ್ದ ಸಹಕಾರಿಗಳಿಂದ 78 ಜನ ಮುಖ್ಯ ಕಾರ್ಯನಿರ್ವಾಹಕರು ಭಾಗವಹಿಸಿದ್ದರು.



**ಯಾದಗಿರಿ** : 05.12.2025 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ಬೆಂಗಳೂರು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಯಾದಗಿರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಳೆಯ ಸರ್ಕಾರಿ ಆಸ್ಪತ್ರೆಯ ಮುಂಭಾಗ ಯಾದಗಿರಿಯಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟಕರಾಗಿ ಯಾದಗಿರಿ ಜಿಲ್ಲೆಯ ಸಹಕಾರ ಸಂಘಗಳ ಮಾನ್ಯ ಉಪನಿಬಂಧಕರು ಹಾಗೂ ಕಲಬುರಗಿ ಡಿಸಿಸಿ ಬ್ಯಾಂಕಿನ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಪವನಕುಮಾರ ರಾಠೋಡ ರವರು ನೆರವೆರಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿಯವರು ನೆರವೆರಸಿದರು. ಕಾರ್ಯಕ್ರಮದ ಪ್ರಾಸ್ತವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರು ನುಡಿದರು ಮತ್ತು ಮುಖ್ಯಕಾರ್ಯನಿರ್ವಾಹಕರ ಜವಾಬ್ದಾರಿ ಮತ್ತು ಕರ್ತವ್ಯಗಳ ಕುರಿತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ಉಪನ್ಯಾಸ ನೀಡಿದರು. ಸಭೆಯಲ್ಲಿ 32 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.



**ಕಲಬುರಗಿ** : 06.12.2025 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಕಲಬುರಗಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಪ್ರಾಂತೀಯ ಕಛೇರಿ ಕಲಬುರಗಿಯ ತರಬೇತಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾ–ರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿಯವರು ವಹಿಸಿದ್ದರು. ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶೀ ಎಸ್ ಎಸ್ ಪಾಟೀಲರವರು, ಮಹಾಗಾಂವ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ವೈಜನಾಥ ತಡಕಲರವರು, ದೇವರ ದಾಸಿಮಯ್ಯ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ವಿಜಯಕುಮಾರ ಹಳಕಟ್ಟಿಯವರು ವಹಿಸಿದ್ದರು. ಕಾರ್ಯಕ್ರಮದ ಪ್ರಾಸ್ತವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರು ನುಡಿದರು ಮತ್ತು ಮುಖ್ಯಕಾರ್ಯನಿರ್ವಾಹಕರ ಜವಾಬ್ದಾರಿ ಮತ್ತು ಕರ್ತವ್ಯಗಳ ಕುರಿತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ಉಪನ್ಯಾಸ ನೀಡಿದರು. ಸ್ವಾಗತ ಮತ್ತು ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಿವಕಾಂತ ಎನ್ ರವರು ನಡೆಸಿಕೊಟ್ಟರು. ಸಭೆಯಲ್ಲಿ ಕಲಬುರಗಿ ಜಿಲ್ಲೆಯ 84 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಡೈರಿ, ಕ್ಯಾಲೆಂಡರ್ ಮತ್ತು ಗೋಡೆ ಗಡಿಯಾರವನ್ನು ವಿತರಿಸಲಾಯಿತು.



**ತುಮಕೂರು :** ದಿನಾಂಕ 20.12.2025ರಂದು ತುಮಕೂರು ಸೌಹಾರ್ದ ಸಹಕಾರಿಗಳ ಒಕ್ಕೂಟದ ಆಡಳಿತ ಮಂಡಳಿ ಸಭೆಯು ತುಮಕೂರು ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಜರುಗಿತು. ಸಭೆಯ ಅಧ್ಯಕ್ಷತೆಯನ್ನು ಒಕ್ಕೂಟದ ಅಧ್ಯಕ್ಷರಾದ ಶ್ರೀ ಲಕ್ಷ್ಮೀನಾರಾಯಣ ರವರು ವಹಿಸಿದ್ದರು. ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಒಕ್ಕೂಟ್ಟದ ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಮತ್ತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್ ರವರು ಭಾಗವಹಿಸಿದ್ದರು.

**ಬೆಂಗಳೂರು :** ದಿನಾಂಕ 22.12.2025ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಲಕ್ಷ್ಮೀಕಾಂತ್ ಎ.ಎಮ್ ರವರು ಮಹೇಂದ್ರ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ, ಬೆಂಗಳೂರು ಸಹಕಾರಿಯ ಸಿಬ್ಬಂದಿ ನೇಮಕಾತಿ ಸಭೆಗೆ ಸಂಯುಕ್ತ ಸಹಕಾರಿಯ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಸಂಯುಕ್ತ ಸಹಕಾರಿಯ ಕಾಯ್ದೆ ಮತ್ತು ನಿಯಮಗಳನುಸಾರ ಸಿಬ್ಬಂದಿ ನೇಮಕಾತಿಗೆ ಕ್ರಮವಿಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**ಬಾಗಲಕೋಟೆ :** ದಿನಾಂಕ 05.12.2025 ರಂದು ಸಂಯುಕ್ತ ಸಹಕಾರಿಯ ಬಾಗಲಕೋಟೆ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಶ್ರೀ ನೀಲಗೀರೇಶ್ವರ ಸೌಹಾರ್ದ ಸಹಕಾರಿ ನಿ, ಬಾಗಲಕೋಟೆ ಸಹಕಾರಿಯ ಸಭೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಎನ್.ಪಾಟೀಲ ಇವರ ಅಧ್ಯಕ್ಷತೆಯಲ್ಲಿ ಹಾಗೂ ಟಾಸ್ಕಫೋರ್ಸ ಅಧಿಕಾರಿಗಳಾದ ಶ್ರೀ ಗಂಗಾರಾಮ್ ಕೋಳಾಪ್ಪೆ, ಬಾಗಲಕೋಟೆ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವೆಂಕಟೇಶ ರಾಠೋಡ, ಶ್ರೀಮತಿ ರೇಷ್ಮಾ ಪಾಟೀಲ ಇವರ ಉಪಸ್ಥಿತಿಯಲ್ಲಿ ಆಯೋಜಿಸಲಾಗಿತ್ತು. ಈ ಸಭೆಯಲ್ಲಿ ಸಹಕಾರಿಯ ಹಿಂದಿನ ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿಗಳು ಮತ್ತು ಠೇವಣಿದಾರರು ಹಾಜರಾಗಿದ್ದರು.

**ಬಾಗಲಕೋಟೆ :** ದಿನಾಂಕ 05.12.2025 ರಂದು ಸಂಯುಕ್ತ ಸಹಕಾರಿಯ ಬಾಗಲಕೋಟೆ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಗಾಯತ್ರೀದೇವಿ ಸೌಹಾರ್ದ ಸಹಕಾರಿ ನಿ, ಗುಳೆದಗುಡ್ಡ ಸಹಕಾರಿಯ ಸಭೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಎನ್.ಪಾಟೀಲ ಇವರ ಅಧ್ಯಕ್ಷತೆಯಲ್ಲಿ ಹಾಗೂ ಟಾಸ್ಕಫೋರ್ಸ ಅಧಿಕಾರಿಗಳಾದ ಶ್ರೀ ಗಂಗಾರಾಮ್ ಕೋಳಾಪ್ಪೆ, ಬಾಗಲಕೋಟೆ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವೆಂಕಟೇಶ ರಾಠೋಡ, ಶ್ರೀಮತಿ ರೇಷ್ಮಾ ಪಾಟೀಲ ಉಪಸ್ಥಿತಿಯಲ್ಲಿ ಸಭೆ ಆಯೋಜಿಸಲಾಗಿತ್ತು. ಈ ಸಭೆಯಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿಗಳು ಮತ್ತು ಠೇವಣಿದಾರರು ಹಾಜರಾಗಿದ್ದರು.

# ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮ

**ಶಿವಮೊಗ್ಗ :** ದಿನಾಂಕ 08.12.2025ರಂದು ಶಿವಮೊಗ್ಗ ಜಿಲ್ಲೆಯಲ್ಲಿ ಐದು ಕೋಟಿಗಿಂತ ಅಧಿಕ ದುಡಿಯುವ ಬಂಡವಾಳ ಹೊಂದಿರುವ ಸೌಹಾರ್ದ ಸಹಕಾರಿಗಳಿಗೆ ಜಿಲ್ಲಾ ಮಟ್ಟದಲ್ಲಿ ಸೌಹಾರ್ದ ಕಾಯ್ದೆ ತಿದ್ದುಪಡಿ ಕುರಿತು ಕ್ಲಸ್ಟರ್ ಮಟ್ಟದ ತರಬೇತಿಯನ್ನು ವಿಪ್ರ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ, ಶಿವಮೊಗ್ಗ ಇಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾಶದ ಶ್ರೀ ಎ.ಆರ್. ಪ್ರಸನ್ನ ಕುಮಾರ್ ರವರು ವಹಿಸಿದ್ದರು. ಸೌಹಾರ್ದ ಕಾಯ್ದೆ ತಿದ್ದುಪಡಿ ಕುರಿತು ಮ್ಯಾಮ್‌ಕೋಸ್ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶ್ರೀಕಾಂತ್ ಬರುವೆ ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಉಪನ್ಯಾಸ ನೀಡಿದರು. 24 ಸೌಹಾರ್ದ ಸಹಕಾರಿಗಳಿಂದ 38 ಪ್ರತಿನಿಧಿಗಳು ಭಾಗವಹಿಸಿದ್ದರು.

**ದಕ್ಷಿಣ ಕನ್ನಡ :** ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಿ.ಎಸ್.ಸಿ ತೆರೆಯಲು ಅರ್ಜಿ ಸಲ್ಲಿಸಿರುವ ಸಹಕಾರಿಗಳಿಗಾಗಿ ತರಬೇತಿ ಕಾರ್ಯಕ್ರಮವನ್ನು ದಿನಾಂಕ : 16.12.2025ರಂದು ಮಂಗಳವಾರ ಬೆಳಗ್ಗೆ 11.00 ಗಂಟೆಗೆ ದಕ್ಷಿಣ ಕನ್ನಡ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿ ಕಾರ್ಯಕ್ರಮದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಿ.ಎಸ್.ಸಿ ಸೆಂಟರ್ ಗೆ ಅರ್ಜಿ ಸಲ್ಲಿಸಿ ಐ.ಡಿ ಕ್ರಿಯೇಶನ್ ಆದ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿಗಳು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ದಕ್ಷಿಣ ಕನ್ನಡ ಸಿ.ಎಸ್.ಸಿ ಜಿಲ್ಲಾ ವ್ಯವಸ್ಥಾಪಕರಾದ ಶ್ರೀ ಗೋವರ್ಧನ್ ಇವರು ಉಪಸ್ಥಿತರಿದ್ದು, ಸಿ.ಎಸ್.ಸಿ ನಲ್ಲಿ ದೊರಕುವ ಹಾಗೂ ಸದಸ್ಯರಿಗೆ ನೀಡಬಹುದಾದ ಸೇವೆಗಳ ಬಗ್ಗೆ ಸಹಕಾರಿಗಳಿಗೆ ಮಾಹಿತಿ ನೀಡಿದರು. ಕಾರ್ಯಕ್ರಮದ ಸ್ವಾಗತವನ್ನು ಮತ್ತು ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ನಂದನ್ ಬಿ.ಎನ್ ರವರು ನೆರವೇರಿಸಿದರು. ಈ ಸಭೆಯಲ್ಲಿ ಒಟ್ಟು 9 ಸಹಕಾರಿಗಳಿಂದ 12 ಪ್ರತಿನಿಧಿಗಳು ಭಾಗವಹಿಸಿದ್ದರು.

# ಪೂರ್ವಭಾವಿ ಸಿದ್ಧತಾ ಸಭೆ



**ಬೆಳಗಾವಿ :** ದಿನಾಂಕ 05.12.2025 ರಂದು ಸೌಹಾರ್ದ ಸಹಕಾರಿ ಕಾಯ್ದೆಯ ರಜತ ಮಹೋತ್ಸವ ಕಾರ್ಯಕ್ರಮದ ಪೂರ್ವಭಾವಿ ಸಭೆಯನ್ನು ಪ್ರಾಂತೀಯ ಕಛೇರಿ ಬೆಳಗಾವಿಯಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠ ಇವರು ವಹಿಸಿದ್ದರು. ವೇದಿಕೆ ಮೇಲೆ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ನಾಗರಾಜ ದೇಶಪಾಂಡೆ, ಬಸವೇಶ್ವರ ಸೌಹಾರ್ದ ಸಹಕಾರಿ ನಿ, ಕಲ್ಲೋಳ್ಳಿಯ ಅಧ್ಯಕ್ಷರಾದ ಶ್ರೀ ಬಾಳಪ್ಪ ಬೆಳಕೂಡ ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಇವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ 61 ಸಹಕಾರಿಗಳಿಂದ 70 ಪ್ರತಿನಿಧಿಗಳು ಭಾಗವಹಿಸಿದ್ದರು.

# ಪತ್ರಿಕಾಗೋಷ್ಠಿ



**ಬೆಳಗಾವಿ :** ದಿನಾಂಕ 26.12.2025 ರಂದು ಬೆಳಿಗ್ಗೆ 11:30 ಗಂಟೆಗೆ ಸೌಹಾರ್ದ ಸಹಕಾರಿ ಕಾಯ್ದೆಯ ರಜತ ಮಹೋತ್ಸವ ಸಮಾರೋಪ ಅಂಗವಾಗಿ ಬೆಳಗಾವಿಯಲ್ಲಿ ಆಯೋಜಿಸಿರುವ ಕಾರ್ಯಕ್ರಮದ ಪ್ರಚಾರ ಮತ್ತು ಮಾಹಿತಿಯನ್ನು ನೀಡಲು ಪತ್ರಿಕಾಗೋಷ್ಠಿಯನ್ನು ಬೆಳಗಾವಿ ಪ್ರಾಂತೀಯ ಕಛೇರಿಯಲ್ಲಿ ಜರುಗಿಸಲಾಯಿತ್ತು. ಈ ಪತ್ರಿಕಾಗೋಷ್ಠಿಯಲ್ಲಿ ಶ್ರೀ ಜಿ ನಂಜನಗೌಡ, ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.. ಬೆಂಗಳೂರು, ಶ್ರೀ ಜಗದೀಶ ಕವಟಗಿಮಠ, ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಅವರು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಯ ರಜತ ಮಹೋತ್ಸವ ಕಾರ್ಯಕ್ರಮದ ಕುರಿತು ಮಾತನಾಡಿದರು. ಈ ಪತ್ರಿಕಾಗೋಷ್ಠಿಗೆ 8 ಪತ್ರಿಕೆಗಳ ವರದಿಗಾರರು ಭಾಗವಹಿಸಿದ್ದರು. ಹಾಗೂ ಸಂಯುಕ್ತ ಸಹಕಾರಿಯ ತರಬೇತಿ ಅಧಿಕಾರಿಗಳಾದ ಶ್ರೀ ವಿ ಜೆ ಕಾರಕೂನ್ ಮತ್ತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಹಾಗೂ ತರಬೇತಿ ಅಧಿಕಾರಿಯಾದ ಶ್ರೀ ಬಾಬು ಪಠಾಣ ಉಪಸ್ಥಿತರಿದ್ದರು.

## ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ

**ದಿ ಧಾರವಾಡ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ಧಾರವಾಡ.**


ಶ್ರೀ ಭೀಮರಾಮ ಸೋನಕರ
ಅಧ್ಯಕ್ಷರು


ಶ್ರೀ ಸಂಕಣ್ಣ ಹೊನ್ನಳ್ಳಿ
ಉಪಾಧ್ಯಕ್ಷರು

**ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ಬೆಂಗಳೂರು.**


ಶ್ರೀ ಆರ್ ರವಿಚಂದ್ರ
ಅಧ್ಯಕ್ಷರು


ಶ್ರೀಮತಿ ಮಂಗಳ
ಉಪಾಧ್ಯಕ್ಷರು

**ಶರಣ ಮಾಗನೂರು ಬಸಪ್ಪ ಸೌಹಾರ್ದ ಸಹಕಾರಿ ಸಂಘ ನಿ., ಧಾರವಾಡ.**


ಡಾ. ಮಂಜುನಾಥ್ ಹೆಚ್. ಎಸ್
ಅಧ್ಯಕ್ಷರು


ಶ್ರೀಮತಿ ಸುನಂದದೇವಿ ಎಮ್. ಎಸ್
ಉಪಾಧ್ಯಕ್ಷರು

**ಶ್ರೀ ವಿಜಯಲಕ್ಷ್ಮೀ ಸೌಹಾರ್ದ ಸಹಕಾರಿ ಸಂಘ ನಿ., ಧಾರವಾಡ**


ಶ್ರೀ ಪ್ರಕಾಶ ಪಿ ನಾಝರೆ
ಅಧ್ಯಕ್ಷರು


ಶ್ರೀ ಗೋಪಾಲ ಪಿ ಜೋಶಿ
ಉಪಾಧ್ಯಕ್ಷರು

## ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ ಆಡಳಿತ ಮಂಡಲಿ ಸದಸ್ಯರು ಹಾಗೂ ಸಿಬ್ಬಂದಿಗಳ ಕ್ರೀಡಾಕೂಟ "ಸ್ಫೂರ್ತಿ–2025"

### ಸರಸ್ವತಿ ಪ್ರೀಮಿಯರ್ ಲೀಗ್ 2025ರ ವಿಜೇತರಾಗಿ ಟೀಮ್ ಬ್ರಹ್ಮೋಸ್ ರನ್ನರ್ ಆಗಿ ಟೀಮ್ ಸಿಂಧೂರ



**ಪುತ್ತೂರು :** ಪುತ್ತೂರಿನಲ್ಲಿ ಕೇಂದ್ರ ಕಚೇರಿಯನ್ನು ಹೊಂದಿ ರಾಜ್ಯಾದ್ಯಂತ 20 ಶಾಖೆಗಳೊಂದಿಗೆ ಕಾರ್ಯಾಚರಿಸುತ್ತಿರುವ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ ಆಡಳಿತ ಮಂಡಲಿ ಸದಸ್ಯರ ಹಾಗೂ ಸಿಬ್ಬಂದಿಗಳ ಕ್ರೀಡಾಕೂಟ ಸ್ಫೂರ್ತಿ 2025 ದಿನಾಂಕ 27–12–2025ನೇ ಶನಿವಾರ ಪುತ್ತೂರಿನ ಸಂತಫಿಲೋಮಿನಾ ಕಾಲೇಜು ಕ್ರೀಡಾಂಗಣದಲ್ಲಿ ಜರುಗಿತು. ಕ್ರೀಡಾಕೂಟವನ್ನು ಸಹಕಾರಿ ಧ್ವಜವನ್ನು ಸಹಕಾರಿಯ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ವಸಂತನಾಯಕ್ ಎ ಇವರಿಗೆ ಹಸ್ತಾಂತರಿಸಿ ಉದ್ಘಾಟಿಸಿದ ಸಹಕಾರಿ ಸಂಘದ ಅಧ್ಯಕ್ಷರಾದ ಸಹಕಾರ ರತ್ನ ಶ್ರೀ ಸತೀಶ್ಚಂದ್ರರವರು ಮಾತಾನಾಡುತ್ತಾ ಕ್ರೀಡಾಕೂಟವು ಮುಂದಿನ ದೊಡ್ಡದೊಡ್ಡ ಹೆಜ್ಜೆಗಳನ್ನಿಡಲು ಪೂರಕವಾಗಿದೆ ಮಾತ್ರವಲ್ಲದೇ 2047ರ ವಿಕಸಿತ ಭಾರತದಲ್ಲಿ ಸರಸ್ವತಿ ಸಹಕಾರಿಯು ಹೇಗಿರಬೇಕು ಎಂದು ನಿರ್ಣಯಿಸುವ ದಿನವಾಗಿದೆ. ಈ ದಿನವನ್ನು ಸಂತೋಷದಿಂದ ಕಳೆಯುವ ಮೂಲಕ ಸಹಕಾರ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆ ಮಾಡಲು ಮಹತೋಭಾರ ಶ್ರೀ ಮಹಾಲಿಂಗೇಶ್ವರದೇವರು ನಮಗೆಲ್ಲರಿಗೂ ಶಕ್ತಿಸಾಮರ್ಥ್ಯವನ್ನು ನೀಡಲಿ ಎಂದು ಪ್ರಾರ್ಥಿಸಿಸುತ್ತಾ ಜಗತ್ತು ವೇಗವಾಗಿ ಬೆಳೆಯುತ್ತಿದೆ ಅದರಲ್ಲೂ ಭಾರತ ಅತ್ಯಂತ ವೇಗವಾಗಿ ಬೆಳೆಯುತ್ತಿದು ಜಗತ್ತಿನ 4ನೇ ಆರ್ಥಿಕಶಕ್ತಿಯಿಂದ 3ನೇ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಲುದಾಪುಗಾಲಿಟ್ಟಿದೆ. ಸಹಕಾರಿಯ ಸದಸ್ಯರು ಸಿಬ್ಬಂದಿಗಳು ಹಾಗೂ ಆಡಳಿತ ಮಂಡಳಿಯ ಎಲ್ಲಾ ಸದಸ್ಯರು ಒಟ್ಟಾಗಿ ಕೆಲಸ ಮಾಡಿದಾಗ ನಾವೂ ಕೂಡ ನಮ್ಮ ದೇಶದ ಜಿಡಿಪಿಗೆ ಕೊಡುಗೆಯನ್ನು ಕೊಡಬಹುದು. ಹಾಗೂ ಮುಂದೊಂದು ದಿನ ನಮ್ಮ ದೇಶದ ಪ್ರಧಾನಮಂತ್ರಿಯವರು ಸರಸ್ವತಿ ಸಹಕಾರಿಯ ಕೆಲಸ ಕಾರ್ಯಗಳನ್ನು ಮೆಚ್ಚಿಮನ್ಕಿಬಾತ್ ಕಾರ್ಯಕ್ರಮದಲ್ಲಿ ಮಾತನಾಡುವಂತಾಗಬೇಕು ಎಂಬ ಆಶಯವನ್ನು ವ್ಯಕ್ತಪಡಿಸುತ್ತಾ ಕ್ರೀಡಾಕೂಟಕ್ಕೆ ಶುಭಹಾರೈಸಿದರು.

# ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ 26ನೇ ಸೌಹಾರ್ದ ಸಹಕಾರಿ ದಿನಾಚರಣೆ ಆಚರಣೆ



**ಹಲ್ಲೋಳಿ :** ಅರಿಹಂತ ಸೌಹಾರ್ದ ಸಹಕಾರಿ ಸಂಘ ನಿ., ಹುಲ್ಲೋಳಿಯಲ್ಲಿ 01–01–2026 ರಂದು ಸೌಹಾರ್ದ ಸಹಕಾರಿಯ ದಿನಾಚರಣೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಭರಮಪ್ಪಾ ಬಾ. ಚೌಗಲಾ ಅವರು ಸಹಕಾರಿ ಧ್ವಜ ಹಾರಿಸಿ ಸಂಭ್ರಮದಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು ಸೌಹಾರ್ದ ಸಹಕಾರಿಯ ದಿನಾಚರಣೆ ಬಗ್ಗೆ ಮಾತನಾಡಿ ಸೌಹಾರ್ದ ಸಹಕಾರಿಯ ಕಾಯ್ದೆ ಮತ್ತು ಕಾರ್ಯ ಕೆಲಸಗಳ ಬಗ್ಗೆ ಸಮಾಜದ ಕೆಳ ಮಟ್ಟದ ಜನರಿಗೆ ತಲುಪಿಸಿ ಅದರ ಅರಿವು ಅವರಿಗೆ ಮೂಡಿಸಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ನಮ್ಮ ಸಹಕಾರಿಯ ಆಡಳಿತ ಮಂಡಳಿ ಹಾಗೂ ಪ್ರಧಾನ ಕಾರ್ಯದರ್ಶಿಯವರು ಮತ್ತು ಸಿಬ್ಬಂದಿ ವರ್ಗದವರು ಹಾಜರಿದ್ದರು.



**ಅಣ್ಣಾವರ :** ದಿನಾಂಕ 01–01–2026 ಮಿಲ್ಲತ್ ಸೌಹಾರ್ದ ಸಹಕಾರಿಯಲ್ಲಿ 26ನೇ ಸೌಹಾರ್ದ ಸಹಕಾರಿಯ ದಿನಾಚರಣೆಯ ಧ್ವಜಾರೋಹಣವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಆರ್. ಎಮ ಬಾಗನಾನ ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರು ಹಾಗೂ ಸಿಬ್ಬಂದಿಯವರು ಉಪಸ್ಥಿತರಿದ್ದರು.



**ಉಡುಪಿ :** ದಿನಾಂಕ : 01.01.2025ರ ಬೆಳಗ್ಗೆ 9 ಗಂಟೆಗೆ ಉಡುಪಿ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯ ಅಂಗವಾಗಿ ಧ್ವಜಾರೋಹಣವನ್ನು ನೆರವೇರಿಸಲಾಯಿತು. ಈ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರು ಶ್ರೀ ಮಂಜುನಾಥ ಎಸ್.ಕೆ ರವರು ಸಹಕಾರಿ ಚಳುವಳಿಯ ಪಿತಾಮಹರಾದ ಶ್ರೀ ಸಿದ್ದನಗೌಡ ಪಾಟೀಲ ರವರ ಭಾವಚಿತ್ರಕ್ಕೆ ಪುಷ್ಪಾರ್ಚನೆಯನ್ನು ಮಾಡಿದರು. ಸ್ಥಳೀಯ ಸಹಕಾರಿಗಳು ಮುಖ್ಯ ಕಾರ್ಯನಿರ್ವಾಹಕರು ಭಾಗವಹಿಸಿದ್ದರು.



ದಿನಾಂಕ 01–01–2026 ರಂದು ಶ್ರೀ ಬಸವೇಶ್ವರ ಸೌಹಾರ್ದ ಸಹಕಾರಿ ಸಂಘದಿಂದ 26ನೇ ಸೌಹಾರ್ದ ಸಹಕಾರಿಯ ದಿನಾಚರಣೆಯನ್ನು ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರು ಹಾಗೂ ಸಿಬ್ಬಂದಿಯವರು ನೆರವೇರಿಸಿದರು.



**ದಕ್ಷಿಣ ಕನ್ನಡ :** ಸೌಹಾರ್ದ ಸಹಕಾರಿ ದಿನಾಚರಣೆ ಪ್ರಯುಕ್ತ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ದಕ್ಷಿಣ ಕನ್ನಡ ಜಿಲ್ಲಾ ಸಂಪರ್ಕ ಕಚೇರಿಯಲ್ಲಿ ಸಹಕಾರಿ ಧ್ವಜಾರೋಹಣ ನೆರವೇರಿಸಲಾಯಿತು. ಈ ಸಂಧರ್ಭದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಭಾರತಿ ಜಿ ಭಟ್ ರವರು ದಕ್ಷಿಣ ಕನ್ನಡ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ ನಂದನ್ ಬಿ ಎಸ್, ರವರು ದಕ್ಷಿಣ ಕನ್ನಡ ಜಿಲ್ಲಾ ಒಕ್ಕೂಟ ಸೌಹಾರ್ದ ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಚೇತನ್ ಕೊಟ್ಟಾರಿ ರವರು ಯುವ ಸ್ಪಂದನ ಸೌಹಾರ್ದ ಸಹಕಾರಿ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಜೇಶ್ ಅತ್ಯಾಡಿ, ಗೋವರ್ಧನ ಗಿರಿ ಸೌಹಾರ್ದ ಕೋ ಆಪರೇಟಿವ್ ಸೊಸೈಟಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರೀತೇಶ್, ಸಿಬ್ಬಂದಿ ಭವಿತ್ ಉಪಸ್ಥಿತರಿದ್ದರು.



**ಕೊಪ್ಪಳ :** ದಿನಾಂಕ 01–01–2026 ರಂದು ಕೊಪ್ಪಳ ಜಿಲ್ಲಾ ಸಂಪರ್ಕ ಕಛೇರಿ ಗಂಗಾವತಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯ ಅಂಗವಾಗಿ ಪೂಜೆ ಹಾಗೂ ಧ್ವಜಾರೋಹಣವನ್ನು ಹಮ್ಮಿಕೊಳ್ಳಲಾಯಿತು. ಸಹಕಾರಿ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ರವರು ನೆರವೇರಿಸಿದರು. ಕೊಪ್ಪಳ ಜಿಲ್ಲಾ ಸೌಹಾರ್ದ ಒಕ್ಕೂಟದ ನಿರ್ದೇಶಕರಾದ ಶ್ರೀ ಕುಮಾರಪ್ಪ ಸಿಂಗನಾಳ ಹಾಗೂ ಸಂಯುಕ್ತ ಸಹಕಾರಿಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಓಂಕಾರ ರವರು, ಕೊಪ್ಪಳ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು, ಹಿರಿಯ ಸಹಕಾರಿಗಳು, ಮುಖ್ಯಕಾರ್ಯನಿರ್ವಹಕರು, ಉಪಸ್ಥಿತರಿದ್ದರು.



ದಿನಾಂಕ 01.01.2026ರಂದು ಕುಶಾಲನಗರ ಶ್ರೀ ಬಸವೇಶ್ವರ ಸೌಹಾರ್ದ ಸಹಕಾರಿ ಸಂಘ ನಿ., ಈ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯ ಅಂಗವಾಗಿ ಧ್ವಜಾರೋಹಣವನ್ನು ನೆರವೇರಿಸಲಾಯಿತು. ಈ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರು, ನಿರ್ದೇಶಕರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ತುಮಕೂರು :** ದಿನಾಂಕ 01–01–2026 ರಂದು ತುಮಕೂರು ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯ ಅಂಗವಾಗಿ ಪೂಜೆ ಹಾಗೂ ಧ್ವಜಾರೋಹಣವನ್ನು ಹಮ್ಮಿಕೊಳ್ಳಲಾಯಿತು. ಸಹಕಾರಿ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ವಿಜಯ್ ಸಿ.ಪಿ ರವರು ನೆರವೇರಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ನಿಕಟಪೂರ್ವ ನಿರ್ದೇಶಕರಾದ ಶ್ರೀ ಬಿ. ಗಂಗಾಧರಯ್ಯ ರವರು ಉಪಸ್ಥಿತರಿದ್ದರು.



ವರಸಿದ್ಧಿ ವಿನಾಯಕ ಸೌಹಾರ್ದ ಸಹಕಾರಿ ಸಂಘದಲ್ಲಿ ಇಂದು ಸಂಘದ 9ನೇ ವಾರ್ಷಿಕೋತ್ಸವದ ಹಾಗು ಸಹಕಾರಿ ದಿನಾಚರಣೆಯ ಜರುಗಿತು. ಸಹಕಾರೀ ಅಧ್ಯಕ್ಷರಾದ ಸಂಜಯ್ ಪಾಟೀಲ್ ಧ್ವಜಾರೋಹಣ ನೇರವೇರಿಸಿದರು.ಈ ಕಾರ್ಯಕ್ರಮದಲ್ಲಿ ಉಪಾಧ್ಯಕ್ಷರು. ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಮಂಗಳೂರು :** ಶ್ರೀ ಪಂಚಶಕ್ತಿ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ರಂಜಿತ್ ಪೂಜಾರಿಯವರು ಸಹಕಾರಿಯ ಆಡಳಿತ ಮಂಡಳಿ ನಿರ್ದೇಶಕರೊಂದಿಗೆ 2026ರ ಕ್ಯಾಲೆಂಡರ್ ಬಿಡುಗಡೆಗೊಳಿಸಿದರು.



**ಬೀದರ :** ದಿನಾಂಕ 01.01.2026 ರಂದು ಸಾಮರ್ಥ್ಯ ಕೇಂದ್ರ, ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿ ನಿ., ಬೀದರ್. ಇಲ್ಲಿ ಜರುಗಿದ ಸೌಹಾರ್ದ ಸಹಕಾರಿ ದಿನಾಚರಣೆಯ ಅಂಗವಾಗಿ ಶ್ರೀ ಗುರುನಾಥ ಜ್ಯಾಂತಿಕರ್, ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಇವರು ಧ್ವಜಾರೋಹಣವನ್ನು ನೆರವೇರಿಸಿದರು.

ನಂತರ ಜರುಗಿದ ಸಭಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ಸೌಹಾರ್ದ ಸಹಕಾರಿ ಕಾಯ್ದೆಯ ಹುಟ್ಟು ಬೆಳವಣಿಗೆ, ಧ್ಯೇಯ–ಉದ್ದೇಶ ಮತ್ತು ಆಶಯಗಳ ಬಗ್ಗೆ ಸುದೀರ್ಘವಾಗಿ ಉಪನ್ಯಾಸವನ್ನು ಸಭೆಯಲ್ಲಿ ಭಾಗವಹಿಸಿದ್ದ ಸಹಕಾರಿಗಳಿಗೆ ನೀಡಿದರು. ಕಾರ್ಯಕ್ರಮದಲ್ಲಿ 36 ಸಹಕಾರಿಗಳಿಂದ 57 ಸಹಕಾರಿ ಪ್ರತಿನಿದಿಗಳು ಭಾಗವಹಿಸಿದ್ದರು.

## ಕ್ಯಾಲೆಂಡರ್ ಬಿಡುಗಡೆ



**ಶಿವಮೊಗ್ಗ :** ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘದ ಮಲೆನಾಡು ಮಳಿಗೆ ಹಾಗೂ ಕೇಂದ್ರ ಕಛೇರಿಯಲ್ಲಿ ದಿನಾಂಕ 19–12–2025 ರಂದು ಸಹಕಾರ ಭಾರತಿ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಉದಯ ಜೋಷಿ, ಸಹಕಾರ ಭಾರತಿ ರಾಜ್ಯಾಧ್ಯಕ್ಷರಾದ ಶ್ರೀ ಪ್ರಭುದೇವ ಎಂ ಆರ್, ದಿ ಕ್ಯಾಂಪ್ಕೋ ಲಿ, ಮಂಗಳೂರಿನ ಅಧ್ಯಕ್ಷರಾದ ಶ್ರೀ ಸತೀಶ್ಚಂದ್ರ, ತುಮ್‌ಕೋಸ್ ಚನ್ನಗಿರಿ ಅಧ್ಯಕ್ಷರಾದ ಶ್ರೀ ಶಿವಕುಮಾರ್ ಹಾಗೂ ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷರು ಮತ್ತು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಸಂಘದ ಉಪಾಧ್ಯಕ್ಷರಾದ ಶ್ರೀ ಪ್ರಸನ್ನ ಕುಮಾರ್ ಎ ಆರ್, ಹಾಗೂ ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ ಸಹಕಾರಿಗಳು ನಮ್ಮ ಸಂಸ್ಥೆಗೆ ಭೇಟಿ ನೀಡಿದರು. 2026ನೇ ನೂತನ ವರ್ಷದ ಕ್ಯಾಲೆಂಡರ್‌ನ್ನು ಬಿಡುಗಡೆ ಮಾಡಿದರು ಈ ಸಂದರ್ಭದಲ್ಲಿ ವಿಪ್ರ ಸಹಕಾರಿಯ ಆಡಳಿತ ಮಂಡಳಿ ನಿರ್ದೇಶಕರುಗಳು, ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



ಮೈಸೂರು : ಶ್ರೀ ಭುವನೇಶ್ವರಿ ಸೌಹಾರ್ದ ಸಹಕಾರಿ ಸಂಘ ನಿಯಮಿತ ಮೈಸೂರು ಸಹಕಾರಿಯ 2026ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆಯು ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ಎಂ. ವಿಜಯಲಕ್ಷ್ಮೀ, ನಿರ್ದೇಶಕರಾದ ಶ್ರೀ.ಇ.ಕೆ. ರಾಜನ್ ಬಾಬು, ಆರ್. ನಾರಾಯಣ, ಶ್ರೀಕೆ. ಶಿವಾನಂದ, ಶ್ರೀ. ಸಿ. ಸುರೇಶ್, ಶ್ರೀ. ಎಂ.ಎಸ್. ಶಿವಕುಮಾರಸ್ವಾಮಿ, ಶ್ರೀಮತಿ. ಶಾಂತಿವಿಹೆಗ್ಡೆ ಹಾಗೂ ಸಿಬ್ಬಂದಿವರ್ಗ ಉಪಸ್ಥಿತರಿದರು.



**ಮೈಸೂರು :** ದಿನಾಂಕ 08.12.2025ರ ಸೋಮವಾರದಂದು ಸಪ್ತರ್ಷಿ ಸೌಹಾರ್ದ ಸಹಕಾರಿಯ ಕಛೇರಿಯಲ್ಲಿ ಅಧ್ಯಕ್ಷರಾದ ಶ್ರೀ ಎಂ.ಎಸ್. ಚಂದ್ರಶೇಖರ್ ರವರ ಅಧ್ಯಕ್ಷತೆಯಲ್ಲಿ ದಿನಚರಿ ಪಂಚಾಂಗ ಬಿಡುಗಡೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಮುಖ್ಯಅತಿಥಿಗಳು ಹಾಗೂ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಕೆ.ಎಸ್. ಸದಾಶಿವರವರು 2026ನೇ ಸಾಲಿನ ಸಹಕಾರಿಯ ದಿನಚರಿ ಪಂಚಾಂಗವನ್ನು ಬಿಡುಗಡೆ ಮಾಡಿದರು ಈ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀಮತಿ ಎಸ್.ಶ್ಯಾಮಲ, ಗೌ॥ಖಜಾಂಚಿಗಳಾದ ಶ್ರೀಮತಿ ಕೃಷ್ಣವೇಣಿ ಎಂ.ಜಿ, ಮಾಜಿ ಕಾರ್ಪೋರೇಟರ್ ಮತ್ತು ಕೃಷ್ಣರಾಜೇಂದ್ರ ಕೋ–ಆಪರೇಟಿವ್ ಬ್ಯಾಂಕ್‌ನ ಹಾಲಿ ನಿರ್ದೇಶಕರಾದ ಶ್ರೀ ಪಾರ್ಥಸಾರಥಿ,ಸಹಕಾರಿಯ ನಿರ್ದೇಶಕರುಗಳು,ಸದಸ್ಯರು, ಕಾನೂನು ಸಲಹೆಗಾರರು, ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಹಾಜರಿದ್ದರು. ಈ ಸಂದರ್ಭದಲ್ಲಿ ಸಹಕಾರಿಯ ಸ್ಥಾಪಕ ಅಧ್ಯಕ್ಷರಾದ ಶ್ರೀ ಬಿ.ಎಸ್. ನಾಗರಾಜರಾವ್‌ರವರ ಪುತ್ಥಳಿಗೆ ಹಾರವನ್ನು ಹಾಕಿ ಸ್ಮರಿಸಲಾಯಿತು.

## ರಕ್ತದಾನ ಶಿಬಿರ



ಶ್ರೀ ಗೌರಿಶಂಕರ ಜಾತ್ರಾ ಮಹೂತ್ಸವ ಅಂಗವಾಗಿ ಯರನಾಳ ಗ್ರಾಮದಲ್ಲಿ ಯುವಸಿರಿ ಸೌಹಾರ್ದ ಸಹಕಾರಿ ಸಂಘ ನಿಯಮಿತ ಯರನಾಳ ವತಿಯಿಂದ ರಕ್ತದಾನ ಶಿಬಿರ ಹಮ್ಮಿಕೊಂಡ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಶಂಕರಗೌಡ ಸಿ. ಪಾಟೀಲ, ನಿರ್ದೇಶಕರಾದ ಶ್ರೀ ಬಸನಗೌಡ ಶಂ. ಪಾಟೀಲ, ಸಂಯುಕ್ತ ಸಹಕಾರಿಯ ವಿಜಯಪುರ ಜಿಲ್ಲಾ ಅಭಿವೃದ್ಧಿ ಅಧಿಕಾರಿಗಳಾದ ಶ್ರೀಮತಿ ಪ್ರತಿಭಾ ಮಠ ಉಪಸ್ಥಿತರಿದ್ದರು. ಈ ಶಿಬಿರದಲ್ಲಿ ನಮ್ಮ ಸಂಸ್ಥೆಯ 61 ಸದಸ್ಯರು ರಕ್ತದಾನ ಮಾಡಿದರು.

## ಉದ್ಘಾಟನೆ



**ದಕ್ಷಿಣ ಕನ್ನಡ:** ದಿನಾಂಕ 06.12.2025ರ ಬೆಳಿಗ್ಗೆ 10.30 ಕ್ಕೆ ರೋಯಲ್ ಸೌಹಾರ್ದ ಸಹಕಾರಿ ಸಂಘ (ನಿ) ಪುತ್ತೂರು, ಇದರ ನೂತನ ಶಾಖೆಯ ಉದ್ಘಾಟನಾ ಕಾರ್ಯಕ್ರಮವನ್ನು ಪುತ್ತೂರು ತಾಲ್ಲೂಕಿನ ಕೆಯ್ಯೂರಿನಲ್ಲಿ ಏರ್ಪಡಿಸಲಾಗಿತ್ತು. ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಭಾರತೀ ಜಿ ಭಟ್ ರವರು ನೆರವೇರಿಸಿದರು ಮತ್ತು ಉದ್ಘಾಟನಾ ಭಾಷಣವನ್ನು ಮಾಡಿದರು. ಈ ಸಂಧರ್ಭದಲ್ಲಿ ದ.ಕ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ನಂದನ್ ಬಿ.ಎನ್ ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ ಒಟ್ಟು 200 ಜನ ಸದಸ್ಯರು ಹಾಜರಿದ್ದರು.



**ದಕ್ಷಿಣ ಕನ್ನಡ:** ದಿನಾಂಕ 21/12/2025 ರ ಬೆಳಿಗ್ಗೆ 10.30 ಕ್ಕೆ ದಕ್ಷಿಣ ಕನ್ನಡ ಸೌಹಾರ್ದ ಸಹಕಾರಿ ಸಂಘ ನಿ ಇದರ ನೂತನ ಶಾಖೆಯ ಉದ್ಘಾಟನಾ ಕಾರ್ಯಕ್ರಮವನ್ನು ಮಂಗಳೂರು ತಾಲ್ಲೂಕಿನ ಗುರುಪುರ ಕೈಕಂಬದಲ್ಲಿ ಏರ್ಪಡಿಸಲಾಗಿತ್ತು. ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಭಾರತೀ ಜಿ ಭಟ್ ರವರು ನೆರವೇರಿಸಿದರು ಮತ್ತು ಉದ್ಘಾಟನಾ ಭಾಷಣವನ್ನು ಮಾಡಿದರು. ಈ ಸಂಧರ್ಭದಲ್ಲಿ ದ.ಕ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ನಂದನ್ ಬಿ.ಎನ್ ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ ಒಟ್ಟು 200 ಜನರು ಹಾಜರಿದ್ದರು.



**ಮೂಡಲಗಿ :** ನಾಗನೂರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತ ನಾಗನೂರ ತಾ॥ ಮೂಡಲಗಿ ಇದರ ಆಡಳಿತ ಮಂಡಳಿ ನಿರ್ದೇಶಕರಿಗೆ ಹಾಗೂ ಸಂಘದ ಎಲ್ಲಾ ಸಿಬ್ಬಂದಿ ವರ್ಗದವರಿಗೆ ದಿನಾಂಕ 07–12–2025 ರಂದು ಒಂದು ದಿನದ ವಿಷಯಾಧಾರಿತ ತರಬೇತಿ ಕಾರ್ಯಾಗಾರವನ್ನು ಸಂಘದ ಸಭಾಭವನದಲ್ಲಿ ಹಮ್ಮಿಕೊಳ್ಳಲಾಯಿತು. ಸದರಿ ತರಬೇತಿಯನ್ನು ಸಂಪನ್ಮೂಲ ವ್ಯಕ್ತಿಗಳು ಹಾಗೂ ಕಾರ್ಪೊರೇಟ್ ತರಬೇತುದಾರರಾದ ಶ್ರೀ. ನಂದಿಶ ವಿ. ಹೀರೆಮಠ. ಮುಖ್ಯಸ್ಥರು ಹಾಗೂ ಉಪನ್ಯಾಸಕರು ಇಂಡಸ್ ಬ್ಯುಸಿನೆಸ್ ಅಕಾಡೆಮಿ ಬೆಂಗಳೂರು ಇವರು ನಡೆಸಿಕೊಟ್ಟರು. ಸದರಿ ಕಾರ್ಯಾಗಾರದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಬಸವರಾಜ ಗೌ. ತಡಸನವರ ಲೆಕ್ಕಪರಿಶೋಧಕರಾದ ಶ್ರೀ ಸೈದಪ್ಪ ಭೀ. ಗದಾಡಿ ಸಂಘದ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಪ್ರಕಾಶ ಬ. ಅಂಗಡಿ ಹಾಗೂ ಆಡಳಿತ ಮಂಡಳಿಯ ಸದಸ್ಯರು ಮತ್ತು ಸಿಬ್ಬಂದಿ ವರ್ಗ ಒಟ್ಟು 125 ಜನ ತರಬೇತಿಯಲ್ಲಿ ಹಾಜರಿದ್ದರು.



**ದಾವಣಗೆರೆ :** ಜಿ.ಎಂ. ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ, ದಾವಣಗೆರೆ ಇದರ ಕೇಂದ್ರ ಕಚೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಅತ್ಯಂತ ಸಂಭ್ರಮದಿಂದ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಯಿತು. ಸಹಕಾರ, ಸೌಹಾರ್ದತೆ, ಪರಸ್ಪರ ನಂಬಿಕೆ ಮತ್ತು ಸದಸ್ಯರ ಸಹಭಾಗಿತ್ವದ ಮಹತ್ವವನ್ನು ಸಾರುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮವು ಪ್ರಾರ್ಥನೆಯೊಂದಿಗೆ ಆರಂಭಗೊಂಡಿತು. ಸಂಘದ ಉಪಾಧ್ಯಕ್ಷರು, ಸಂಯುಕ್ತ ಸಹಕಾರಿ, ಬೆಂಗಳೂರು ಇದರ ನಿರ್ದೇಶಕರು ಹಾಗೂ ಸಹಕಾರ ಭಾರತಿ, ಕರ್ನಾಟಕ ಇದರ ರಾಜ್ಯಾಧ್ಯಕ್ಷರಾದ ಶ್ರೀ ಪ್ರಭುದೇವ ಎಂ.ಆರ್. ರವರು ಅಧ್ಯಕ್ಷೀಯ ಭಾಷಣ ಮಾಡಿ, ಸೌಹಾರ್ದ ಸಹಕಾರಿ ಕಾಯ್ದೆಯ ಉದ್ದೇಶ, ಸಹಕಾರಿ ಸಂಸ್ಥೆಗಳ ಸಾಮಾಜಿಕ ಮತ್ತು ಆರ್ಥಿಕ ಪಾತ್ರ, ಹಾಗೂ ಸದಸ್ಯರ ಒಗ್ಗಟ್ಟು ಸಂಘದ ಬಲವಾಗಿರುವ ಬಗ್ಗೆ ವಿವರವಾಗಿ ಮಾತನಾಡಿದರು.

# ಸಹಕಾರ ಸಂಸ್ಥೆಗಳ ಆಡಳಿತ ಮಂಡಳಿಯ ರಚನೆ ಮಾಡುವಾಗ ವೃತ್ತಿಪರ ನಿರ್ದೇಶಕರು ಮತ್ತು ಕಾರ್ಯನಿರ್ವಾಹಕ ನಿರ್ದೇಶಕರನ್ನು ಸಹಮತದಿಂದ ನೇಮಿಸುವ ಜವಾಬ್ದಾರಿಯನ್ನು ಆಡಳಿತ ಮಂಡಳಿಗೆ ನೀಡಿದೆ.- ಒಂದು ವಿಮರ್ಷೆ



– ಶ್ರೀ ಸಿ.ಎನ್ ಪರಶಿವಮೂರ್ತಿ, ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರು.

**ಸಹಕಾರ ಸಂಘಗಳ ಕಾಯಿದೆ 1959ರ ಕಲಂ.28ಎ(4ಎ) ಈ ಕೆಳಕಂಡಂತೆ ಉಲ್ಲೇಖಿಸುತ್ತಿದೆ.**

"ಸಹಕಾರ ಸಂಘಗಳ ಮಂಡಳಿಯ ಬ್ಯಾಂಕಿಂಗ್, ವ್ಯವಸ್ಥಾಪನೆ, ಹಣಕಾಸು ಕ್ಷೇತ್ರಗಳಲ್ಲಿ ಅನುಭವವಿರುವ ಅಥವಾ ಆ ಸಹಕಾರ ಸಂಘವು ಕೈಗೊಳ್ಳಬೇಕಾದ ಉದ್ದೇಶಗಳಿಗೆ ಮತ್ತು ಚಟುವಟಿಗೆಗಳಿಗೆ ಸಂಬಂದಿಸಿದ ಯಾವುದೇ ಇತರ ಕ್ಷೇತ್ರ ಪರಿಣಿತಿಯನ್ನು ಹೊಂದಿರುವ ವ್ಯಕ್ತಿಗಳನ್ನು ಮಂಡಳಿಯ ಸದಸ್ಯರನ್ನಾಗಿ ಕೋ–ಆಫ್ಟ್ ಮಾಡಿಕೊಳ್ಳತಕ್ಕದ್ದು.

ಪರಂತು, ಹಾಗೆ ಕೋ–ಆಫ್ಟ್‌ರನ್ನಾಗಿ ನೇಮಕ ಮಾಡಿಕೊಂಡ ಸದಸ್ಯರ ಸಂಖ್ಯೆಯು (2)ನೇ ಉಪಪ್ರಕರಣದಲ್ಲಿ ನಿರ್ಧಿಷ್ಟ ಪಡಿಸಿದ ಗರಿಷ್ಠ ಸಂಖ್ಯೆಗೆ ಹೆಚ್ಚುವರಿಯಾಗಿ ಇಬ್ಬರನ್ನು ಮೀರತಕ್ಕದ್ದಲ್ಲ.

ಮತ್ತು ಪರಂತು, ಹಾಗೆ ಕೋ–ಆಫ್ಟ್ ರಾದಂಥಹವರು, ಅಂಥ ಸದಸ್ಯರಾಗಿ ಅವರ ಸಾಮರ್ಥ್ಯದಲ್ಲಿ, ಸಹಕಾರ ಸಂಘಗಳ ಯಾವುದೇ ಚುನಾವಣೆಯಲ್ಲಿ ಮತದಾನ ಮಾಡುವ ಹಕ್ಕನ್ನು ಹೊಂದಿರತಕ್ಕದ್ದಲ್ಲ ಅಥವಾ ಮಂಡಳಿಯ ಪದಾಧಿಕಾರಿಗಳಾಗಿ ಹಕ್ಕನ್ನು ಹೊಂದಿರತಕ್ಕದ್ದಲ್ಲ ಅಥವಾ ಮಂಡಳಿಯು ಪದಾಧಿಕಾರಿಯಾಗಿ ಚುನಾಯಿತರಾಗಲು ಅರ್ಹರಾಗಿರತಕ್ಕದ್ದಲ್ಲ.

ಅಲ್ಲದೆ ಪರಂತು, ಮೂವರು ಸದಸ್ಯರನ್ನು ಮೀರದ ಕಾರ್ಯನಿರ್ವಾಹಕ ನಿರ್ದೇಶಕರುಗಳು ಉಪವಿಧಿಗಳಿ ಗನುಸಾರವಾಗಿ ಮಂಡಳಿಯು ಸದಸ್ಯರಾಗಿರತಕ್ಕದ್ದು ಮತ್ತು ಅಂಥ ಸದಸ್ಯರುಗಳನ್ನು (2)ನೇ ಉಪಪ್ರಕರಣದಲ್ಲಿ ನಿರ್ಧಿಷ್ಟ ಪಡಿಸಿದ ನಿರ್ದೇಶಕರುಗಳ ಒಟ್ಟು ಸಂಖ್ಯೆಯ ಉದ್ದೇಶಕ್ಕಾಗಿ ಹೊರತು ಪಡಿಸತಕ್ಕದ್ದು.

ಅಲ್ಲದೇ ಪರಂತು, ವೃತ್ತಿಪರ ನಿರ್ದೇಶಕರು ಮತ್ತು ಕಾರ್ಯನಿರ್ವಾಹಕ ನಿರ್ದೇಶಕರುಗಳು ಮಂಡಳಿಯ ಸಭೆಗಳನ್ನು ನಡೆಸುವ ಕೋರಂಗೆ ಭಾಗವಾಗಿರತಕ್ಕದ್ದಲ್ಲ."

**ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 1997ರ ಕಲಂ.24(1)ರ 2ನೇ ಪರಂತುಕ ಈ ಕೆಳಕಂಡಂತೆ ಉಲ್ಲೇಖಿಸುತ್ತಿದೆ.**

"ಮತ್ತು ಪರಂತು, ಪ್ರತಿಯೊಂದು ಸಹಕಾರಿಯಲು ಬ್ಯಾಂಕಿಂಗ್, ವ್ಯವಸ್ಥಾಪನೆ, ಹಣಕಾಸು ನಿರ್ವಹಣೆಯಲ್ಲಿ ಅನುಭವ ವಿರುವ ಅಥವಾ ಸಹಕಾರಿಯು ಕೈಗೊಂಡ ಚಟುವಟಿಗೆಗಳಿಗೆ ಮತ್ತು ಉದ್ದೇಶಗಳಿಗೆ ಸಂಬಂಧಿಸಿದ ಇತರ ಯಾವುದೇ ಕ್ಷೇತ್ರದಲ್ಲಿ ಪರಿಣಿತಿಯನ್ನು ಹೊಂದಿರುವ ವ್ಯಕ್ತಿಗಳನ್ನು, ಅಂಥ ಸಹಕಾರಿಯು ಮಂಡಳಿಯ ಸದಸ್ಯರನ್ನಾಗಿ ಸಹಮತದಿಂದ (ಕೋಆಫ್ಟ್) ಸೇರಿಸಿಕೊಳ್ಳತಕ್ಕದ್ದು. ಹಾಗೆ ಸಹಮತದಿಂದ ಸೇರಿಸಿಕೊಂಡ ಸದಸ್ಯರು ಅಂತಹ ಸದಸ್ಯರ ಸ್ಥಾನ ಬಲದಿಂದ ಸಹಕಾರಿಯ ಯಾವುದೇ ಚುನಾವಣೆಯಲ್ಲಿ ಮತ ನೀಡುವ ಹಕ್ಕುವುಳ್ಳವನಾಗಿರತಕ್ಕದ್ದಲ್ಲ ಅಥವಾ ಮಂಡಳಿಯ ಯಾವುದೇ ಚುನಾವಣೆಯಲ್ಲಿ ಮತ ನೀಡುವ ಹಕ್ಕುಳ್ಳವನಾಗಿರತಕ್ಕದ್ದಲ್ಲ ಅಥವಾ ಮಂಡಳಿಯ ಪದಾಧಿಕಾರಿಗಳಾಗಿ ಚುನಾಯಿತರಾಗಲು ಅರ್ಹರಾಗಿರತಕ್ಕದ್ದಲ್ಲ.

ಮತ್ತು ಪರಂತು, ಹಾಗೆ ಸಹಮತದಿಂದ ಸೇರಿಸಿಕೊಂಡ ಸದಸ್ಯರ ಸಂಖ್ಯೆಯು (1)ನೇ ಉಪಪ್ರಕರಣ ನಿರ್ಧಿಷ್ಟ ಪಡಿಸಿದ ಇಪತ್ತೊಂದು ನಿರ್ದೇಶಕರಿಗೆ ಹೆಚ್ಚುವರಿಯಾಗಿ ಇಬ್ಬರನ್ನು ಮೀರತಕ್ಕದ್ದಲ್ಲ.

ಅಲ್ಲದೆ ಪರಂತು ಒಂದು ಸಹಕಾರಿಯ ಮೂರಕ್ಕೆ ಮೀರದ ಕಾರ್ಯನಿರ್ವಾಹಕ ನಿರ್ದೇಶಕರು (functional duties) ಸಹ ಅವಶ್ಯಕವಿದ್ದಲ್ಲಿ ಮಂಡಳಿಯ ಸದಸ್ಯರಾಗತಕ್ಕದ್ದು. ಹಾಗೂ (1)ನೇ ಉಪಪ್ರಕರಣದಲ್ಲಿ ನಿರ್ಧಿಷ್ಟ ಪಡಿಸಿದ ಒಟ್ಟು ನಿರ್ದೇಶಕರ ಸಂಖ್ಯೆಯನ್ನು ಎಣಿಸುವಾಗ ಅಂತಹ ಕಾರ್ಯಾನುಗುಣ ನಿರ್ದೇಶಕರನ್ನು ಹೊರತು ಪಡಿಸತಕ್ಕದ್ದು."

ಇದರ ಜೊತೆಗೆ ಭಾರತ ಸಂವಿಧಾನದ 97ನೇ ತಿದ್ದುಪಡಿಯನ್ನು 2011ರ ರೂಪಿಸಿ ಈ ಕೆಳಕಂಡಂತೆ ಅನುಚ್ಛೇದ 243 ZJ(3) ಈ ಕೆಳಕಂಡಂತೆ ಉಲ್ಲೇಖಿಸಿದೆ.

"ರಾಜ್ಯ ವಿಧಾನ ಮಂಡಳವು ರೂಪಿಸುವ ಕಾನೂನಿನಲ್ಲಿ ಬ್ಯಾಂಕಿಂಗ್, ವ್ಯವಸ್ಥಾಪನೆ ಮತ್ತು ಹಣಕಾಸು ನಿರ್ವಹಣೆಯಲ್ಲಿ ಅನುಭವವಿರುವ ಅಥವಾ ಸಹಕಾರ ಸಂಘವು ಕೈಗೊಂಡ ಚಟುವಟಿಕೆಗಳಿಗೆ ಮತ್ತು ಉದ್ದೇಶಗಳಿಗೆ ಸಂಬಂದಿಸಿದ ಇತರ ಯಾವುದೇ ಕ್ಷೇತ್ರದಲ್ಲಿ ಪರಿಣಿತಿಯನ್ನು ಹೊಂದಿರುವ ವ್ಯಕ್ತಿಗಳನ್ನು ಆಡಳಿತ ಸಮಿತಿಯ ಸದಸ್ಯರನ್ನಾಗಿ ಸಹಮತದಿಂದ ಸೇರಿಸಿಕೊಳ್ಳಲು ಅವಕಾಶ ಕಲ್ಪಿಸತಕ್ಕದ್ದು.

ಪರಂತು, ಹಾಗೆ ಸಹಮತದಿಂದ ಸೇರಿಸಿಕೊಂಡ ಸದಸ್ಯರ ಸಂಖ್ಯೆಯ ಖಂಡ (1)ರಲ್ಲಿ ನಿರ್ಧಿಷ್ಟ ಪಡಿಸಿದ ಇಪ್ಪತ್ತೊಂದು ನಿರ್ದೇಶಕರ ಜೊತೆಗೆ (ಹೆಚ್ಚುವರಿಯಾಗಿ) ಎರಡಕ್ಕೆ ಮೀರತಕ್ಕದ್ದಲ್ಲ.

ಮತ್ತು ಪರಂತು, ಹಾಗೆ ಸಹಮತದಿಂದ ಸೇರಿಸಿಕೊಂಡ ಸದಸ್ಯರ ಅಂತಹ ಸದಸ್ಯನ ಅಧಿಕಾರವುಳ್ಳವರಾಗಿ ಸಹಕಾರ ಸಂಘದ ಯಾವುದೇ ಚುನಾವಣೆಯಲ್ಲಿ ಮತ ನೀಡುವ ಹಕ್ಕುಳ್ಳವರಾಗಿರತಕ್ಕದ್ದಲ್ಲ. ಅಥವಾ ಆಡಳಿತ ಸಮಿತಿಯ, ಪದಾಧಿಕಾರಿಗಳಾಗಿ ಚುನಾಯಿತರಾಗಲು

ಅರ್ಹರಾಗಿರತಕ್ಕದ್ದಲ್ಲ.

ಮತ್ತು ಪರಂತು, ಒಂದು ಸಹಕಾರಿ ಸಂಘದ ಕಾರ್ಯಾನುಗುಣ ನಿರ್ದೇಶಕರು (functional duties) ಸಹ ಆಡಳಿತ ಸಮಿತಿಯ ಸದಸ್ಯರಾಗಿರತಕ್ಕದ್ದು ಹಾಗೂ ಖಂಡ (1)ರ ಮೊದಲ ಪರಂತುದಲ್ಲಿ ನಿರ್ದಿಷ್ಟ ಪಡಿಸಿದ ಒಟ್ಟು ನಿರ್ದೇಶಕರ ಸಂಖ್ಯೆಯನ್ನು ಎಣಿಸಿದಾಗ ಅಂತಹ ಸದಸ್ಯರನ್ನು ಹೊರಗಿಡತಕ್ಕದ್ದು."

ಬಹುರಾಜ್ಯ ಸಹಕಾರ ಸಂಘಗಳ ಕಾಯಿದೆ 2002ರ ಕಲಂ.41(3) ಪರಂತುಕ ಈ ಕೆಳಕಂಡಂತೆ ಇದೆ.

"Provided that the Board may coopt as members of the Board having experience in the field of Banking, Management, cooperative management and finance or specialisation in any other field relating to the objects and activities under taken by such, Multi State Cooperative Society provided further that the number of such coopted members shall not exceed two in addition to twenty one directions specified in this subsection.

4. The Coopted directors referred to in sub section (3) shall not have the right to vote in any election of the office bearers or be eligible to be elected as office bearers of the board.

5. The functional directors in a multi state cooperative society shall also be the members of the board and such directors shall be excluded for the purpose of counting the total number of directions specified in sub section (3)"

ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 1997 ರಲ್ಲಿ ವೃತ್ತಿಪರ ನಿರ್ದೇಶಕರ ಬಗ್ಗೆ ಸ್ಪಷ್ಟವಾಗಿ ನಿಗದಿ ಪಡಿಸಿರುವುದೇನೆಂದರೆ ಪ್ರತಿಯೊಂದು ಸಹಕಾರಿ/ಸಂಘ ಇಬ್ಬರಿಗೆ ಹೆಚ್ಚಿಲ್ಲದೆ ವೃತ್ತಿಪರ ನಿರ್ದೇಶಕರನ್ನು ಸೇರಿಸಿಕೊಳ್ಳತಕ್ಕದ್ದು ಎಂದು ಸ್ಪಷ್ಟವಾಗಿ ಅವಕಾಶ ಕಲ್ಪಿಸಿದೆ. ಆದರೆ ಬಹುರಾಜ್ಯ ಸಹಕಾರಿ ಕಾಯಿದೆಯಲ್ಲಿ ಸೇರಿಸಿಕೊಳ್ಳಬಹುದು ಎಂದಿದೆ. 97ನೇ ಸಂವಿಧಾನ ತಿದ್ದುಪಡಿಯಲ್ಲಿ ರಾಜ್ಯ ಸರ್ಕಾರಗಳು ವೃತ್ತಿಪರ ನಿರ್ದೇಶಕನ್ನು ಸೇರಿಸಿಕೊಳ್ಳಲು ಅವಕಾಶ ಕಲ್ಪಿಸತಕ್ಕದ್ದು ಎಂದು ಸೂಚಿಸಿದೆ. ಅಂದರೆ ಕರ್ನಾಟಕ ಸರ್ಕಾರ ತನ್ನ ಎರಡೂ ಕಾಯಿದೆಗಳಲ್ಲಿ ವೃತ್ತಿಪರ ನಿರ್ದೇಶಕರನ್ನು ತೆಗೆದುಕೊಳ್ಳತಕ್ಕದ್ದು ಎಂದು ಸ್ಪಷ್ಟವಾಗಿ ನಮೂದಿಸಿದೆ. ಆದ್ದರಿಂದ ಎರಡೂ ಕಾಯಿದೆಯಡಿ ನೋಂದಾವಣೆಯಾದ ಪ್ರತಿಯೊಂದು ಸಹಕಾರಿ/ಸಂಘ ವೃತ್ತಿಪರ ನಿರ್ದೇಶಕರ ಸೇರ್ಪಡೆ ಮಾಡಿಕೊಳ್ಳಲೇಬೇಕೆಂದು ಸ್ಪಷ್ಟವಾಗಿ ನಮೂದಿಸಿದೆ. ಆದರೆ ಬೆರಳೆಣಿಕೆಯಷ್ಟು ಸಹಕಾರಿ/ಸಂಘಗಳು ವ್ಯಕ್ತಿಪರ ನಿರ್ದೇಶಕರನ್ನು ಸೇರಿಸಿಕೊಂಡಿದೆ.

**ಕಾರ್ಯಾನುಗುಣ ನಿರ್ದೇಶಕರು :**

1959ರ ಕಾಯಿದೆಯಲ್ಲಿ ಉಪವಿಧಿಗಳಿಗನುಸಾರವಾಗಿ ಮೂವರಿಗೆ ಹೆಚ್ಚಿಲ್ಲದಂತೆ ಮಂಡಳಿಯ ಸದಸ್ಯರಾಗಿರತಕ್ಕದ್ದು. 1997ರ ಸೌಹಾರ್ದ ಕಾಯಿದೆ ಕಲಂ.24ರ ಕೊನೆಯ ಪರಂತುಕದಲ್ಲಿ ಮೂರಕ್ಕೆ ಮೀರದ ಕಾರ್ಯಾನುಗುಣ ನಿರ್ದೇಶಕರು ಸಹ ಅವಶ್ಯವಿದ್ದಲ್ಲಿ ಮಂಡಳಿ ಸದಸ್ಯರಾಗಿರತಕ್ಕದ್ದು ಎಂದಿದೆ. 97ನೇ ಸಂವಿಧಾನ ತಿದ್ದುಪಡಿಯ, ಒಂದು ಸಹಕಾರ ಸಂಘದ ಕಾರ್ಯಾನುಗುಣ ನಿರ್ದೇಶಕರೂ ಸಹ ಆಡಳಿತ ಮಂಡಳಿಯ ಸದಸ್ಯರಾಗಿರತಕ್ಕದ್ದು ಎಂದಿದೆ ಮತ್ತು ಬಹುರಾಜ್ಯ ಸಹಕಾರ ಸಂಘಗಳ ಕಾಯಿದೆ 2002 ರಲ್ಲಿ ಕಾರ್ಯಾನುಗುಣ ನಿರ್ದೇಶಕರು ಆಡಳಿತ ಮಂಡಳಿ ಸದಸ್ಯರಾಗಿರತಕ್ಕದ್ದು ಎಂದಿದೆ. ಸಂವಿಧಾನ ಮತ್ತು ಬಹು ರಾಜ್ಯ ಸಹಕಾರ ಸಂಘಗಳ ಕಾಯಿದೆಯಲ್ಲಿ, ಕಾರ್ಯಾನುಗುಣ ನಿರ್ದೇಶಕರು ಮಂಡಳಿ ಸದಸ್ಯರಾಗಿರತಕ್ಕದ್ದು ಎಂದಿದೆ ಸಹಮತದಿಂದ ಸೇರಿಸಿಕೊಳ್ಳಲು ಅವಕಾಶ ಕಲ್ಪಿಸಿಲ್ಲ.

ಈ ಮೇಲ್ಕಂಡ ನಾಲ್ಕು ಅವಕಾಶಗಳನ್ನು ಪರಿಶೀಲಿಸಿದಾಗ ವೃತ್ತಿಪರ ನಿರ್ದೇಶಕರಿಗೆ ಮಾತ್ರ ಸಹಮತದಿಂದ ಸೇರಿಸಿಕೊಳ್ಳಲು ಅವಕಾಶ ಇದೆ. ಅಂದರೆ ಆಡಳಿತ ಮಂಡಳಿ ಅಧಿಕಾರ ವೃತ್ತಿಪರ ನಿರ್ದೇಶಕರಿಗೆ ಮಾತ್ರ. ಆದರೆ ಕಾರ್ಯಾನುಗುಣ ನಿರ್ದೇಶಕರಿಗೆ ಸಂಬಂಧಪಟ್ಟಂತೆ ಸೌಹಾರ್ದ ಕಾಯಿದೆ ಹೊರತು ಪಡಿಸಿ (ಏಕೆಂದರೆ ಅದರಲ್ಲಿ "ಅವಶ್ಯಕವಿದ್ದರೆ" ಎಂದ ಪದ ಪ್ರಯೋಗವಾಗಿದೆ) ಮೂರು ಕಾಯಿದೆ/ಸಂವಿದಾನದಲ್ಲಿ ಕಾರ್ಯಾನುಗುಣ ನಿರ್ದೇಶಕರು, ಮಂಡಳಿ ನಿರ್ದೇಶಕರಾಗತಕ್ಕದ್ದು ಎಂಬ ಪದ ಪ್ರಯೋಗವಾಗಿದೆ. ಅಂದರೆ ಆಡಳಿತ ಮಂಡಳಿ ಕಾರ್ಯಾನುಗುಣ ನಿರ್ದೇಶಕರನ್ನು ಸಹಮತದಿಂದ ಸೇರಿಸಿಕೊಳ್ಳಲು ಅವಕಾಶವಿಲ್ಲ.

ಬಹುರಾಜ್ಯ ಸಹಕಾರ ಕಾಯಿದೆ 2002ಕ್ಕೆ 2023 ರಲ್ಲಿ (4–8–2023) ತಿದ್ದುಪಡಿ ತಂದ ನಂತರ ಮಾದರಿ ಉಪವಿಧಿಗಳನ್ನು ರೂಪಿಸಿದೆ. ಇದನ್ನು ರೂಪಿಸುವಾಗ ಸಹಕಾರಿಗಳು ತಮ್ಮ ಉಪವಿಧಿಗಳನ್ನು ಕಾನೂನು ಮತ್ತು ನಿಯಮಗಳನ್ನು ಪಾಲಿಸದೆ ರೂಪಿಸಬಹುದೆಂದು, ಕೇಂದ್ರ ಸರ್ಕಾರದ ಸಹಕಾರ ಇಲಾಖೆ ಮಾದರಿ ಉಪವಿಧಿಗಳನ್ನು ರೂಪಿಸಿದೆ. ಅದರಲ್ಲಿ ಉಪವಿಧಿ 32ರಲ್ಲಿ ಮಂಡಳಿ ರಚನೆಯಡಿ ಈ ಕೆಳಕಂಡಂತೆ ಕಾರ್ಯಾನುಗುಣ ನಿರ್ದೇಶಕರ ಬಗ್ಗೆ ಉಲ್ಲೇಖಿಸುತ್ತದೆ.

1) ಸಾಮಾನ್ಯ ಸಭೆ ಆಯ್ಕೆ ಮಾಡಿದ ನಿರ್ದೇಶಕರು ––––
2) ನಾಮ ನಿರ್ದೇಶನ ಮಾಡಿದ ನಿರ್ದೇಶಕರು ––––
3) ಮುಖ್ಯಕಾರ್ಯನಿರ್ವಾಹಕ ಮತ್ತು ಕಾರ್ಯಾನುಗುಣ ನಿರ್ದೇಶಕರು ಪದನಿಮಿತ್ತ ನಿರ್ದೇಶಕರು ––––
4) ವೃತ್ತಿಪರ ನಿರ್ದೇಶಕರು ––––

5) ಇಬ್ಬರಿಗೆ ಹೆಚ್ಚಿಲ್ಲದ ಪರಿಣಿತರು ಆಹ್ವಾನಿತರು ---- 2

6) ಕೇಂದ್ರ ಸರ್ಕಾರದ ಪ್ರತಿನಿಧಿ ----

ಅಂದರೆ ಕಾಯಿದೆಯಡಿ ರೂಪಿಸಿದಂತೆ ಕಾರ್ಯಾನುಗುಣ ನಿರ್ದೇಶಕರು ಎಂದರೆ ಸಹಕಾರ ಸಂಸ್ಥೆಯಲ್ಲಿ ಅಧಿಕಾರಿಗಳಾಗಿರುವ ನಿರ್ದೇಶಕರು ಮಾತ್ರ, ಅವರು ಹೊರಗಿನಿಂದ ಸೇರಿಸಿಕೊಳ್ಳುವ ವ್ಯಕ್ತಿಗಳಲ್ಲ.

ಕಾರ್ಯಾನುಗುಣ ನಿರ್ದೇಶಕರು ಯಾರು? ಒಂದು ಸಹಕಾರ ಸಂಘದ ವ್ಯವಹಾರ ದೊಡ್ಡ ಮಟ್ಟದಲ್ಲಿದ್ದು, ಅಂದರೆ AMUL, KMF, IFFCO, KRIBCO, ಇಂತಹ ಸಂಸ್ಥೆಗಳಲ್ಲಿ ವಿವಿಧ ವಿಭಾಗಳಿಂದ, ಪ್ರತಿ ವಿಭಾಗಕ್ಕೂ, ನಿರ್ದೇಶಕರನ್ನು ನೇಮಿಸಿಕೊಳ್ಳುತ್ತಾರೆ. ಇಂತಹ ಸಂಸ್ಥೆಗಳಲ್ಲಿ, ಆಡಳಿತ ಮಂಡಳಿ, ಸಂಘದ ವ್ಯವಹಾರ ಪರಿಶೀಲಿಸುವಾಗ ವಿಭಾಗಳ ಕಾರ್ಯನಿರ್ವಹಣೆ ಬಗ್ಗೆ ಚರ್ಚೆ ಮಾಡುವಾಗ ವಿವರಗಳ ಅವಶ್ಯಕತೆ ಇರುತ್ತದೆ ಮತ್ತು ಒಂದಕ್ಕಿಂತ ಹೆಚ್ಚು ಶಾಖೆಗಳು ವಿವಿಧ ಸ್ಥಳಗಳಲ್ಲಿ ಇದ್ದಾಗ ಅಂತಹ ಸಂಸ್ಥೆಗಳ ಮುಖ್ಯಸ್ಥರನ್ನು ಕಾರ್ಯಾನುಗುಣ ನಿರ್ದೇಶಕರು ಎಂದು ಕರೆಯಲಾಗುತ್ತಿದೆ. ಅಂತಹ ಹಿರಿಯ ಅಧಿಕಾರಿಗಳು ಉಪವಿಧಿಗಳನ್ವಯ ನಿರ್ದೇಶಕರಾಗಿ ಭಾಗವಹಿಸುತ್ತಾರೆ ಮತ್ತು ಸಹಮತದಿಂದ ಎಂಬ ಪದ ಪ್ರಯೋಗ ಮಾಡದೇ ಇರುವುದರಿಂದ ಎಲ್ಲಾ ವಿಭಾಗದ ಮುಖ್ಯಸ್ಥರು ಮಂಡಳಿ ಸದಸ್ಯರಾಗುತ್ತಾರೆ. ಆದರೆ ಕರ್ನಾಟಕದ ಎರಡೂ, ಕಾಯಿದೆಗಳಲ್ಲಿ ಮೂರಕ್ಕೆ ಮೀರದಂತೆ ಎಂದಿರುವುದರಿಂದ, ಅಂತಹ ಮೂವರು ಯಾರು ಎಂಬುದನ್ನು ಆಡಳಿತ ಮಂಡಳಿ ಸೂಚಿಸುವ ಅಧಿಕಾರ ಮಾತ್ರ ಇದೆ. ಆದ್ದರಿಂದ ಈ ಕಾರ್ಯಾನುಗುಣ ನಿರ್ದೇಶಕರು ಮಂಡಳಿ ಆಯ್ಕೆ ಮಾಡಿದ ವ್ಯಕ್ತಿಗಳಾಗತಕ್ಕಲ್ಲ ಮತ್ತು ಆ ಸಂಸ್ಥೆಯ ಅಧಿಕಾರಿಗಳಲ್ಲದ ಯಾವುದೇ ಹೊರಗಿನ ವ್ಯಕ್ತಿ ಕಾರ್ಯಾನುಗುಣ ನಿರ್ದೇಶಕನೆಂದು ಸಹ ಮತದಿಂದ ಸೇರಿಸಿಕೊಂಡು ನೇಮಕವಾಗತಕ್ಕದ್ದಲ್ಲ.

ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಕಾಯಿದೆಯ ಧ್ಯೇಯೋದ್ದೇಶಗಳನ್ನು ಅರ್ಥೈಸುವಾಗ ಅದರ ಮೂಲ ಉದ್ದೇಶಕ್ಕೆ ವಿರುದ್ಧವಾಗಿ ಮಾಡತಕ್ಕದ್ದಲ್ಲ. ಇದಕ್ಕೆ ಹಲವು ಲೇಖನಗಳಲ್ಲಿ ಈ ಉದಾಹರಣೆ ನೀಡಿದ್ದೇನೆ, ಓದುಗರ ಅವಗಾಹನೆಗಾಗಿ ಅದನ್ನು ಮತ್ತೆ ಉಲ್ಲೇಖಿಸುತ್ತಿದ್ದೇನೆ. ಒಂದು ರಾಜ್ಯ ಮಟ್ಟದ ಮಹಾಮಂಡಳಿ ಕಾಯಿದೆ ಮತ್ತು ಸಂವಿಧಾನದ ಮಿತಿಯನ್ನು ಯಾವ ರೀತಿ ತನ್ನ ಅನುಕೂಲಕ್ಕೆ ಉಪಯೋಗಿಸಿಕೊಳ್ಳುತ್ತಿದೆ ಎಂಬುದಕ್ಕೆ, ಮಂಡಳಿ ಸಂಖ್ಯೆಯನ್ನು 21ಕ್ಕೆ ಸೀಮಿತಗೊಳಿಸಿದೆ. ಕರ್ನಾಟಕದ ಎರಡೂ, ಕಾಯಿದೆಯಲ್ಲಿ ಮಂಡಳಿ ಸಂಖ್ಯೆಯನ್ನು 21ಕ್ಕೆ ಸೀಮಿತಗೊಳಿಸಿದೆ. ಆದರೆ ಈ ಮಹಾಮಂಡಳ, ಈ ಮಿತಿಯನ್ನು ಮೀರದಂತೆ ತೋರಿಸಿದೆ ಮಿತಿಗೊಳಿಸಿ, ನಿರ್ದೇಶಕರಿಗೆ ಸಿಗುವ ಎಲ್ಲಾ ಸೌಲತ್ತುಗಳನ್ನು ನೀಡುವುದಕ್ಕಾಗಿ ಆಡಳಿತ ಮಂಡಳಿ ಸದಸ್ಯರ ಸಂಖ್ಯೆಯನ್ನು 21ಕ್ಕೆ ಮಿತಿಗೊಳಿಸಿಕೊಂಡರೂ, ಮಂಡಳಿಯಲ್ಲಿ ವಿಶೇಷ ಆಹ್ವಾನಿತರೆಂದು ನಾಲ್ವರನ್ನು ಸೇರಿಸಿಕೊಂಡಿದೆ. ಇದರ ಜೊತೆಗೆ ಶಿಕ್ಷಣ ಸಲಹಾ ಸಮಿತಿ ರಚಿಸಿಕೊಳ್ಳಲು ಕಾಯಿದೆಯಲ್ಲಿ ಅವಕಾಶ ಇರುವುದನ್ನು ಉಪಯೋಗಿಸಿಕೊಂಡು ನಿರ್ದೇಶಕರ ಎಲ್ಲಾ ಸೌಲತ್ತು ನೀಡಲು 8 ಜನರ ಒಂದು ಶಿಕ್ಷಣ ಸಲಹಾ ಸಮಿತಿ ರಚಿಸಿದೆ. ಅದರಲ್ಲಿ ಶಿಕ್ಷಣ ತಜ್ಞರು ಒಬ್ಬರು ಮಾತ್ರ. ಉಳಿದ 7 ಸದಸ್ಯರು ಚಟುವಟಿಕೆಯಲ್ಲಿ ಭಾಗವಹಿಸಿದಂತೆ ಅಮಿಶ ಒಡ್ಡಿ, ಈ ಸಮಿತಿ ಸದಸ್ಯರನ್ನಾಗಿ ಮಾಡಿ ನಿರ್ದೇಶಕರಿಗೆ ಸಿಗುವ ಎಲ್ಲಾ ಸೌಲತ್ತುಗಳನ್ನು ನೀಡಲಾಗುತ್ತಿದೆ. ಇದರಲ್ಲಿ ಮತ್ತೊಂದು ಆಶ್ಚರ್ಯಕರ ವಿಷಯ ಎಂದು ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕ ಈ ಸಮಿತಿಯಲ್ಲಿ ಇಲ್ಲ. ಒಂದು ಸಹಕಾರ ಸಂಸ್ಥೆಯಲ್ಲಿ ಯಾವುದೇ ಸಮಿತಿಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಇರಲೇಬೇಕು. ಏಕೆಂದರೆ ಅವನೇ ಆ ನಡಾವಳಿಗಳನ್ನು ನೈಜವಾಗಿ, ಯಥಾವತ್ತಾಗಿ ದಾಖಲಿಸುವ ಅಧಿಕಾರ ಹೊಂದಿರುವ ವ್ಯಕ್ತಿ.

ಈ ಮೇಲ್ಕಂಡ ಉದಾಹರಣೆ ನೀಡಿದ ಉದ್ದೇಶ ಕಾನೂನನ್ನು ಮೀರಿ, ಮಂಡಳಿ ರಚಿಸಿ, (11) ವ್ಯಕ್ತಿಗಳಿಗೆ ನಿರ್ದೇಶಕರ ಸ್ಥಾನ ಮಾನವನ್ನು ನೀಡಿ ಮಹಾಮಂಡಳದ ಶಿಕ್ಷಣ ನಿಧಿ ಹಣವನ್ನು ವಯಿಸುತ್ತಿದೆ. ಮತ್ತೊಂದು ಆಶ್ಚರ್ಯವೆಂದರೆ, ಕಾನೂನನ್ನು ಜಾರಿ ಮಾಡುವ ಜವಾಬ್ದಾರಿಯಿರುವ ಸಹಕಾರ ಸಂಘಗಳ ನಿಬಂಧಕರೇ, ಈ ಮಹಾಮಂಡಳದ ನಿರ್ದೇಶಕರು.

ಅದೇ ರೀತಿ ಇತ್ತೀಚೆಗೆ ಕಾರ್ಯಾನುಗುಣ ನಿರ್ದೇಶಕರ ಬಗ್ಗೆ ಕೆಲವು ಸೌಹಾರ್ದ ಸಹಕಾರಿಗಳು, ಕಾರ್ಯಾನುಗುಣ ನಿರ್ದೇಶಕರು ನೇರವಾಗಿ ನೇಮಿಸಿಕೊಂಡರು, ನಿರ್ದೇಶಕರಿಗೆ ನೀಡುವ ಎಲ್ಲಾ ಸೌಲಭ್ಯಗಳನ್ನು ನೀಡುತ್ತಿದೆ. ಸ್ವಹಿತಾಸಕ್ತಿಗೆ ಇದು ಒಂದು ದೊಡ್ಡ ಉದಾಹರಣೆ. ಅಂದರೆ ಮಂಡಳಿ ಸದಸ್ಯರ ಒಲೈಸುವ ಒಂದು ವಿಧಾನವೇ ಹೊರಗಿನ ವ್ಯಕ್ತಿಗೆ, ಹಣಕಾಸು ಸೌಲಭ್ಯ ನೀಡಲು ಮತ್ತು ತಮ್ಮ ಪ್ರತಿಷ್ಠೆ ಹೆಚ್ಚಿಸಿಕೊಳ್ಳಲು ಮಾಡಿಕೊಂಡ ಒಂದು ನೇರ ಉದಾಹರಣೆ.

**ಉಪಸಂಹಾರ :**

ಸಹಕಾರಿ/ಸಂಘಗಳು ಕಾಯಿದೆಯಲ್ಲಿ ಸೂಚಿಸಿದಂತೆ ವೃತ್ತಿಪರ/ ಕಾರ್ಯಾನುಗುಣ ನಿರ್ದೇಶಕರ ಅವಶ್ಯಕತೆ ಇರುವುದನ್ನು ಗಮನಿಸಿ ಕಾಯಿದೆಯಲ್ಲಿ ಸೇರಿಸಿದೆ. ವೃತ್ತಿಪರ ನಿರ್ದೇಶಕರನ್ನು ಪ್ರತಿಯೊಂದು ಸಹಕಾರಿ/ಸಂಘವು ಸೇರಿಸಿಕೊಳ್ಳತಕ್ಕದ್ದು ಎಂದಿದ್ದರೂ ಅದನ್ನು ಪಾಲಿಸುತ್ತಿಲ್ಲ. ಇದಕ್ಕೆ ನಿಬಂಧಕರ ಕಛೇರಿ ಯಾವುದೇ ಕ್ರಮ ಜರುಗಿಸುತ್ತಿಲ್ಲ. ಕಾರ್ಯಾನುಗುಣ ನಿರ್ದೇಶಕರ ಬಗ್ಗೆ ಸಹಮತದಿಂದ ಎಂಬ ಪದ ಪ್ರಯೋಗ ನಾಲ್ಕು ಕಾಯಿದೆಯಡಿ ಸೇರಿಸಿಲ್ಲ. ಸಂಘದ ಹಿರಿಯ ಅಧಿಕಾರಿಗಳನ್ನು (ದೊಡ್ಡ ಸಂಸ್ಥೆಗಳಲ್ಲಿ ಮಾತ್ರ) ಸಹಕಾರಿ ಸಂಘದ ಕಾರ್ಯನುಗುಣ ನಿರ್ದೇಶಕರೆಂದು ಸೇರಿಸಿಕೊಳ್ಳಬೇಕೆ ಹೊರತು, ಮಾರು ಕಟ್ಟೆಯಿಂದ ಮಂಡಳಿ ಸದಸ್ಯರು ಪ್ರತಿಷ್ಠೆಗೆ ಸೇರಿಸಿಕೊಳ್ಳುವ ವ್ಯಕ್ತಿಗಳಲ್ಲಿ ಎಂಬುದನ್ನು ನಿಬಂಧಕರು ನಿಯಂತ್ರಿಸದೆ ಇದ್ದರೆ, ಮೇಲೆ ಹೇಳಿದ ಮಹಾಮಂಡಳದ ಪ್ರಕರಣದಂತೆ ಇನ್ನು ಮೂವರನ್ನು ಸೇರಿಸಿ, 11+3=14 ವ್ಯಕ್ತಿಗಳನ್ನು, ಸ್ವಹಿತಾಸಕ್ತಿಗೆ ಸೇರಿಸಿಕೊಂಡು 21+14=35 ನಿರ್ದೇಶಕರೆಂದೆ ಸಂವಿಧಾನದ ಮತ್ತು ಕಾಯಿದೆ ಆಶಯಕ್ಕೆ ಸೆಡ್ಡುಹೊಡೆದು ನಿಬಂಧಕರನ್ನು ಅಣಕಿಸುವುದಿಲ್ಲದೇ?

# ಸರಕಾರ ಮಾರ್ಗದರ್ಶಕನಾಗಲಿ- ನಿಯಂತ್ರಕನಲ್ಲ



– ಶ್ರೀ ಮನೋಹರ ಮಸ್ಕಿ, ಪ್ರಥಮ ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಹಾಗೂ ಮಾಜಿ ಶಾಸಕರು,

ದೇಶದಲ್ಲಿ ಸಹಕಾರಿ ಕ್ಷೇತ್ರ ನಿರೀಕ್ಷಿಸಿದಷ್ಟು ಪ್ರಗತಿ ಸಾಧಿಸಲಾಗಲಿಲ್ಲ ವಿಫಲವಾಗಿದೆ ಎಂದು ಯೋಜನಾ ಆಯೋಗದ (ಈಗಿನ ನೀತಿ ಆಯೋಗ) ಸಮಿತಿಗಳ ವರದಿಗಳು ಬಂದು, ಯೋಜನಾ ಆಯೋಗ ನೀಡಿದ ಮಾದರಿ ಸಹಕಾರಿ ಕಾಯ್ದೆಯಿಂದ ರೂಪುಗೊಂಡು ಬಂದದ್ದೇ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ. ಈ ವರ್ಷಾಂತ್ಯಕ್ಕೆ 25 ವರ್ಷಗಳನ್ನು ಪೂರೈಸುತ್ತಿದೆ. ಸಹಕಾರವನ್ನು "ಸರ್ಕಾರದ ವಿಸ್ತರಣೆ"ಯಾಗಿ ಅಲ್ಲ, "ಜನರ ಸ್ವಂತ ಸಂಸ್ಥೆ"ಯಾಗಿ ನೋಡುವ ದೃಷ್ಟಿಕೋನವೇ ಸೌಹಾರ್ದ ಕಾಯ್ದೆ ಒಂದು ಪರ್ಯಾಯ ದಾರಿಯಾಗಿ ಹೊರಹೊಮ್ಮಿತು

ಬದಲಾವಣೆಯ ಹರಿಕಾರವಾಗಿದ್ದ ಈ ಸೌಹಾರ್ದ ಕಾಯ್ದೆಯನ್ನು ಮತ್ತೆ 25 ವರ್ಷಗಳಷ್ಟು ಹಿಂದಕ್ಕೆ ಒಯ್ಯುವ ಪ್ರಯತ್ನಗಳು ಮತ್ತು ಸೌಹಾರ್ದ ಸಹಕಾರಿಗಳ ಪ್ರಗತಿಯ ಹೆಜ್ಜೆಗಳನ್ನು ಒಮ್ಮೆ ನೋಡಬೇಕಿದೆ.

ಸದಸ್ಯರ ಸ್ವಾಯತ್ತತೆ, ಸ್ವನಿಯಂತ್ರಣ, ಸ್ವಶಾಸನ ಎಂಬ ಮೂಲ ತತ್ವಗಳನ್ನು ಆಧಾರವಾಗಿಟ್ಟುಕೊಂಡು, ಇಂದು ರಾಜ್ಯದೆಲ್ಲೆಡೆ 6500 ಕ್ಕೂ ಅಧಿಕ ಸೌಹಾರ್ದ ಸಹಕಾರಿಗಳು ಸುಮಾರು 75 ಲಕ್ಷಕ್ಕೂ ಮೇಲ್ಪಟ್ಟ ಸದಸ್ಯರ ಜೀವನದಲ್ಲಿ ಆರ್ಥಿಕ ಸಾಮಾಜಿಕ ಬದಲಾವಣೆಯನ್ನು ತಂದಿವೆ. ವಾರ್ಷಿಕ ವ್ಯವಹಾರ 51ಸಾವಿರ ಕೋಟಿಯನ್ನು ದಾಟಿರುವುದು ಈ ಚಳುವಳಿಯ ಶಕ್ತಿ ಮತ್ತು ನಂಬಿಕೆಯನ್ನು ಪ್ರತಿಬಿಂಬಿಸುತ್ತದೆ. ಇಂತಹ ಸಂದರ್ಭದಲ್ಲಿ ಸೌಹಾರ್ದ ಚಳುವಳಿ ಬೆಳ್ಳಿ ಹಬ್ಬ ಆಚರಿಸುತ್ತಿರುವುದು ಹೆಮ್ಮೆಯ ಸಂಗತಿ, ಜೊತೆಗೆ ಗಂಭೀರ ಆತ್ಮಪರಿಶೀಲನೆಯ ಕ್ಷಣವೂ ಹೌದು.

ಸಾಮಾಜಿಕ ಸಾಂಸ್ಕೃತಿಕ ಮಟ್ಟದಲ್ಲೂ ಸೌಹಾರ್ದ ಚಳುವಳಿ ಹೊಸ ದಾಖಲೆಗಳನ್ನು ನಿರ್ಮಿಸಿದೆ. 2025 ಜನವರಿ 1ರಂದು ರಾಜ್ಯದ 2500 ಕ್ಕೂ ಹೆಚ್ಚು ಸ್ಥಳಗಳಲ್ಲಿ ಏಕಕಾಲದಲ್ಲಿ "ಸಹಕಾರಿ ಧ್ವಜಾರೋಹಣ" ನಡೆಸಿ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ಸ್ಥಾನ ಪಡೆದು, 25 ವರ್ಷಗಳ ಸಾಧನೆಯನ್ನು ಆಚರಿಸಿತು.

ಡಿಜಿಟಲೀಕರಣದ ಕ್ಷೇತ್ರದಲ್ಲಿ ಸೌಹಾರ್ದ ಬ್ಯಾಂಕುಗಳು ATM, RTGS, NEFT, IMPS, ಇಂಟರ್ನೆಟ್ ಬ್ಯಾಂಕಿಂಗ್, ಮೊಬೈಲ್ ಬ್ಯಾಂಕಿಂಗ್, ಕಾರ್ಡ್ ಸೇವೆಗಳು ಮುಂತಾದೆಲ್ಲ ಸೇವೆಯನ್ನು ಗ್ರಾಮ ನಗರಗಳಲ್ಲಿ ವಿಸ್ತರಿಸಿ, ಗ್ರಾಹಕಸ್ನೇಹಿ, ಪಾರದರ್ಶಕ ವ್ಯವಹಾರ ಮಾದರಿಯನ್ನು ನಿರ್ಮಿಸುತ್ತಿವೆ. ಇದರಿಂದ ಸದಸ್ಯತೆ, ಠೇವಣಿಗಳು, ಸಾಲ ಮತ್ತು ಲಾಭದಾರಿತ್ವ ಎಲ್ಲವೂ ಶಾಶ್ವತ ಏರಿಕೆಯನ್ನು ಕಂಡಿವೆ. ಗ್ರಾಮೀಣ ನಗರ ಆರ್ಥಿಕ ಚಟುವಟಿಕೆಗಳಿಗೆ ಈ ಚಳುವಳಿ ಎಷ್ಟು ಆಳವಾಗಿ ನಂಟಾಗಿದೆ ಎಂಬುದು ಸ್ಪಷ್ಟ.

ಸೌಹಾರ್ದ ಕಾಯ್ದೆಯ ಅಡಿಯಲ್ಲಿ ನೊಂದಣಿಯಾದ ಪ್ರಥಮ ಸಹಕಾರಿ ಸಂಸ್ಥೆಯೆಂದರೆ ಸುಕೋ ಬ್ಯಾಂಕ್. ಇದು ಹಳೆಯ ಸಹಕಾರ ಕಾಯ್ದೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಂಸ್ಥೆಯಾಗಿತ್ತು, ಸ್ವಯಂಪ್ರೇರಿತವಾಗಿ ಸೌಹಾರ್ದ ಕಾಯ್ದೆಗೆ ಪರಿವರ್ತನೆಯಾಯಿತು. ಈ ಪರಿವರ್ತನೆಯು ಕೇವಲ ಒಂದು ಸಹಕಾರಿ ಬ್ಯಾಂಕಿನ ನಿರ್ಧಾರವಲ್ಲ; ಇಡೀ ರಾಜ್ಯದ ಸಹಕಾರ ಕ್ಷೇತ್ರಕ್ಕೆ ದಾರಿ ತೋರಿಸಿದ ಒಂದು ಐತಿಹಾಸಿಕ ಹೆಜ್ಜೆಯಾಯಿತು. ಇದರ ಬಳಿಕ ಕೇವಲ 50ಕ್ಕಿಂತ ಹೆಚ್ಚು ಸಹಕಾರ ಸಂಸ್ಥೆಗಳು ಸೌಹಾರ್ದಕಾಯ್ದೆಯನ್ನು ಅಳವಡಿಸಿಕೊಳ್ಳಲು ಸಹ ಸುಕೋ ಬ್ಯಾಂಕ್ ಕೆಲಸ ಮಾಡಿತು. ಸೌಹಾರ್ದ ಸಹಕಾರಿ ಕಾಯ್ದೆ ಕಲಂ 53 ರಂತೆ 50 ಸೌಹಾರ್ದ ಸಹಕಾರಿ ಸಂಸ್ಥೆಗಳು ನೊಂದಣಿಯಾದ ನಂತರ ಸಂಯುಕ್ತ ಸಹಕಾರಿಯ ರಚನೆಯಾಗಿದೆ. ಉಪವಿಧಿಗಳನ್ನು ರಿಜಿಸ್ಟ್ರಾರರು ನೊಂದಣಿ ಮಾಡುತ್ತಾರೆ. ಇದರ ಉದ್ದೇಶ ಕಾಯ್ದೆಯಲ್ಲಿ ನಮೂದಿಸಲಾದ ಶಾಸನಬದ್ಧ ಕಾರ್ಯಚಟುವಟಿಕೆಗಳ ಜೊತೆಗೆ ಶಿಕ್ಷಣ, ತರಬೇತಿ ಮತ್ತು ಪ್ರಚಾರ. ಸ್ವಾಯತ್ತತೆ, ಸ್ವಯಂ ಆಡಳಿತ ಮತ್ತು ಸ್ವಯಂ ನಿಯಂತ್ರಣ ಇದರ ಧ್ಯೇಯ.

## ಇಪ್ಪತ್ತೈದು ವರ್ಷಗಳ ಸಾಧನೆಗಳು

ಕಳೆದ 25 ವರ್ಷಗಳಲ್ಲಿ ಸೌಹಾರ್ದ ಸಹಕಾರಿಗಳು ಸರ್ಕಾರದ ಅನುದಾನಗಳಿಲ್ಲದೆ, ರಾಜಕೀಯ ಆದೇಶಗಳಿಲ್ಲದೆ, ಸ್ಥಳೀಯ ಜನರ ಹಣವನ್ನು ಸ್ಥಳೀಯ ಜನರಿಗೇ ಸಾಲವಾಗಿ ನೀಡಿ ಒಂದು ಮೌನ ಕ್ರಾಂತಿಯನ್ನು ನಡೆಸಿವೆ. ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಸಣ್ಣ ವ್ಯಾಪಾರಿಗಳು, ಕೃಷಿಕರು, ಸೌಹಾರ್ದ ಸಹಕಾರಿಗಳ ಮೂಲಕ ಆರ್ಥಿಕ ಭದ್ರತೆ ಪಡೆದಿದ್ದಾರೆ. ಸಹಕಾರ ಸಂಸ್ಥೆಗಳು ಸರ್ಕಾರದ ಯೋಜನೆಗಳಾಗಿ ಅಲ್ಲ, ಜನರ ನಂಬಿಕೆಯ ಸಂಸ್ಥೆಗಳಾಗಿ ಬೆಳೆದವು. ಕೆಲವು ಸೌಹಾರ್ದ ಸಂಸ್ಥೆಗಳು ಜನರ ನಂಬಿಕೆಯನ್ನು ಹಾಳು ಮಾಡಿದ ಉದಾಹರಣೆಗಳು ಇವೆ

ಆದರೆ ಇತ್ತೀಚಿನ ವರ್ಷಗಳಲ್ಲಿ ಸರ್ಕಾರ ಮಾಡಿದ ಕೆಲವು ಕಾನೂನು ತಿದ್ದುಪಡಿಗಳು ಸೌಹಾರ್ದ ಕಾಯ್ದೆಯ ಮೂಲ ಸ್ವಭಾವವನ್ನೇ ಪ್ರಶ್ನಿಸುತ್ತಿವೆ. ರಿಜಿಸ್ಟ್ರಾರ್ ಅಧಿಕಾರ ವಿಸ್ತರಣೆ, ಠೇವಣಿಗಳ ಮೇಲೆ ಹೆಚ್ಚುವರಿ ಕಡ್ಡಾಯ ರಿಸರ್ವ್ ನಿಯಮಗಳು, ನಿಧಿ ಹೂಡಿಕೆಗಳ ಮೇಲಿನ ಕಠಿಣ ನಿಯಂತ್ರಣಗಳು ಸೌಹಾರ್ದ ಸಂಸ್ಥೆಗಳ ಸ್ವಾಯತ್ತ ನಿರ್ಧಾರ ಶಕ್ತಿಯನ್ನು ಕುಗ್ಗಿಸುವ ದಿಕ್ಕಿನಲ್ಲಿ ಸಾಗುತ್ತಿರುವುದು ಸ್ಪಷ್ಟವಾಗಿದೆ. ಇವುಗಳು ಸೌಹಾರ್ದ ಕಾಯ್ದೆಯ ಆಶಯಕ್ಕೆ ವಿರುದ್ಧವಾಗಿವೆ ಎಂಬ ಅಭಿಪ್ರಾಯ ವ್ಯಾಪಕವಾಗಿದೆ.

ಹಿಂದಿನ ಸಹಕಾರ ಸಚಿವರು ಸಾರ್ವಜನಿಕವಾಗಿ "ಬಹುತೇಕ ಸೌಹಾರ್ದ ಸಹಕಾರಗಳು ಮುಚ್ಚುವ ಸ್ಥಿತಿಯಲ್ಲಿವೆ", "ರಾಜ್ಯಮಟ್ಟದ ಫೆಡರೇಷನ್ ಅಗತ್ಯವಿಲ್ಲ", "ಸರ್ಕಾರದ ಮಧ್ಯಪ್ರವೇಶ ಅನಿವಾರ್ಯ"

ಎಂದು ಹೇಳಿರುವುದು ಈ ಆತಂಕವನ್ನು ಇನ್ನಷ್ಟು ಹೆಚ್ಚಿಸಿದೆ. ಪ್ರಶ್ನೆ ಏನೆಂದರೆ, ಎಷ್ಟು ಸೌಹಾರ್ದಗಳು ನಷ್ಟದಲ್ಲಿವೆ? ಅವುಗಳ ವೈಫಲ್ಯಕ್ಕೆ ಕಾರಣ ದುರ್ಬಲ ಆಡಳಿತವೇ, ಅಥವಾ ನಿರಂತರ ನೀತಿ ಒತ್ತಡವೇ? ಕೆಲವೇ ಸಂಸ್ಥೆಗಳ ವೈಫಲ್ಯಕ್ಕೆ ಇಡೀ ಚಳವಳಿಯನ್ನು ಹೊಣೆಮಾಡುವುದು ನ್ಯಾಯಸಮ್ಮತವೇ?

ಇಲ್ಲಿ ಕಾಣಿಸಿಕೊಳ್ಳುವುದು ವಾಸ್ತವಾಂಶಾಧಾರಿತ ನೀತಿ ಚರ್ಚೆಯಿಗಿಂತ ಹೆಚ್ಚು ರಾಜಕೀಯ ಅಭಿಪ್ರಾಯದ ನಿರ್ಮಾಣ. ಫೆಡರಲ್ ಕೋಪರೇಟಿವ್ ದುರ್ಬಲವಾದರೆ, ಪ್ರತ್ಯೇಕವಾಗಿ ಸೌಹಾರ್ದ ಸಹಕಾರಿಗಳು ಸರ್ಕಾರದ ಮುಂದೆ ಏಕಾಂಗಿಗಳಾಗುತ್ತವೆ. ಸದಸ್ಯರ ಹಿತ ರಕ್ಷಣೆಗೆ ಇರುವ ಒಟ್ಟುಗೂಡಿದ ವೇದಿಕೆ ನಾಶವಾಗುತ್ತದೆ. ಸ್ವಯಂ ನಿಯಂತ್ರಣದ ಬದಲು ಸರ್ಕಾರಿ ನಿಯಂತ್ರಣ ಬಲಗೊಳ್ಳುತ್ತದೆ. ಇದು ಸಹಕಾರ ಕ್ಷೇತ್ರವನ್ನು ಮತ್ತೆ 1959ರ ಯುಗದ ಹಿಂದಕ್ಕೆ ಕರೆದೊಯ್ಯುವ ಅಪಾಯವನ್ನು ಹೊಂದಿದೆ.

**ಸಮಸ್ಯೆ ಎಲ್ಲಿ ? ಪರಿಹಾರ ಚಿಂತಿಸಬಹುದೇ ?**

ಸೌಹಾರ್ದ ಸಹಕಾರಿಗಳ ಸಮಸ್ಯೆ ಸ್ವಾಯತ್ತತೆಯಲ್ಲ. ಸಮಸ್ಯೆ ಸ್ವಾಯತ್ತತೆಯನ್ನು ಬೆಂಬಲಿಸುವ ಸೂಕ್ತ, ಸ್ಪಷ್ಟ ಮತ್ತು ಜವಾಬ್ದಾರಿಯುತ ಗವರ್ನನ್ಸ್ ವ್ಯವಸ್ಥೆಗಳ ಕೊರತೆಯಲ್ಲಿ ಇದೆ. ಸ್ವಾಯತ್ತತೆ ಎಂದರೆ ನಿಯಂತ್ರಣವಿಲ್ಲದ ಸ್ವೇಚ್ಛೆ ಅಲ್ಲ; ಅದು ಸದಸ್ಯರ ಮುಂದೆ ಹೊಣೆಗಾರಿಕೆಯೊಂದಿಗೆ ಕಾರ್ಯನಿರ್ವಹಿಸುವ ಸ್ವತಂತ್ರತೆ. ಈ ಸೂಕ್ಷ್ಮ ಅಂತರವನ್ನು ಅರಿಯದೆ, ಸ್ವಾಯತ್ತತೆಯನ್ನೇ ಸಮಸ್ಯೆಯಾಗಿ ಚಿತ್ರಿಸುವುದು ತಪ್ಪಾದ ನಿರ್ಣಯಕ್ಕೆ ಕರೆದೊಯ್ಯುತ್ತದೆ.

ನಿಯಂತ್ರಣ ಅನಿವಾರ್ಯ. ಯಾವುದೇ ಹಣಕಾಸು ಸಂಸ್ಥೆಯಲ್ಲಿ ಠೇವಣಿದಾರರ ಹಣದ ರಕ್ಷಣೆ ಮೊದಲ ಆದ್ಯತೆಯಾಗಬೇಕು. ಆದರೆ ಈ ನಿಯಂತ್ರಣ ಮೇಲಿನಿಂದ ಹೇರಲಾದ (takeover) ಅಥವಾ ನೇರ ಸರ್ಕಾರಿ ಹಸ್ತಕ್ಷೇಪ ಆಗಬಾರದು. ಅಂಥ ಕ್ರಮಗಳು ಸೌಹಾರ್ದ ಸಹಕಾರಿಗಳ ಮೂಲ ಆತ್ಮವನ್ನೇ ಕುಗ್ಗಿಸುತ್ತವೆ. ಬದಲಾಗಿ, ನಿಯಂತ್ರಣವು ಸಂಸ್ಥೆಯ ಒಳಗಿನಿಂದಲೇ ಬಲಪಡಿಸುವ ರೀತಿಯಲ್ಲಿ ರೂಪುಗೊಳ್ಳಬೇಕು. ಸರ್ಕಾರದ ಪಾತ್ರ ಮಾರ್ಗದರ್ಶಕವಾಗಿರಬೇಕು; ನಿರ್ವಾಹಕವಾಗಬಾರದು.

ಇಲ್ಲಿ ಅಪಾಯ ಆಧಾರಿತ ನಿಯಂತ್ರಣ (Risk-based Regulation) ಮಹತ್ವ ಪಡೆದುಕೊಳ್ಳುತ್ತದೆ. ಎಲ್ಲ ಸೌಹಾರ್ದ ಸಹಕಾರಗಳನ್ನೂ ಒಂದೇ ತಟ್ಟೆಯಲ್ಲಿ ತೂಗುವುದರಿಂದ ಸಮಸ್ಯೆ ಪರಿಹಾರವಾಗದು. ಹಣಕಾಸು ಸ್ಥಿತಿ, ಆಡಳಿತ ಗುಣಮಟ್ಟ ಮತ್ತು ಅಪಾಯ ಮಟ್ಟವನ್ನು ಆಧರಿಸಿ, ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದಗಳಿಗೆ ಹೆಚ್ಚಿನ ಸ್ವಾತಂತ್ರ್ಯ ನೀಡಬೇಕು; ದುರ್ಬಲ ಸಂಸ್ಥೆಗಳ ಮೇಲೆ ಮಾತ್ರ ಹೆಚ್ಚುವರಿ ಮೇಲ್ವಿಚಾರಣೆ ಇರಬೇಕು. ಇದು ನಿಯಂತ್ರಣ ಮತ್ತು ಸ್ವಾಯತ್ತತೆಯ ನಡುವಿನ ಸಮತೋಲನಕ್ಕೆ ಸೂಕ್ತ ಮಾರ್ಗ. ಇಂತಹ ಅಗತ್ಯವಾದ ಬದಲಾವಣೆಗಳನ್ನು ಸೌಹಾರ್ದ ಕಾಯ್ದೆಯಲ್ಲಿ ಮಾಡದೆ, ಸರಕಾರ ಸಹಕಾರ ಇಲಾಖೆಗೆ ಹೆಚ್ಚು ಅಧಿಕಾರ ನೀಡುವ ಬದಲಾವಣೆಗಳನ್ನು ಮಾಡುವುದು ಸರಕಾರದ ಬದಲಾಗದ ಮತ್ತು ಅಧಿಕಾರ ಕೇಂದ್ರಿತ ಮನಸ್ಥಿತಿಯನ್ನು ಬಿಂಬಿಸುತ್ತದೆ

ಉದಾಹರಣೆಗೆ ಸ್ವತಂತ್ರ ಸಹಕಾರಿ ಓಂಬಡ್ಸ್ಮನ್ ವ್ಯವಸ್ಥೆ ತರುವ ಅಗತ್ಯವಿತ್ತು. ರಿಜಿಸ್ಟ್ರಾರ್‌ಗೆ ಅತಿಯಾದ ಅಧಿಕಾರ ಒಪ್ಪಿಸುವ ಬದಲು, ಠೇವಣಿದಾರರು ಮತ್ತು ಸದಸ್ಯರ ದೂರುಗಳಿಗೆ ವೇಗವಾಗಿ ಸ್ಪಂದಿಸುವ ಸ್ವತಂತ್ರ ವ್ಯವಸ್ಥೆ ರೂಪಿಸಬೇಕು. ಇದರಿಂದ ಆಡಳಿತದ ಮೇಲಿನ ವಿಶ್ವಾಸ ಹೆಚ್ಚುತ್ತದೆ ಮತ್ತು ಸರ್ಕಾರದ ನೇರ ಹಸ್ತಕ್ಷೇಪದ ಅಗತ್ಯ ಕಡಿಮೆಯಾಗುತ್ತದೆ.

ರಾಜ್ಯಮಟ್ಟದ ಸೌಹಾರ್ದಫೆಡರಲ್ ಕೋಪರೇಟಿವ್ ಪಾತ್ರವನ್ನು ಕಡಿಮೆಗೊಳಿಸುವ ಬದಲು, ಬಲವಾದ ಆಂತರಿಕ ಆಡಿಟ್ ಮತ್ತು ಅದರ ಅನುಷ್ಠಾನದ ಬಗ್ಗೆ ಸೂಕ್ತ ನಿಯಮ ಅಭಿವೃದ್ಧಿಪಡಿಸಬೇಕು. ಈ ಮೂಲಕ ಆಡಳಿತ ಮೌಲ್ಯಮಾಪನ ಮತ್ತು ಮುನ್ನೆಚ್ಚರಿಕೆ ಕ್ರಮಗಳನ್ನು ಜಾರಿಗೊಳಿಸಿದರೆ, ಸಮಸ್ಯೆಗಳು ಆರಂಭದಲ್ಲಿಯೇ ಗುರುತಿಸಿ ಸರಿಪಡಿಸಬಹುದು. ಇದರಿಂದ ಸರ್ಕಾರದ ಕಠಿಣ ಕ್ರಮಗಳಿಗೆ ಅವಕಾಶವೇ ಬರುವುದಿಲ್ಲ.

ಠೇವಣಿದಾರರ ರಕ್ಷಣೆಗೆ ಸರ್ಕಾರ ತಾನೇ ಅಧಿಕಾರ ಸ್ವಾಧೀನ ಪಡಿಸಿಕೊಳ್ಳುವ ಮಾರ್ಗವನ್ನು ಆಯ್ಕೆಮಾಡುವ ಬದಲು, ಸಹಕಾರಿ ಆಧಾರಿತ ಠೇವಣಿ ಭದ್ರತಾ ವ್ಯವಸ್ಥೆ ರೂಪಿಸುವುದು ಹೆಚ್ಚು ಸೂಕ್ತ. ಸಹಕಾರಗಳೇ ಸೇರಿ ನಿರ್ಮಿಸುವ ಠೇವಣಿ ಭದ್ರತಾ ನಿಧಿ ಅಥವಾ ವಿಮಾ ವ್ಯವಸ್ಥೆ, ಅಪಾಯ ಎದುರಾದಾಗ ಠೇವಣಿದಾರರಿಗೆ ರಕ್ಷಣೆ ನೀಡಬಹುದು. ಇದು ಸಹಕಾರದ ತತ್ವಕ್ಕೂ ಹೊಂದಿಕೆಯಾಗುತ್ತದೆ ಮತ್ತು ಸ್ವಾಯತ್ತತೆಯನ್ನೂ ಉಳಿಸುತ್ತದೆ.

ಸಾರಾಂಶವಾಗಿ ಹೇಳಬೇಕಾದರೆ, ಸೌಹಾರ್ದ ಸಹಕಾರಗಳಿಗೆ ಬೇಕಾಗಿರುವುದು ಸ್ವಾಯತ್ತತೆಯ ಕಡಿತವಲ್ಲ; ಸ್ವಾಯತ್ತತೆಯನ್ನು ಜವಾಬ್ದಾರಿಯುತವಾಗಿ ನಡೆಸುವ ಬಲವಾದ ವ್ಯವಸ್ಥೆಗಳು. ನಿಯಂತ್ರಣ ಮತ್ತು ಸ್ವಾತಂತ್ರ್ಯ ಪರಸ್ಪರ ವಿರೋಧಿಗಳಲ್ಲ; ಸರಿಯಾದ ವಿನ್ಯಾಸದಲ್ಲಿ ಅವೆರಡೂ ಒಂದೇ ಸಮಯದಲ್ಲಿ ಸಾಧ್ಯ. ಈ ಸಮತೋಲನವನ್ನು ಸಾಧಿಸುವುದೇ ಸೌಹಾರ್ದ ಸಹಕಾರ ಚಳವಳಿಯ ಮುಂದಿನ ಹಂತದ ಯಶಸ್ಸಿನ ಕೀಲಿಕೈ. ಈ ಬಗ್ಗೆ ಸೂಕ್ತ ಚರ್ಚೆ ರಾಜ್ಯ ಮಟ್ಟದಲ್ಲಿ ಮತ್ತು ಸರಕಾರೀ ಮಟ್ಟದಲ್ಲಿ ನಡೆಯದಿರುವುದು ದುರದೃಷ್ಟಕಾರ

ಸೌಹಾರ್ದ ಸಹಕಾರ ಚಳವಳಿ ಒಂದು ಕಾನೂನು ಸಮಸ್ಯೆಯಲ್ಲ; ಅದು ಒಂದು ವಿಚಾರ ಚಳವಳಿ. 25 ವರ್ಷಗಳ ನಂತರವೂ ಇದು ಚರ್ಚೆಯಲ್ಲಿದೆ ಎಂದರೆ, ಅದು ವಿಫಲತೆಯಲ್ಲ ಅದರ ಪ್ರಸ್ತುತತೆಯ ಸಾಕ್ಷಿ. ಸ್ವಾಯತ್ತತೆಯನ್ನು ಕುಗ್ಗಿಸಿ ಸಹಕಾರವನ್ನು ಉಳಿಸಲಾಗದು. ಸ್ವಾಯತ್ತತೆಯನ್ನು ಬಲಪಡಿಸಿದರೆ ಮಾತ್ರ ಸಹಕಾರ ಚಳವಳಿ ಜೀವಂತವಾಗಿರುತ್ತದೆ.

# “ಸೌಹಾರ್ದ ಫೆಡರಲ್ ಕೋ-ಆಪರೇಟಿವ್ @ 2025”



– ಶ್ರೀ ಶರಣಗೌಡ ಜಿ. ಪಾಟೀಲ, ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

ಕರ್ನಾಟಕ ರಾಜ್ಯದಲ್ಲಿ ಸೌಹಾರ್ದ ಸಂಯುಕ್ತ ಕಾಯ್ದೆ ಜಾರಿಗೆ ಬಂದು 25 ವರ್ಷಗಳು ಕಳೆದಿರುವುದು ತಮಗೆ ತಿಳಿದಿದೆ. ಹಾಗೆ ಸೌಹಾರ್ದ ಸಹಕಾರಿ ಕಾಯ್ದೆಯ ಸ್ವರೂಪದಂತೆ ದೇಶದ ಇನ್ನೂ 8 ರಾಜ್ಯಗಳಲ್ಲಿ (ಒಟ್ಟು 9) ಈ ರೀತಿಯ ಸ್ವಾಯತ್ತತೆ ಕಾಯ್ದೆಯ ಕೇಂದ್ರ ಸರ್ಕಾರದ ಮಾರ್ಗದರ್ಶನದಂತೆ ಜಾರಿಗೆ ಬಂದಿರುವುದು ಸಹಕಾರ ಚಳುವಳಿಗೆ ಒಂದು ಹೊಸ ಸ್ವರೂಪವನ್ನು ನೀಡಿದಂತಾಗಿದೆ ಎಂದರೆ ತಪ್ಪಾಗದು. ಆದರೆ ಕರ್ನಾಟಕದಲ್ಲಿ ಮಾತ್ರ “ಸೌಹಾರ್ದ” ಎಂಬ ನಾಮಾಂಕಿತವನ್ನು ವಿಶೇಷವಾಗಿ ಈ ಸ್ವಾಯತ್ತ ಕಾಯ್ದೆಗೆ ಸೇರಿಸಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ಎಂಬ ಹೆಸರನ್ನು ನೀಡಿರುವುದು ನಿಜಕ್ಕೂ ಸಹಕಾರಿಗಳಿಗೆ ಒಂದು ಪ್ರೋತ್ಸಾಹವನ್ನು ನೀಡಿದಂತಾಗಿದೆ ಮತ್ತು ಇದು ದೇಶದಲ್ಲಿಯೇ ವಿನೂತನವಾದ ಒಂದು ಹೆಸರನ್ನು ಕಾಯ್ದೆಗೆ ಕೊಟ್ಟಿದೆ. ಕೇವಲ ಕಾಯ್ದೆಗೆ ಮಾತ್ರ ವಿಶೇಷವಾದ ಹೆಸರನ್ನು ನೀಡದೇ ಸಹಕಾರಿ ಕಾಯ್ದೆಯಲ್ಲೂ ಸಹ ಕೆಲವೊಂದು ಹೊಸತನ ಮತ್ತು ವಿಶೇಷತೆಗಳನ್ನು ನೀಡಿದೆ. ಅದರಲ್ಲೂ ಇಡೀ ದೇಶದಲ್ಲಿಯೇ ವಿನೂತನವಾದ ಒಂದು ಕಾಯ್ದೆಯಲ್ಲಿನ ಪ್ರಾವಧಾನದಂತೆ ಸಹಕಾರಿಗಳಿಂದಲೇ ರಚಿತವಾದ ಒಂದು ಶಾಸನ ಬದ್ಧ ಸಂಸ್ಥೆಯನ್ನು ರಚನೆ ಮಾಡುವ ಅವಕಾಶ ಈ ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಿದೆ ಅದರ ಫಲವಾಗಿಯೇ 04.01.2002 ರಂದು ರಚನೆಗೊಂಡ ಸಹಕಾರಿ ಸಂಸ್ಥೆಯ (ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ) ಈ ಸಂಸ್ಥೆಯು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಕಾಯ್ದೆ ಕಲಂ 53ರಂತೆ ರಚನೆಗೊಂಡಿದೆ. ಇದರ ನೊಂದಣಿಯನ್ನು ಆಗಿನ ಸಹಕಾರಿಗಳ ನಿಬಂಧಕರಾದ ಟಿ. ವೈ. ನಯಾಜ್ ಅಹಮದ್ ಅವರು ನೊಂದಣಿಯನ್ನು ಮಾಡಿರುತ್ತಾರೆ. ಹಾಗೆಯೇ ಈ ಸಂಸ್ಥೆಯ ಮೊಟ್ಟ ಮೊದಲ ಉಪವಿಧಿಯನ್ನು ಸಹ ರಚನೆ ಮಾಡಿ ನೀಡಿರುತ್ತಾರೆ. ಈ ಸೌಹಾರ್ದ ಸಹಕಾರಿ ಕಾಯ್ದೆ ರಚನೆ, ಜಾರಿಗೆ ಶ್ರಮಿಸಿದ ಮತ್ತು ಸಂಯುಕ್ತ ಸಹಕಾರಿಯನ್ನು ಸಹ ರಚನೆಗೆ ಸಹಕರಿಸಿದ ಹಿರಿಯ ಸಹಕಾರಿಗಳಾದ ಸನ್ಮಾನ್ಯ ಶ್ರೀ ಎಸ್. ಎಸ್. ಪಾಟೀಲ್ (ಮಾನ್ಯ ಸಹಕಾರ ಮತ್ತು ಅರಣ್ಯ ಸಚಿವರು) ಮತ್ತು ಅಂದಿನ ಸಹಕಾರಿ ನಿಬಂಧಕರಾದ ಶ್ರೀ ಮಧು (ಐ.ಎ.ಎಸ್) ಹಾಗೂ ಅಪರ ನಿಬಂಧಕರಾಗಿ ಕಾರ್ಯನಿರ್ವಹಿಸಿದ ಶ್ರೀ ಸಿ. ಎನ್ ಪರಮಶಿವಮೂರ್ತಿ ಮತ್ತು ಅಶ್ವಥ್ ನಾರಾಯಣ್ ಇವರಿಗೂ ಸಹ ರಾಜ್ಯದ ಸಹಕಾರಿಗಳು ಅಭಿನಂದನೆಯನ್ನು ತಿಳಿಸುತ್ತಾರೆ. ಸಂಯುಕ್ತ ಸಹಕಾರಿಯು ಅಧಿಕೃತವಾಗಿ 04.01.2002 ರಂದು ನೊಂದಣಿಯಾದ ದಿನದಿಂದ ಅಂದಿನ ಸಹಕಾರಿಗಳ ಜಂಟಿ ನಿಬಂಧಕರಾದ (ಕಾನೂನು ಕೋಶ) ಶ್ರೀ ವೆಂಕಟ್ ರೆಡ್ಡಿ ಇವರು ಮೊದಲ ವ್ಯವಸ್ಥಾಪಕ ನಿರ್ದೇಶಕರಾಗಿ ಕಾರ್ಯವನ್ನು ನಿರ್ವಹಿಸಿದ್ದಾರೆ. ನಂತರ ನಿಯಮಾನುಸಾರವಾಗಿ ಚುನಾವಣೆ ನಡೆದು ಪ್ರಥಮ ಆಡಳಿತ ಮಂಡಳಿ ಅಧಿಕಾರವನ್ನು ವಹಿಸಿಕೊಳ್ಳುತ್ತದೆ. ಪ್ರಥಮ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಶ್ರೀ ಮನೋಹರ್ ಮಸ್ಕಿ ಉಪಾಧ್ಯಕ್ಷರಾಗಿ ಶ್ರೀ ಯು. ಹೆಚ್ ರಾಮಪ್ಪ ಅವಿರೋಧವಾಗಿ ಆಯ್ಕೆಯಾಗುತ್ತಾರೆ. ಅಂದಿನ ರಿಟರ್ನಿಂಗ್ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ ಸಹಾಯಕ ನಿಬಂಧಕರಾದ ಎಸ್. ಎನ್ ಅರುಣಕುಮಾರ್ ಇವರು ಸಹ ಸಂಯುಕ್ತ ಸಹಕಾರಿ ಕಾಯ್ದೆಗೆ ನಿರಂತರವಾಗಿ ಮಾರ್ಗದರ್ಶನ ಮಾಡುತ್ತಲಿದ್ದಾರೆ. ಪ್ರಥಮ ಆಡಳಿತ ಮಂಡಳಿ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ, ಶ್ರೀ ವಿಶ್ವನಾಥ ಚ. ಹಿರೇಮಠ, ಶ್ರೀ ಶ್ರೀಕಾಂತ ಹತನೂರಿ, ಶ್ರೀ ವಿಠ್ಠಲಗೌಡ ರುದ್ರಗೌಡ ಬಿರಾದಾರ, ಶ್ರೀ ಸಾಗರ ಚವಜ, ಶ್ರೀ ರವಿ ರಾಮಚಂದ್ರ ಯಲಿಗಾರ, ಶ್ರೀ ವಸಂತ್ ನಾಯ್ಕ,ಶ್ರೀ ಭಾಸ್ಕರ ಗಣಪತಿ ಹೆಗಡೆ ಕಾಗೇರಿ, ಶ್ರೀ ಹೆಚ್. ವಿ. ರಾಜೀವ, ಶ್ರೀ ಎಸ್. ಎನ್. ವಿಶ್ವನಾಥ, ಶ್ರೀ ಎಸ್.ಆರ್.ಸತೀಶ್ಚಂದ್ರ, ಶ್ರೀ ಎಂ. ಗೋಪಿಕೃಷ್ಣರಾವ್, ಶ್ರೀ ಶ್ರೀನಿವಾಸಮೂರ್ತಿ.ಎನ್, ಶ್ರೀ ಎನ್. ವಿ. ಶ್ರೀಧರ, ಶ್ರೀ ಉಮೇಶ್ ಉಪಾಧ್ಯ, ಶ್ರೀ ಎಸ್.ಆರ್.ಲಕ್ಷ್ಮೀಕಾಂತರೆಡ್ಡಿ, ಶ್ರೀ ಎಚ್.ಎಸ್.ನಾಗರಾಜ್, ಶ್ರೀ ಹಂಜಿ ಶಿವಸ್ವಾಮಿ, ಶ್ರೀ ಕಾಲಿನ್ ಟಿಮ್ಸ್ ಇವರು ಮಾರ್ಗದರ್ಶನ ನೀಡಿರುತ್ತಾರೆ.

ಸ್ವಾಯತ್ತತೆ, ಸ್ವಯಂ ಆಡಳಿತ, ಸ್ವಯಂ ನಿಯಂತ್ರಣ ಎಂಬ ಧ್ಯೇಯ ವಾಕ್ಯವು ಕೇವಲ ಸೌಹಾರ್ದ ಸಹಕಾರಿಗಳಿಗೆ ಅಷ್ಟೇ ಅಲ್ಲ ಸಂಯುಕ್ತ ಸಹಕಾರಿಯು ಅಳವಡಿಸಿಕೊಳ್ಳಬೇಕೆಂಬ ಸಂಕಲ್ಪದಂತೆ ಪ್ರಥಮ ಆಡಳಿತ

ಮಂಡಳಿಯು ಆಡಳಿತ ಮಂಡಳಿ ಸಭೆಯ ನಿರ್ಣಯದಂತೆ ಸಂಯುಕ್ತ ಸಹಕಾರಿಗೆ ನಿಯಮಾನುಸಾರ ಹೊಸ ವ್ಯವಸ್ಥಾಪಕ ನಿರ್ದೇಶಕರನ್ನು ಆಯ್ಕೆಮಾಡಿಕೊಂಡಿತು. (ಶ್ರೀ ಅನುಪದೇಶ್‌ಪಾಂಡೆ) ಸದರಿಯವರು ಪ್ರಾರಂಭದ ದಿನಗಳಲ್ಲಿ ಸಹಕಾರಿಗಳ ಮೇಲ್ವಿಚಾರಣೆಯನ್ನು ಬಹಳ ಮುತುವರ್ಜಿಯಿಂದ ಸಂಖ್ಯೆಗಳನ್ನು ಹೆಚ್ಚಿಸುವುದರ ಜೊತೆಗೆ ಅವುಗಳ ಮೇಲ್ವಿಚಾರಣೆಯನ್ನು ಸಹ ನಡೆಸಬೇಕಾದ ಅಗತ್ಯತೆ ಇತ್ತು. ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ನೊಂದಣಿಗೊಂಡ ಸಹಕಾರಿಗಳಿಗೆ ನಿರಂತರ ತರಬೇತಿ ನೀಡುವ ಅಗತ್ಯತೆ ಇತ್ತು. ಸಂಯುಕ್ತ ಸಹಕಾರಿಯು ಮಾರ್ಗದರ್ಶಕ ಸಂಸ್ಥೆಯಾಗಿ ಅನೇಕ ಸುತ್ತೋಲೆಗಳನ್ನು ಹೊರಡಿಸುವ ಅಗತ್ಯತೆ ಇತ್ತು. ನಂತರದ ದಿನಗಳಲ್ಲಿ ಸಂಯುಕ್ತ ಸಹಕಾರಿಯ ರಥವನ್ನು ಮಾನ್ಯ ಅಧ್ಯಕ್ಷರಾಗಿ ಶ್ರೀ ವಿಶ್ವನಾಥ್ ಚ. ಹಿರೇಮಠ, ಎಸ್. ಆರ್. ಸತೀಶ್ ಚಂದ್ರ, ಶ್ರೀ ಗುರುನಾಥ ಜ್ಯಾಂತಿಕರ, ಶ್ರೀ ಹೆಚ್. ವಿ. ರಾಜೀವ್ (ಪ್ರ), ಬಿ. ಹೆಚ್. ಕೃಷ್ಣರೆಡ್ಡಿ ಕಾರ್ಯವನ್ನು ನಿರ್ವಹಿಸಿರುತ್ತಾರೆ.

ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ಸಂಯುಕ್ತ ಸಹಕಾರಿಗೆ ಪ್ರತ್ಯೇಕವಾದಂತಹ ಅಧ್ಯಾಯವನ್ನು ರಚಿಸಿ ಸಂಯುಕ್ತ ಸಹಕಾರಿಯು ನಿರ್ವಹಿಸಬೇಕಾದ ಜವಾಬ್ದಾರಿ, ಕರ್ತವ್ಯ ಹಾಗೂ ಅಧಿಕಾರಿಗಳ ಬಗ್ಗೆ ವಿವರವಾಗಿ ತಿಳಿಸಿದೆ. ಸಂಯುಕ್ತ ಸಹಕಾರಿಗೆ ಪ್ರಾರಂಭದಲ್ಲಿ ಚುನಾವಣೆ ಸೇರಿದಂತೆ ಹೆಚ್ಚಿನ ಅನುಯಾಯಿಕ ಅಧಿಕಾರ ಹೊಂದಿದ ಕರ್ತವ್ಯಗಳನ್ನು ನಿರ್ವಹಿಸಲು ಕಾಯ್ದೆಯಲ್ಲಿ ಅಧಿಕಾರ ಹೊಂದಿತು. ನಂತರದ ಕಾಯ್ದೆ ತಿದ್ದುಪಡಿಗಳಲ್ಲಿ ಕೆಲವೊಂದು ಪ್ರಮುಖ ಜವಾಬ್ದಾರಿಗಳನ್ನು/ಕರ್ತವ್ಯಗಳನ್ನು ಸರ್ಕಾರ ಹಿಂದೆಪಡೆದಿರುತ್ತದೆ ಇದು ಸಂಯುಕ್ತ ಸಹಕಾರಿಯ ಅಸ್ಥಿತ್ವವನ್ನು ಕಡಿಮೆ ಮಾಡಿದಂತಾಗುತ್ತದೆ.

ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿಗಳ ಮಿತ್ರನಾಗಿ, ತತ್ವಜ್ಞಾನಿಯಾಗಿ ಮತ್ತು ಮಾರ್ಗದರ್ಶಕನಾಗಿ ಆಗಿ ಕಾರ್ಯನಿರ್ವಹಿಸುವುದರ ಜೊತೆಗೆ ಸಹಕಾರಿಗಳಿಗೆ ಹೊಸ ಹೊಸ ಆಯಾಮಗಳನ್ನು ಪರಿಚಯಿಸುವ ಮಾತೃ ಸಂಸ್ಥೆಯಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ. (E-stamping, Souhardha Court, CSC, Software Empanelment, etc.,)

ಸೌಹಾರ್ದ ಸಹಕಾರಿಗಳ ಹಿತಾಸಕ್ತಿಯನ್ನು ಕಾಪಾಡಲು ಸಂಯುಕ್ತ ಸಹಕಾರಿಯು ಸದಾ ಕಾರ್ಯನಿರ್ವಹಿಸುತ್ತದೆ. ಈ ಹಿಂದೆ ಸೌಹಾರ್ದ ಸಹಕಾರಿಗಳು ಸಹಕಾರಿ ಸಂಘಗಳಲ್ಲ ಎಂದು ಆದಾಯ ತೆರಿಗೆ ಇಲಾಖೆಯು ಆದೇಶ ಮಾಡಿದ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯು ಗೌರವ ಉಚ್ಛನ್ಯಾಯಾಲಯದ ಮೊರೆ ಹೋಗಿ ಸೌಹಾರ್ದ ಸಹಕಾರಿಗಳು ಸಹ ಸಹಕಾರ ತತ್ವಗಳನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸುವ ಸಹಕಾರ ಸಂಘಗಳೇ ಎಂದು ವಾದವನ್ನು ಮಂಡಿಸಿ ಸಹಕಾರಿಗಳಿಗೆ ಸಹಾಯ ಅಸ್ತವನ್ನು ನೀಡಿದೆ. ಅಲ್ಲದೇ ರಾಜ್ಯ ಸರ್ಕಾರವು ಸೌಹಾರ್ದ ಸಹಕಾರಿ ಕಾಯ್ದೆಗೆ ಮೀರಿ ಸಹಕಾರಿಗಳು ನೀಡುವ ಸಾಲದ ಬಡ್ಡಿದರಗಳನ್ನು ಸಂಗ್ರಹಿಸುವ ಠೇವಣಿಗಳಿಗೆ ನೀಡುವ ಬಡ್ಡಿದರಗಳನ್ನು ನಿಗದಿಪಡಿಸಿ ಸರ್ಕಾರದ ಆದೇಶದ ವಿರುದ್ಧವೂ ಸಹ ಗೌರವ ಉಚ್ಛ ನ್ಯಾಯಾಲಯದಲ್ಲಿ ಪ್ರಶ್ನಿಸಿ ಪರಿಹಾರವನ್ನು ನೀಡಿದೆ. ಈ ರೀತಿಯಾಗಿ ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿಗಳ ಮಾತೃ ಸಂಸ್ಥೆಯಾಗಿ "ಸಹಕಾರಿಗಳಿಂದಲೇ ಸಹಕಾರಿಗಳಿಗಾಗಿ ಸಹಕಾರಿಗಳಿಗೋಸ್ಕರ" ಎಂಬಂತೆ ಕಾರ್ಯನಿರ್ವಹಿಸುತ್ತಿದೆ. ಈ ರೀತಿಯ ಶಾಸನ ಬದ್ಧ ಸಹಕಾರಿ ಸಂಸ್ಥೆಗೆ 04.01.2026ಕ್ಕೆ 25 ವರ್ಷಗಳು ಆಗುವ ಹಿನ್ನೆಲೆಯಲ್ಲಿ ಕೆಲವು ವಿಷಯಗಳನ್ನು ಸಹಕಾರಿಗಳೊಂದಿಗೆ ಹಂಚಿಕೊಂಡಿದೆ.

## ಸಂಯುಕ್ತ ಸಹಕಾರಿಯ ಮುಂಬರುವ ತರಬೇತಿ ಕಾರ್ಯಕ್ರಮಗಳು

1. ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ 2 ದಿನಗಳ ಉನ್ನತ ಮಟ್ಟದ ತರಬೇತಿ
2. ಸಂಪನ್ಮೂಲ ವ್ಯಕ್ತಿಗಳ ಸಭೆ
3. ಆಡಳಿತ ಅಭಿವೃದ್ಧಿ ಪರಿಣಿತಿ ತರಬೇತಿ

**ಬೆಂಗಳೂರು** : ದಿನಾಂಕ 20.12.2025ರಂದು ಬೆಂಗಳೂರು ಪ್ರಾಂತದ ಸಹಕಾರ ಸಂಘಗಳ ನೂತನ ಜಂಟಿ ನಿಬಂಧಕರಾಗಿ ಅಧಿಕಾರ ಸ್ವೀಕರಿಸಿದ ಶ್ರೀ ವೆಂಕಟೇಶ್ ರವರಿಗೆ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು ಹೂಗುಚ್ಛ ನೀಡಿ ಸ್ವಾಗತಿಸಿದರು.

ಸ್ವಾಭಿಮಾನಿ ಸಹಕಾರಿ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 46

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

**ಶಾಸನಬದ್ಧ ಸಹಕಾರಿ ಸಂಸ್ಥೆ**

## ಸಂಯುಕ್ತ ಸಹಕಾರಿ ರಜತ ಮಹೋತ್ಸವದ, ಸೌಹಾರ್ದ ಸಹಕಾರಿ ದಿನಾಚರಣೆಯ ಹಾಗೂ ನೂತನ ವರ್ಷ 2026ರ ಹಾರ್ದಿಕ ಶುಭಾಶಯಗಳು

### ಆಡಳಿತ ಮಂಡಳಿ ಸದಸ್ಯರು


ಜಿ. ನಂಜನಗೌಡ
ಅಧ್ಯಕ್ಷರು


ಎ. ಆರ್. ಪ್ರಸನ್ನಕುಮಾರ್
ಉಪಾಧ್ಯಕ್ಷರು


ಬಿ. ಎಚ್. ಕೃಷ್ಣಾರೆಡ್ಡಿ
ನಿರ್ದೇಶಕರು


ಗುರುನಾಥ ಜ್ಯಾಂತಿಕರ
ನಿರ್ದೇಶಕರು


ಜಗದೀಶ ಕವಟಗಿಮಠ
ನಿರ್ದೇಶಕರು


ಗುರನಗೌಡ ಪಾಟೀಲ
ನಿರ್ದೇಶಕರು


ಆರ್. ತಿಮ್ಮಯ್ಯಶೆಟ್ಟಿ
ನಿರ್ದೇಶಕರು


ಬಿ. ಎಸ್. ಗುಂಡುರಾವ್
ನಿರ್ದೇಶಕರು


ಮಂಜುನಾಥ ಎಸ್. ಕೆ.
ನಿರ್ದೇಶಕರು


ಜಿ. ಶ್ರೀಧರ
ನಿರ್ದೇಶಕರು


ಕೆ. ಶಿವಲಿಂಗಪ್ಪ
ನಿರ್ದೇಶಕರು


ಭಾರತಿ ಜಿ. ಭಟ್
ನಿರ್ದೇಶಕರು


ಶೈಲಜಾ ತಪಲಿ
ನಿರ್ದೇಶಕರು


ಮಲ್ಲಿಕಾರ್ಜುನ ಅಜ್ಜಪ್ಪ ಹೊರಕೇರಿ
ನಿರ್ದೇಶಕರು


ಎಂ. ಆರ್ ಪ್ರಭುದೇವ್
ನಿರ್ದೇಶಕರು


ಹೆಚ್. ಜಿ ಹನುಮಂತಶೆಟ್ಟಿ
ನಿರ್ದೇಶಕರು


ರಘುರಾಮ ರೆಡ್ಡಿ
ನಿರ್ದೇಶಕರು


ವಿಜಯ್ ಸಿ. ಪಿ.
ನಿರ್ದೇಶಕರು


ಮೋಹನದಾಸ ಜಿ. ನಾಯಕ್
ನಿರ್ದೇಶಕರು


ಸಂಜೀವ ಮಹಾಜನ
ವೃತ್ತಿಪರ ನಿರ್ದೇಶಕರು


ಮಹದೇವಸ್ವಾಮಿ
ವೃತ್ತಿಪರ ನಿರ್ದೇಶಕರು


ಶರಣಗೌಡ ಜಿ. ಪಾಟೀಲ
ವ್ಯವಸ್ಥಾಪಕ ನಿರ್ದೇಶಕರು

**ಕೇಂದ್ರ ಕಛೇರಿ :** "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055 ದೂ : 080–23378375–80, 23474408, 23573291

**ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ :** "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು ದೂ: 080–23449933/34

**ಇ–ಸ್ಟಾಂಪಿಂಗ್ ವಿಭಾಗ :** "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055

**ಬೆಂಗಳೂರು ಪ್ರಾಂತೀಯ ಕಛೇರಿ :** "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055 ದೂ: 080–23525546.

**ಮೈಸೂರು ಪ್ರಾಂತೀಯ ಕಛೇರಿ :** ಶಂಕರ ಮತ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299

**ಬೆಳಗಾವಿ ಪ್ರಾಂತೀಯ ಕಛೇರಿ :** #1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.

**ಕಲಬುರಗಿ ಪಾಂತೀಯ ಕಛೇರಿ :** # 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003